

ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ

ಯಕ್ಷಗಾನ ಪ್ರಸಂಗಸಂಪುಟ

(ಭಾಗ ಎರಡು)

ಶಿರೂರು ಫಣಿಯಪ್ಪಯ್ಯ ವಿರಚಿತ
ಶ್ರೀ ಕೃಷ್ಣ ಗಾರುಡಿ
ಮಹೇಂದ್ರ ವಿಜಯ





ಹಟ್ಟಿಯಂಗಡಿ ರಾಮಭಟ್ಟ ವಿರಚಿತ
ಬಿಲ್ಲಹಬ್ಬ ಕಂಸವಧೆ
ರತ್ನಪುರದ ರಾಮ ವಿರಚಿತ
ಮೂಲಕಾಸುರ ಕಾಳಗ

ಸಂಪಾದಕರು:
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್

ಪ್ರಕಾಶಕರು:
ಫಣಿಗಿರಿ ಪ್ರತಿಷ್ಠಾನ ಶಿರೂರು

ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ

ಫಣಿಗಿರಿ ಯಕ್ಷಸಂಪುಟ

ಸಂಪಾದಕರು

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಪ್ರಕಾಶಕರು

ಫಣಿಗಿರಿ ಪ್ರತಿಷ್ಠಾನ

ಶಿರೂರು, ಬೈಂದೂರು ತಾಲೂಕು

ಉಡುಪಿ ಜಿಲ್ಲೆ– 576228

'Phanigiri Yaksha Samputa'

(Yakshagana Prasangas composed and collected
by Late Shiroor Phaniyappayya and
Edited by Dr. Kabbinale Vasantha Bharadwaj,
and
Published by Phanigiri Pratishtana, Shiroor,
Udupi Dist. Karnataka-576228.
(Mob: 94483 53910).

Year of Publication: 2023

Pages: 313

Price: Rs. : 300/-

Paper Used : 70 gsm Maplitho

Printed at :
Techfiz Inc.,
60/46/2, 10th B Main,
First Block, Jayanagar, Bengaluru-560011

ಸಂಪಾದಕೀಯ

ಯಕ್ಷಗಾನ ಪ್ರಸಂಗಗಳನ್ನು ಮುದ್ರಿಸುವ ಬಗೆಗೆ ಮೊದಲು ಆಲೋಚಿಸಿದವರು ಮಂಗಳೂರಿನ ಬಾಸೆಲ್ ಮಿಷನ್ನಿನವರು. ಗೇರುಸೊಪ್ಪೆ ಶಾಂತಪ್ಪಯ್ಯನವರ 'ರಾವಣದಿಗ್ವಿಜಯ' ಅವರಿಂದ 1848ರಲ್ಲಿ ಕಲ್ಲಚ್ಚಿನಲ್ಲಿ ಮುದ್ರಿತವಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಬೆಂಗಳೂರಿನ ಕೆಲವು ಪ್ರಕಾಶಕರು ಯಕ್ಷಗಾನಪ್ರಸಂಗಗಳ 'ಬಾಜಾರುಪ್ರತಿ'ಗಳನ್ನು ಮುದ್ರಿಸಿದರೆಂದು ತಿಳಿದುಬರುತ್ತದೆ. ಉಡುಪಿಯ ಪಾವಂಜೆ ಗುರುರಾವ್ ಅವರು 'ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ'ದ ಮೂಲಕ (1927–2002) ನೂರಾರು ಪ್ರಸಂಗಗಳನ್ನು ಪ್ರಕಟಿಸಿದ್ದಾರೆ. ದಾಸಸಾಹಿತ್ಯದ ಸಂಗ್ರಹಕಾರ್ಯದ ಜೊತೆಜೊತೆಗೇ ಅವರು ಯಕ್ಷಗಾನ ಪ್ರಸಂಗಗಳ ಹಸ್ತಪ್ರತಿಯನ್ನು ಸಂಪಾದಿಸಿ ಮುದ್ರಿಸುವ ಬಹುದೊಡ್ಡ ಅಭಿಯಾನವನ್ನು ಆರಂಭಿಸಿದವರು. ಅವರ ಈ ಮಹತ್ಕಾರ್ಯಕ್ಕೆ ಕಡಂದಲೆ ರಾಮರಾಯರಂತಹ ಕೆಲವು ಮಹನೀಯರು ನೆರವಾದರೆಂಬುದೂ ಗಮನಾರ್ಹ. ಈ ಐತಿಹಾಸಿಕ ಪ್ರಯತ್ನಗಳಿಂದಲೇ ಇಂದು ನಮ್ಮ ನಡುವೆ ನೂರಾರು ಪ್ರಸಂಗಗಳು ಉಳಿದುಕೊಂಡಿವೆ ಎಂಬುದನ್ನು ಮರೆಯಬಾರದು. ಕುಕ್ಕಿಲ ಕೃಷ್ಣಭಟ್ಟರು ಸಂಪಾದಿಸಿದ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ 'ಪಾರ್ತಿಸುಬ್ಬನ ಯಕ್ಷಗಾನಗಳು' (1975) ಆಧುನಿಕ ಸಂಪಾದನವಿಧಾನದಿಂದ ಮೂಡಿಬಂದ ಇನ್ನೊಂದು ಮಹತ್ತರ ಹೆಜ್ಜೆ. ಅನಂತರದಲ್ಲಿ ಮಂಗಳೂರು ವಿ.ವಿ, ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿ, ಉಡುಪಿಯ ಯಕ್ಷಗಾನ ಕೇಂದ್ರ, ಮಣೂರಿನ ಸಂಯಮಂ ಪ್ರಕಾಶನ ಮುಂತಾದ ಸಂಸ್ಥೆಗಳು ಮಹತ್ವದ ಪ್ರಸಂಗಗಳನ್ನು ಪ್ರಕಟಿಸಿವೆ. ಇತ್ತೀಚೆಗೆ ದಿ॥ ಶಿರೂರು ಫಣಿಯಪ್ಪಯ್ಯನವರ ಸ್ಮರಣಾರ್ಥ ಸಂಸ್ಥಾಪಿತವಾದ 'ಫಣಿಗಿರಿ ಪ್ರತಿಷ್ಠಾನ'ವೂ ಪ್ರಮುಖ ಯಕ್ಷಗಾನಕೃತಿಗಳನ್ನು ಪ್ರಕಟಿಸುವ ಸ್ತುತ್ಯರ್ಹಪ್ರಯತ್ನವನ್ನು ಆರಂಭಿಸಿದೆ. ಈಗಾಗಲೇ 'ಮಾನಸಚರಿತ್ರೆ'ಯಂತಹ ಸಾಂಸ್ಕೃತಿಕಮೌಲ್ಯದ ಕೃತಿಯನ್ನು ಪ್ರಕಟಿಸಿ, ಶಿರೂರು ಫಣಿಯಪ್ಪಯ್ಯ ವಿರಚಿತ ಪ್ರಸಂಗಗಳ ಒಂದು ಸಂಪುಟವನ್ನೂ ಹೊರತಂದಿದೆ. ಇದೀಗ ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಅವರ ಸಂಗ್ರಹದ ತಾಡವಾಲೆ/ ಹಸ್ತಪ್ರತಿಗಳಲ್ಲಿರುವ ನಾಲ್ಕು ಪ್ರಸಂಗಗಳನ್ನು ಇನ್ನೊಂದು ಸಂಪುಟ ರೂಪದಲ್ಲಿ

ಪ್ರಕಟಿಸುವ ಸಾಹಸಕ್ಕೆ ಕೈಹಾಕಿರುವುದು ಪ್ರಶಂಸನೀಯವಾದ ವಿಚಾರ. ಈ ಸಂಪುಟದಲ್ಲಿ ಶಿರೂರು ಫಣಿಯಪ್ಪಯ್ಯನವರು ರಚಿಸಿದ 'ಶ್ರೀಕೃಷ್ಣಗಾರುಡಿ' ಮತ್ತು 'ಮಹೇಂದ್ರವಿಜಯ' ಹಾಗೂ ಹಟ್ಟಿಯಂಗಡಿ ರಾಮಭಟ್ಟರ 'ಬಿಲ್ಲಹಬ್ಬ–ಕಂಸವಧೆ' ಮತ್ತು ರತ್ನಪುರದ ರಾಮ ವಿರಚಿತ 'ಮೂಲಕಾಸುರ ಕಾಳಗ' ಎಂಬ ಒಟ್ಟು ನಾಲ್ಕು ಯಕ್ಷಗಾನ ಪ್ರಸಂಗಗಳು ಸಂಪಾದಿತವಾಗಿವೆ.

ಶ್ರೀಕೃಷ್ಣಗಾರುಡಿ :

ಶಿರೂರು ಫಣಿಯಪ್ಪಯ್ಯ (1918–2004) ಯಕ್ಷಗಾನ ಕವಿಯಾಗಿ, ಭಾಗವತರಾಗಿ, ಮೇಳದ ಸಂಚಾಲಕರಾಗಿ ಪ್ರಸಿದ್ಧರು. ಅದಕ್ಕಿಂತಲೂ ಮಿಗಿಲಾಗಿ ಅವರು ಯಕ್ಷಗಾನ ಪ್ರಸಂಗಗಳ ತಾಡವಾಲೆ ಮತ್ತು ಹಸ್ತಪ್ರತಿಗಳ ಸಂಗ್ರಾಹಕರಾಗಿ ಬಹುದೊಡ್ಡ ಸೇವೆಯನ್ನು ಮಾಡಿದವರು. ಯಕ್ಷಗಾನ ವಲಯದಲ್ಲಿ ಬಹುಚರ್ಚಿತವಾದ 'ಮಾನಸಚರಿತ್ರೆ' ಎಂಬ ಮೂಲಿಕೆ ವೆಂಕಣ್ಣಕವಿಯ ಅಮೂಲ್ಯಪ್ರಸಂಗದ ತಾಡವಾಲೆ ಅವರ ಸಂಗ್ರಹದಲ್ಲೇ ಲಭಿಸಿರುವುದು ನಾಡಿನ ಭಾಗ್ಯ. ಅವರು ರಚಿಸಿದ ಹದಿನೈದು ಪ್ರಸಂಗಗಳಲ್ಲಿ 'ಶ್ರೀಕೃಷ್ಣಗಾರುಡಿ' 1963ರಲ್ಲೇ ಪ್ರಕಟಗೊಂಡು ರಂಗಪ್ರದರ್ಶನ ಕಂಡಿದೆ. ಚಲನಚಿತ್ರದ ಕಥೆಯನ್ನು ಆಧರಿಸಿ ರಚನೆಗೊಂಡ ಈ ಪ್ರಸಂಗವು ಯಕ್ಷಗಾನ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಮುಖ್ಯವಾದುದು. ಪೌರಾಣಿಕ ಪಾತ್ರಗಳನ್ನು ಬಳಸಿಕೊಂಡು ಕಲ್ಪಿತವಾದ ಆಖ್ಯಾನಗಳ ಸರಣಿಯಲ್ಲಿ ಇದಕ್ಕೆ ಮುಖ್ಯವಾದ ಸ್ಥಾನವಿದೆ.

'ಶ್ರೀಕೃಷ್ಣ ಗಾರುಡಿ' ಒಟ್ಟು 203 ಪದ್ಯಗಳಿರುವ ಪ್ರತಿಭಾಪೂರ್ಣ ಪ್ರಸಂಗ. ವಿನೂತನ ಕಥಾಹಂದರ, ಸನ್ನಿವೇಶರಮ್ಯತೆ, ರಸವೈವಿಧ್ಯ, ಸಾಹಿತ್ಯಸೌಂದರ್ಯ, ಸುಲಲಿತವಾದ ಪದ್ಯಬಂಧಗಳು ಈ ಪ್ರಸಂಗದ ಹಿರಿಮೆ.

ಕವಿಯು ಸ್ವಯಂ ಭಾಗವತರಾದುದರಿಂದ ಪದ್ಯಗಳ ರಚನೆಯಲ್ಲಿ ಸಂಗೀತ–ಸಾಹಿತ್ಯಗಳ ಸಮಾಮೇಲನ ಸಮುಚಿತವಾಗಿ ಮೂಡಿಬಂದಿದೆ. ಒಂದೆರಡು ಉದಾ:

ಯಾರೇ ಭಾಮಿನಿ ಸುಂದರಾಂಗಿ । ಗಜಗಮನೆ ಲತಾಂಗಿ ।
ತೋರೇ ನಿನ್ನಾನನ ಕೋಮಲಾಂಗಿ ॥
ಘೋರ ವಿಪಿನವಿದ । ಸಾರಿದ ಬಗೆಯೇ ।
ನೂರೆಲ್ಲಿದೆ ಮದ । ವಾರಣಗಾಮಿನಿ ॥ ಯಾರೇ ॥ (140)

ಸುಮಕೋಮಲಾಂಗಿ ನಿನ್ನ ನೋಡಿ । ಭ್ರಮೆಗೊಂಡೆನು ಖೋಡಿ ।
ಸುಮಶರನೆನ್ನೊಳ್ ನಿರ್ದಯ ಮಾಡಿ ॥
ಸುಮಬಾಣವನೆದೆ । ಗಮರಿಸಿ ಬಿಡುತಿಹ ।
ನಮಮ ಸಹಿಸೆ ನೀ । ಶಮಿಸೆಲೆ ಮೋದದಿ ॥ ಯಾರೇ ॥ (141)

ಶೃಂಗಾರರಸವನ್ನು ಸುರಿಸುವ ಸುಂದರ ಪದ್ಯಬಂಧವಿದು. ಆದ್ಯಂತಪ್ರಾಸಗಳ ಹೆಣಿಗೆ ಆಪಾತಮಧುರವಾಗಿದೆ.

ವಡಿಯ ಕೈಮುಗಿವೆ ಪರಾಕು । ಧರ್ಮ ।
ದೊಡಿಯರೆನ್ನಯ ನುಡಿಯವಧರಿಸ್ಬೇಕು ॥ ವಡಿಯ ॥ ಪ ॥

ಊರೆಮಗಾಯ್ತು ಬೌ ದೂರ । ನಮ್ಮ ।
ಊರಾಗಾಯ್ಕಂಡ್ ಕಂಡ್ರೆ ಸುತ್ಲು ಸಮ್ದೂರ ॥
ಯಾರೂ ಫಕ್ಕನೆ ಬಪ್ಕೆಯಡಿಯ । ಅಂಥ ।
ಊರಿಂದ ಪೊರಟಿಲ್ಲಿ ಬಂದೆವ್ನಮ್ಮೊಡಿಯಾ ॥ (110)

ಇದೊಂದು ದೇಸಿಯ ಸೊಗಡಿನ ಪದ್ಯ. ಕುಂದಗನ್ನಡದ ಸಹಜಸುಂದರ ವಿಲಾಸವಿಲ್ಲಿದೆ. ವಡಿಯ (ಒಡೆಯ), ಬೌ (ಬಹು), ಆಯ್ಕಂಡ್ (ಇದ್ದುಕೊಂಡು), ಸಮ್ದೂರ (ಸಮುದ್ರ), ಬಪ್ಕೆ (ಬರುವುದಕ್ಕೆ), ಯಡಿಯ (ಅಸಾಧ್ಯ) ಮುಂತಾದ ಪದಸಂಪತ್ತಿಯಿಂದ ಈ ಪದ್ಯ ಮನಸೆಳೆಯುತ್ತದೆ. ಇದರೊಂದಿಗೆ ಅಲ್ಲಲ್ಲಿ ಬರುವ 'ನೀರು ಪಾಲೆರಕವಾಗಿ ಇರ್ಪಂದದಿ', 'ಶಿರಕೆರೆದಿಹ ನೀರು ಚರಣಕಿಳಿಯದುಂಟೆ' ಮುಂತಾದ ಜನಪದ ನುಡಿರೂಪಗಳೂ ಮುದನೀಡುತ್ತವೆ.

ಯಕ್ಷಗಾನ ಕವಿಗಳಲ್ಲಿ ಕಂಡುಬರುವ ಚಿತ್ರಕವಿತಾಪ್ರಸಕ್ತಿಗೆ ದೀರ್ಘ ಪರಂಪರೆಯೇ ಇದೆ. ದೇವಿದಾಸ, ಹಳೆಮಕ್ಕಿ ರಾಮ, ಹಟ್ಟಿಯಂಗಡಿ ರಾಮ ಭಟ್ಟ, ಮುದ್ದಣ, ಚವರ್ಕಾಡು ಶಂಭುಜೋಯಿಸ, ಕಲ್ಯಾಣಿ ಭೀಮರಾಯ, ಬವುಲಾಡಿ ಹಿರಿಯಣ್ಣ ಹೆಬ್ಬಾರ ಮುಂತಾದ ಕವಿಗಳ ಒಗಟಿನಂತಹ ರಚನೆಗಳು

ಯಕ್ಷಗಾನಕಾವ್ಯವನ್ನು ಪಂಡಿತಮಾನ್ಯಗೊಳಿಸಿವೆ. ಈ ಪ್ರಸಂಗದ ಒಂದು ಭಾಮಿನಿಷಟ್ಪದಿಯ ರಚನೆಯೂ 'ಪಾರಿಹಾರಿಕಿ' ಎಂಬ ಚಿತ್ರಕವಿತಾ ಪ್ರಭೇದವಾಗಿದೆ ಎಂಬುದು ಗಮನಾರ್ಹ.

[ಜ]ನಕಭೂಪತಿಯಣುಗನಾತ್ಮಜ ।
ನನು ರಣದಿ ಕೆಡಹಿದನ ದರ್ಪವ ।
ಘನದಿ ಮುರಿದವನರಸಿಯಯ್ಯನ ಪೆಸರಹುದು ನಿನಗೆ ॥
ಜನಿಸುವರ್ಭಕರಿಂದ ಮುಂದವ ।
ರನು ಸಲಹಿ ತನ್ನಿಚ್ಛೆಯಂದದಿ ।
ನಿನಗೆ ನಡೆಯಲಸಾಧ್ಯ ಬಿಡು ಸಾರಿದೆನು ಪಿಂತೆರಳು ॥ (152)

"ಜನಕಭೂಪತಿ ಎಂಬುದು ಕೃತವೀರ್ಯರಾಜನ ತಂದೆಯ ಹೆಸರು. (ಮೂಲದಲ್ಲಿ 'ಸನಕಭೂಪತಿ' ಎಂಬ ಪ್ರಯೋಗವಿದ್ದು ಅರ್ಥದೂರವಾದುದರಿಂದ ಇಲ್ಲಿ ಬದಲಾಯಿಸಲಾಗಿದೆ. ಪುರಾಣಭಾರತಕೋಶದಲ್ಲಿ 'ಜನಕ'ನೆಂದೂ, ಪುರಾಣನಾಮಚೂಡಾಮಣಿಯಲ್ಲಿ 'ಧನಕ'ನೆಂದೂ ಉಲ್ಲೇಖವಿದೆ.) ಜನಕರಾಜನ ಮಗನಾದ ಕೃತವೀರ್ಯನ ಸುಪುತ್ರನೇ ಕಾರ್ತವೀರ್ಯಾರ್ಜುನ. ಅವನನ್ನು ಯುದ್ಧದಲ್ಲಿ ಸೋಲಿಸಿದವನು ಪರಶುರಾಮ. ಆ ಪರಶುರಾಮನನ್ನು ಪರಾಭವಗೊಳಿಸಿದವನು ಶ್ರೀರಾಮಚಂದ್ರ. ಅವನ ಮಡದಿಯೇ ಸೀತಾದೇವಿ. ಆ ಸೀತೆಯ ತಂದೆಯೇ ಜನಕರಾಜ! ನನ್ನನ್ನು ಮದುವೆಯಾಗುವ ನೀನು ಮುಂದೆ 'ಮಕ್ಕಳಿಗೆ ಜನಕ'ನೆನಿಸುವೆ! ಆ ಮಕ್ಕಳನ್ನು ನನ್ನ ವಾಂಛೆಯಂತೆ ಸಾಕಿಸಲಹುವುದು ನಿನ್ನಿಂದಾಗದು, ಹಿಂದೆ ಹೋಗು" ಎಂದು ಅರ್ಜುನನಿಗೆ ಹೇಳುವ ಮಾಯಾಮೋಹಿನಿಯ ಮಾತಿದು. 'ನೀನು ಅಪ್ಪನಾಗುವೆ' ಎಂಬುದನ್ನು ಬಳಸುಮಾತಿನಿಂದ ಹೇಳಿರುವುದು ಇಲ್ಲಿಯ ನುಡಿಬೆಡಗು!

ಹರಿ ಮುರಾಂತಕ ಮುಕುಂದ । ಬಂಧನ ಪರಿ ।
ಹರಿಸೋ ನಂಬಿದೆ ಗೋವಿಂದ ॥
ಹರಿಣಲೋಚನೆಗಾಗಿ ನರ ತರ ।
ಹರಿಸುತಿಹ ಬಂದೀಗ ಭಯ ಪರಿ ।
ಹರಿಸಿ ನಮ್ಮನು ಸಲಹಿ ಕರುಣವ ।
ಹರಿಸು ನಿತ್ಯಾನಂದ ಮಹಿಮನೆ ॥ ಪಾಹಿ ॥ (182)

ಇಲ್ಲಿ 'ಹರಿ' ಶಬ್ದದ ಪುನರಾವೃತ್ತಿಯಿದೆ. ಅವುಗಳು ವಿಭಿನ್ನಾರ್ಥವನ್ನು ನೀಡುವಂತಿರುವುದು ಗಮನಾರ್ಹ.

ಮಹೇಂದ್ರವಿಜಯ :

ಇದೇ ಕವಿಯ ಇನ್ನೊಂದು ಕೃತಿಯಿದು. ಜನಪದಲೋಕದ ಸಂಕೀರ್ಣಕಥಾ ವರ್ಗಕ್ಕೆ ಸೇರುವ ಈ ಕಥೆಯೂ ಹೊಸಮಾದರಿಯ ಪ್ರಸಂಗಗಳ ಕಕ್ಷೆಯಲ್ಲಿ ಕಾಣಿಸಿಕೊಳ್ಳುವ ಮುಖ್ಯಕೃತಿ. ಮಲತಾಯಿಯ ಕಾಮವಾಂಛೆ, ಕಟುಕರಿಂದ ಜೀವದಾನ, ಕಾಳಿಕಾಂಬೆಗೆ ನರಬಲಿ, ರಾಕ್ಷಸಿಯು ಅಜ್ಜಿಯ ರೂಪತಾಳುವುದು, ಭೂತದ ನೆರವು, ಕಲ್ಲುಗಳನ್ನು ಮಂತ್ರಿಸಿಕೊಡುವುದು, ಶಿಲಾವಿಗ್ರಹವು ಮಾತಾಡುವುದು, ಸರ್ಪವು ಮಾನವನಾಗುವುದು, ಶಾಪದಿಂದ ಕಲ್ಲಾಗುವುದು ಮತ್ತು ನಾಯಿಯಾಗುವುದು, ಮಂತ್ರದಿಂದ ಪೂರ್ವರೂಪಧಾರಣೆ ಇವೇ ಮೊದಲಾದ ಆಶಯಗಳು ಜನಪದಕಥೆಗಳ ಮುಖ್ಯಲಕ್ಷಣವಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಇಂತಹ ರಮ್ಯಕಥಾವಸ್ತುಗಳು ಯಕ್ಷಗಾನ ರಂಗಕ್ಕೆ ಬಂದ ಕಾಲಘಟ್ಟದ ಪ್ರಾತಿನಿಧಿಕ ಕೃತಿಯಾಗಿ ಈ ಪ್ರಸಂಗವನ್ನು ಗಮನಿಸಬಹುದು.

ಪೂರ್ವಕವಿಗಳ ಪದ್ಯಬಂಧಗಳನ್ನೇ ಹೋಲುವ ಸುಂದರ ರಚನೆಗಳನ್ನು ಹೆಣೆಯುವಲ್ಲಿ ಈ ಕವಿಗೆ ವಿಶೇಷ ಒಲವಿದ್ದಂತೆ ತೋರುತ್ತದೆ. ಹಟ್ಟಿಯಂಗಡಿ ರಾಮಭಟ್ಟ, ಮುದ್ದಣ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮೂಲ್ಕಿ ರಾಮಕೃಷ್ಣಯ್ಯ ಮುಂತಾದವರ ಪ್ರಭಾವ ಪ್ರೇರಣೆಗಳು ಅಲ್ಲಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಉದಾ:

ಬಾರೊ ಬಾರೋ ನವಮೋಹನಾಂಗ ।
ದೂರದಿ ದಣಿದಂತಿರುವುದು ನಿನ್ನಂಗ ।
ವಿ–ಶ್ರಮಿಸಂತರಂಗ ।
ಪೇ–ಳುವೆನು ಶುಭಾಂಗ ॥ (59)

ನೋಡದೆ ನಿನ್ನನು ಬಲುದಿನವಾಯ್ತು ।
ನೋಡಿದೆನೀಗದಕಾನಂದವಾಯ್ತು ।
ಬೇ–ಸರವೆಲ್ಲ ಹೋಯ್ತು ।
ಮ–ನ್ಮನದಿಚ್ಛೆಯಾಯ್ತು ॥ (61)

ಈ ಪದ್ಯಗಳ ಉತ್ತರಾರ್ಧದಲ್ಲಿ ಕಂಡುಬರುವ ವರಣಸಂಯೋಜನೆ ಆಹ್ಲಾದಕಾರಿಯಾದುದು. ಇದು ಮುದ್ದಣನ 'ಕುಮಾರವಿಜಯ'ದ "ಮಾತನಾಡೋ ಮಮ ಪ್ರಾಣನಾಥ" ಎಂಬ ಪದ್ಯಬಂಧವನ್ನು ಹೋಲುತ್ತದೆ.

ನೀರೆ ಸುಗುಣೆ ಗಂ । ಭೀರೆ ಸುಧಾಕರ । ಮೋರೆ ಕುಮುದನೇತ್ರೆ ॥
ಮಾರನ ಗಿಣಿವ್ಯೆ । ಯ್ಯಾರ ಬೆಡಗುನಗೆ । ಬೀರೆ ವಿಮಲಗಾತ್ರೆ ॥
ಯಾರೆಂದರಿಯೆ ವಿ । ಚಾರಿಪೆ ತವಮನ ।
ಕೋರಿಕೆ ಸಲಿಸುವೆ । ಸೂರೆ ನಿನಗೆ ನಾ । ನೀರೆ ॥ (159)

ಬಾ । ಬಾರೆ ಸುಗುಣ । ಪಾರೆ ಮೊಗವ । ದೋರೆ ಭಾಮಿನಿ ॥
ದೂರವಿರಿಸು ಭಯವನಿತ್ತ । ಸೇರೆಕಾಮಿನಿ ॥
ನಿ । ನ್ನಂಗವರಸಿ । ಭಂಗಬಡುತ । ನಂಗಬಾಣದಿ ॥
ತುಂಗಕುಚೆ ಕು । ರಂಗನಯನೆ । ಯಂಗಗಾಣದಿ ॥ (340–341)

ಈ ಪದ್ಯಗಳಲ್ಲಿಯೂ ಮುದ್ದಣನ 'ಕುಮಾರವಿಜಯ' ಪ್ರಸಂಗದ "ಕುಂದರದನೆ ಪೂರ್ಣೇಂದುವದನೆ" ಮತ್ತು "ಆನಂದಮುಖೀ ಸುಂದರಾಂಗಿ" ಪದ್ಯಗಳ ಧಾಟಿಯನ್ನು ನೋಡಬಹುದು. ಯಕ್ಷಗಾನ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅರಿಸಮಾಸಗಳು ಈ ಕವಿಯ ರಚನೆಗಳಲ್ಲೂ ಕಂಡು ಬರುವುದುಂಟು. ಉದಾ: ಕಡಲಂಬರೇಶ (ಸಮುದ್ರವಸನೆಯಾದ ಭೂಮಿಯ ಅಧಿಪತಿ–ರಾಜ), ಎಲರಶನ (ಗಾಳಿಯೇ ಆಹಾರವಾಗಿ ಉಳ್ಳ ಹಾವು) ಇತ್ಯಾದಿ. ಹಳು (ಚ್ಯುತಿ), ತಾಳ (ಕೀಲು), ಕುಕ್ಕರ (ನಾಯಿ), ಬಟ್ಟೆ (ದಾರಿ), ಸವನಿಸು (ಒದಗು), ಹೊಲಬು (ದಾರಿ), ಪೊರೆ (ಆಶ್ರಯ) ಇತ್ಯಾದಿ ನಡುಗನ್ನಡಕ್ಕೆ ಒಪ್ಪುವ ಪದಪ್ರಯೋಗಗಳೂ ಇಲ್ಲಿ ಗಮನಾರ್ಹ. ಜೊತೆಗೆ ಸಂಸ್ಕೃತ ಭೂಯಿಷ್ಠವಾದ ಸಮಾಸಪದಗಳನ್ನೂ ಕವಿ ಬಳಸಿರುವುದುಂಟು. ಉದಾ: ಶ್ರೀಲಕ್ಷ್ಮೀವದನಾರವಿಂದಮಿಹಿರ, ವಾಸವಮುಖ್ಯದಿವೌಕಸಪೋಷ, ಮತ್ಕುಲಕೀರ್ತಿವೃಕ್ಷ ಕುಠಾರ, ವಿಕ್ರಮಾಂಕಿತ ಗುಣಶರಧಿಗಂಭೀರ ಇತ್ಯಾದಿ.

ಯಕ್ಷಗಾನದ ಆಹಾರ್ಯವೈಭವವನ್ನು ಸಾಕ್ಷಾತ್ಕರಿಸಲು ಈ ಪ್ರಸಂಗ ಅತ್ಯಂತ ಪ್ರಶಸ್ತವಾಗಿದೆ. ರಾಜ, ರಾಣಿ, ರಾಜಕುಮಾರ, ರಾಜಕುಮಾರಿ, ಅಡಗೂಳಜ್ಜಿ, ಯಕ್ಷ, ಗಂಧರ್ವ, ರಾಕ್ಷಸ, ರಾಕ್ಷಸಿ, ಭೂತ, ದೇವತೆಗಳು,

ಜೋಯಿಸ, ಚಾರಕರು, ವನಪಾಲಕರು, ಕಟುಕರು ಮುಂತಾದ ವೇಷವೈವಿಧ್ಯಗಳು ಭವ್ಯಲೋಕವನ್ನು ಸೃಷ್ಟಿಸಲು ಸಹಕಾರಿಯಾಗಿವೆ. ಇಡೀರಾತ್ರಿಯ ಪ್ರದರ್ಶನಕ್ಕೆ ಇದು ಸೂಕ್ತವಾಗಿದೆ.

ಬಿಲ್ಲಹಬ್ಬ-ಕಂಸವಧೆ:

ಹಟ್ಟಿಯಂಗಡಿ ರಾಮಭಟ್ಟ (ಕ್ರಿ. ಶ. 1794-1854) ಕುಂದಾಪುರದ ಸಮೀಪದ ಹಟ್ಟಿಯಂಗಡಿಯವರು. ಅಲ್ಲಿರುವ ಲೋಕನಾಥೇಶ್ವರ ದೇಗುಲದ ಅರ್ಚಕ ಸೂರಭಟ್ಟರ ಮಗ. ಅವಧೂತನಂತಿದ್ದ ಆಶುಕವಿ. ಅತಿಕಾಯ ಕಾಳಗ, ಧ್ರುವಚರಿತ್ರೆ, ಲವಕುಶರ ಕಾಳಗ, ದ್ರೌಪದಿಸ್ವಯಂವರ, ಸುಭದ್ರಾಕಲ್ಯಾಣ, ರತಿಕಲ್ಯಾಣ ಮುಂತಾದ (17) ಪ್ರಸಂಗಗಳನ್ನು ರಚಿಸಿದವರು. ಇವರ 'ಬಿಲ್ಲಹಬ್ಬ-ಕಂಸವಧೆ' ಭಾಗವತ ಪುರಾಣವನ್ನು ಆಧರಿಸಿದ ಅತ್ಯುತ್ತಮ ಪ್ರಸಂಗ. ಭಾಷಾಶೈಲಿ, ಛಂದೋಬಂಧ, ಕಾವ್ಯಮೌಲ್ಯಗಳ ದೃಷ್ಟಿಯಿಂದ ಇದನ್ನು ಕವಿಯ ಉತ್ಕೃಷ್ಟ ರಚನೆ ಎನ್ನಬೇಕು.

ಶಬ್ದಾಲಂಕಾರದ ಸೊಬಗು:

ಮಕರಕುಂಡಲ ಭೂಷ ಮಾಧುರ್ಯತರಭಾಷ ।
ಶಕಟದಾನವಭಂಗ ಶ್ಯಾಮಳ ಘನಾಂಗ ॥
ಸಕಲ ಜಗದಾಧಾರ ಸಿಂಧುಸಮ ಗಂಭೀರ ।
ಮುಕುರಸಮ ಸುಕಪೋಲ ವರಪೀತ ಚೇಲ (3)

ಥರವಿಡಿದು ಬರುವ ಸುತರಂಗದಿಂ ಸಾಂಗದಿಂ ।
ಚರಿಸುತಿಹ ಮತ್ಸ್ಯಸಂದೋಹದಿಂ ಗ್ರಾಹದಿಂ ।
ಪರಿಪೂತೆ ತಾನೆಂಬ ಪೆಂಪಿನಿಂ ತಂಪಿನಿಂ ವಿವಿಧಜಲಚರಗಳಿಂದ ॥
ಪರಿಮಳಿತ ಕುಸುಮ ಫಲಭಾರದಿಂ ಕೀರದಿಂ ।
ಮೆರೆವ ನಾನಾವಿಧದ ತರುಗಳಿಂ ಹರಿಗಳಿಂ ।
ಪರಿಶೋಭಿಸುಭಯಪ್ರತೀರದಿಂ ಸ್ವೈರದಿಂದಿಹ ರವಿಜೆಯಂ ಕಂಡರು (172)

ಇಲ್ಲಿಯ ಒಳಪ್ರಾಸಗಳ ಚೆಲುವು ಗಮನಾರ್ಹ. ಲಾಟಾನುಪ್ರಾಸಗಳಿರುವ ಇಂತಹ ವಾರ್ಧಕಷಟ್ಪದಿಗಳು ಲಕ್ಷ್ಮೀಶನ ಜೈಮಿನಿ ಭಾರತವನ್ನು ನೆನಪಿಸುತ್ತವೆ.

ವರ್ಣನೆಗಳು :

ಭಯದಿ ಕಂಸಂಗಖಿಳ ಜಗ ಹರಿ ।
ಮಯವೆನಿಸಿ ತೋರಿತ್ತು ಮೇಣ್ ಸರ ।
ಸಿಯಲಿ ಪಂಕಜವರಳ್ದುದಳಿಮಕರಂದ ವಾರಿಯಲಿ ॥
ಪ್ರಿಯದೊಳಘಮರುಷಣವ ಗೈದುದು ।
ನಯಸರದಿ ಕೋಗಿಲೆಗಳುಲಿದುದು ।
ನಯನಗೋಚರನಾದನಿನನವನೀಶ ಕೇಳೆಂದ ॥ (310)

ಇದೊಂದು ಸುಂದರ ಸೂರ್ಯೋದಯದ ವರ್ಣನೆ. "ಸರೋವರದಲ್ಲಿ ತಾವರೆಗಳು ಅರಳಿದವು. ದುಂಬಿಗಳು ಮಕರಂದದ ನೀರಿನಲ್ಲಿ ಅಘಮರ್ಷಣವನ್ನು ಮಾಡಿದವು. ಕೋಗಿಲೆಗಳು ಇಂಪಾಗಿ ಕೂಗಿದವು. ಆಗ ಸೂರ್ಯನು ಮೂಡಿದನು." ಇಲ್ಲಿ 'ಅಘಮರ್ಷಣ'ವೆಂದರೆ ಪಾಪಪರಿಮಾರ್ಜನೆಯ ಮಂತ್ರವಿಧಿ. ದುಂಬಿಗಳ ಝೇಂಕಾರವನ್ನು ಮಂತ್ರಘೋಷದೊಂದಿಗೆ ಸಮೀಕರಿಸಿದುದು ಒಂದು ಸೌಂದರ್ಯವಾದರೆ, ಕಂಸನ ದುಷ್ಕೃತ್ಯಗಳಿಗೆ ಪರಿಸಮಾಪ್ತಿ ಒದಗಿಬಂದಿದೆ ಎಂಬ ಕಾವ್ಯಧ್ವನಿಯೂ ಇಲ್ಲಿದೆ!

ಸೂರ್ಯಾಸ್ತವನ್ನು ವಿಭಿನ್ನವಾಗಿ ವರ್ಣಿಸುವ ಪರಿಯೊಂದು ಹೀಗಿದೆ:

ಮನೆಗೆ ಪೋಗಲ್ಕನ್ನೆಗಂ ಮಿಸುನಿವೆಟ್ಟಮಂ ।
ತನಗೆ ನಿಚ್ಚಂ ಸುತ್ತುವೀ ದುಃಖ ತೀರದೆಂ ।
ದೆನುತ ಮುನಿಸಂದಳೆದು ಪಶ್ಚಿಮಾಚಲದಿಂದಲಿನನಿಳಿದನಂಬುನಿಧಿಗೆ (72)

"ಮೇರುಪರ್ವತವನ್ನು ಪ್ರತಿನಿತ್ಯ ತನಗೆ ಪ್ರದಕ್ಷಿಣೆಗೈಯುವ ಸಂಕಷ್ಟ ಬೇಡವೆಂದು ಸಿಟ್ಟುಗೊಂಡ ಸೂರ್ಯ ಪಡುವಣಬೆಟ್ಟದಿಂದ ಸಮುದ್ರಕ್ಕೆ ಇಳಿದ"ನೆಂಬ ಮಾತು ಮನೋಹರವಾದುದು. (ಕನಕದಾಸರ ಮೋಹನತರಂಗಿಣಿಯಲ್ಲಿ ಇಂತಹ ಮಾತಿದೆ. "ಮೇರುಪರ್ವತವ ಸುತ್ತುವ ಭಾರ ತನಗಿರ್ದು ತೀರುವುದಿಲ್ಲೆಂದು ಸೂರ್ಯ; ವಾರುವರಥಗೂಡಿ ಪಡುವೆಟ್ಟ ಶಿಖರದಿ ನೀರೊಟ್ಟಿಲೊಳು ಬಿದ್ದ ಮುದದಿ" – 18–3).

ಕಾಲಂದುಗೆಯನು ಕರದೊಳ್ । ಕೆಲ ।
ರೋಲೆಯ ಬೆರಳ್ಗಳೊಳ್ ಕಡಗವ ಕಿವಿಯೊಳ್ ॥
ಲೀಲೆಯೊಳಿಟ್ಟು ಚಚ್ಚರದೊಳ್ । ಶ್ರೀ ।
ಲೋಲನ ಮುಖಕಮಲವ ಕಾಂಬ ಭರದೊಳ್ ॥ (221)

ಮಥುರಾನಗರಿಯಲ್ಲಿ ಶ್ರೀಕೃಷ್ಣನನ್ನು ನೋಡಲೆಳಸಿದ ಹೆಂಗಸರ ಗಡಿಬಿಡಿಯಿಲ್ಲಿದೆ! "ಕಾಲಿಗೆ ಧರಿಸುವ ಗೆಜ್ಜೆಯನ್ನು ಕೈಗೆ ಇಟ್ಟರಂತೆ! ಓಲೆಗಳನ್ನು ಬೆರಳಿಗೆ ಹಾಕಿಕೊಂಡರಂತೆ! ಕೈಬಳೆಗಳನ್ನು ಕಿವಿಗಳಿಗೆ ಸಿಕ್ಕಿಸಿಕೊಂಡರಂತೆ!" ಇದೇ ತೆರನಾದ ವರ್ಣನೆ ಮುದ್ದಣಕವಿಯ ಶ್ರೀರಾಮಪಟ್ಟಾಭಿಷೇಕದಲ್ಲೂ ("ಪಸುರೆಲೆಯ ಬೆಲ್ಲವತ್ತಂಗೆತ್ತು: 4–13) ಬರುತ್ತದೆ.

ಭ್ರಮರ ಬಾಲಹಿಮಾಂಶು ಕಾರ್ಮುಕ ಕುಮುದ ಸ್ಫುಟ ತಿಲಕುಸುಮವೋ ॥
ಪ್ರಮದೆಯಳ ಕುಂತಳ ಲಲಾಟ ಭ್ರೂ ನಯನ ನಾಸಿಕವೊ ಮೇಣ್ ।
ಕಮಲ ಕಾಂಚನಕಲಶ ಪುಳಿನವೊ ಮುಖ ಪಯೋಧರ ಜಘನವೋ ।
ಭ್ರಮೆಯಗೊಳಿಪುದಿದೆಂಬಿನಿಂ ಕಣ್ಗೆಸೆದಳಾ ಸೀಮಂತಿನಿ ॥ (264)

ಶ್ರೀಕೃಷ್ಣನ ಕೃಪಾಕಟಾಕ್ಷದಿಂದ ತ್ರಿವಕ್ರೆಯಾಗಿದ್ದ ಕುಬ್ಜೆಯು ಅಪೂರ್ವ ಸುಂದರಿಯಾಗಿ ಕಂಗೊಳಿಸಿರುವುದನ್ನು ಇದು ಬಣ್ಣಿಸುತ್ತದೆ. "ಕುಬ್ಜೆಯ ಮುಂಗುರುಳು, ಹಣೆ, ಹುಬ್ಬು, ಕಣ್ಣು, ಮೂಗುಗಳು ದುಂಬಿಯೋ, ಚಂದ್ರನೋ, ಬಿಲ್ಲೋ, ನೈದಿಲೆಯೋ, ತಿಲಪುಷ್ಪವೋ ಎಂಬಂತೆ ಭಾಸವಾದವು! ಅವಳ ಮುಖ, ಸ್ತನ, ಜಘನಗಳು ತಾವರೆ, ಬಂಗಾರದ ಕಲಶ, ಮರಳದಿನ್ನೆಗಳೋ ಎಂಬ ಭ್ರಮೆಯನ್ನು ಉಂಟುಮಾಡಿದವು!" ಯಕ್ಷಗಾನ ಕಾವ್ಯಪ್ರಪಂಚದಲ್ಲೇ ಇದೊಂದು ಅನನ್ಯಚಿತ್ರ. ಇಲ್ಲಿ ಉಪಮಾನ ಮತ್ತು ಉಪಮೇಯಗಳನ್ನು ಬೇರೆಬೇರೆಯಾಗಿ ಹೇಳಿದರೂ, ಅವುಗಳನ್ನು ಕ್ರಮಾನುಗತಿಯಲ್ಲಿ ಜೋಡಿಸಿದ ಕವಿಪ್ರತಿಭೆ ಗಮನಾರ್ಹವಾದುದು.

ದೃಷ್ಟಾಂತಗಳನ್ನು ನೀಡುವಲ್ಲಿ ದೇಸಿಯ ಸೊಬಗನ್ನು ನೋಡಬಹುದು. ಉದಾ: 'ಚಂದ್ರನ ಕಿರಣಕ್ಕೆ ಮುಸುಡು ಕಂದುವುದೆ', 'ಕಳಿಲೆಯುಗುರಿಂದ ಮುರಿದಂತೆ ಲಳಿಗೆಯಾದ ಮೇಲಂಜುವದೆ', 'ಎಳೆಯ ನಾಗನ ವಿಷವು ನೋಡಲೆಳತಾಗುವದೆ', 'ಸಿಂಗವಾನೆಗೆ ಬೆದರಿನಡೆವುದೆ ಸಾರಂಗಕಂಜಿ ಪೆರ್ಬುಲಿಯು ಬಿಡುವುದೆ' ಇತ್ಯಾದಿ. 'ಬಳಿಕ ಫಲದಾಸೆಯೊಳು ಸುಮವ

ಮೀರ್ವಂತೆ', 'ಜಗತಿಯೆಂಬಂಗನೆಯ ನಗೆಮೋಗವಿದೆಂಬಂತೆ', 'ಗಾಳಿ ಬೆಂಬಲವಾದ ಶಿಖಿಯವೋಲ್', 'ಸಂದ ಪುಣ್ಯದ ತಾರೆಗಳು ನಭದಿಂದ ಬೀಳ್ವಂತೆ', 'ವಾರಿನಿಧಿ ದೆಸೆದಪ್ಪಿಯೊಂದೇ ಬಾರಿ ಬಹುದೆಂಬಂತೆ' ಮುಂತಾದ ಉಪಮೆಗಳೂ ಮನನೀಯ.

ಕಂಗಳೊಳಂ ಕಮಲಾಂಬಕ ।
ನಂಗಸುಧಾರಸವನೀಂಟುತಂ ಜನರಾಗಳ್ ॥
ಹಿಂಗದೆ ತೀವಿದ ಹರುಷದಿ ।
ಹೊಂಗುತ ಸುಖವಾರ್ಧಿಯೊಳಗೆ ಮುಳುಗುತ ನುಡಿದರ್ ॥ (341)

ಶ್ರೀಕೃಷ್ಣನ 'ಅಂಗಸುಧಾರಸ'ವನ್ನು ಜನರು ಕಣ್ಣುಗಳಲ್ಲೇ ಕುಡಿದರಂತೆ! ಅದು ಸಾಲದೆಂಬಂತೆ ಸಂತೋಷದಲ್ಲಿ ಓಲಾಡಿ 'ಸುಖವಾರ್ಧಿ'ಯಲ್ಲಿ ಮುಳುಗಿದರಂತೆ! ಕಮಲದ ಕಣ್ಣುಳ್ಳವನ ಚೆಲುವನ್ನು ಕಣ್ಣುಗಳಲ್ಲೇ ಕುಡಿದರೆಂಬಲ್ಲಿಯೂ ಬೆಡಗಿದೆ. ಹೀಗೆ ಈ ರೂಪಕಾಲಂಕಾರವೂ ಕಮನೀಯ ಕಾವ್ಯದ ಕಾಣ್ಕೆಯಾಗಿದೆ.

'ಇನಜನೂರಿಗುಂಬಳಿಯನು ಬಿಡುವೆವೆಂದರು' (285) ಎಂಬಲ್ಲಿರುವ ವಕ್ರೋಕ್ತಿವಿಲಾಸ ದೊಡ್ಡದು. 'ಹಾರುವರು ಮಂತ್ರದಕ್ಷತೆಯ ಬಿತ್ತಿದರು' (417), 'ಸುಮ್ಮಾನದ ಸುಖದ ಸುಗ್ಗಿಯನು' (421), 'ನೆತ್ತಿಯೊಳ್ಮುಡಿದೆನು ಹಸ್ತದಂಜಲಿಯ' (186) ಮುಂತಾದ ವಾಕ್ಯಗಳು ಕವಿಪ್ರತಿಭೆಗೆ ಸಾಕ್ಷಿಯಾಗಿವೆ. 'ಪದಹತಿಗೆ ಧರೆಯ ಬಲಿಸದನವನು ಪೊಗಿಸುತ್ತ (76) ಎಂಬುದು ಕೇಶಿದಾನವನ ಭಯಂಕರ ಹೆಜ್ಜೆಗತಿಯನ್ನು ಉತ್ಪ್ರೇಕ್ಷಿಸುವ ರೀತಿ. ಅವನು ಹೆಜ್ಜೆಯಿಟ್ಟಾಗ ಭೂಮಿಯೇ ಪಾತಾಳಕ್ಕೆ ಕುಸಿಯಿತು ಎಂಬುದು ಕವಿಯ ವಿವಕ್ಷೆ.

ಭಾಷಾಪ್ರಯೋಗ:

ಏವೆ (ಏನು ಮಾಡುವೆ), ಹೊಳಲೊಪ್ಪ (ಪುರದ ಚೆಲುವು), ಗಳಹು (ಒದರು), ನಿಗುಚು (ಮೇಲೆತ್ತು), ಬಿನುಗು (ಕ್ಷುದ್ರ) ಮುಂತಾದ ನಡುಗನ್ನಡ ಪದಗಳು ಯಕ್ಷಗಾನಶೈಲಿಗೆ ಚೆನ್ನಾಗಿ ಒಪ್ಪುತ್ತವೆ. ಕೆಲವೊಂದು ಪ್ರಯೋಗಗಳು ವಿಶಿಷ್ಟವಾಗಿರುವುದು ಗಮನಾರ್ಹ. ಉದಾ:

'ಸ್ಯೆರಂಧ್ರಿಗೊಲಿದಿತ್ತ ಭಾಷೆಯ ತಿದ್ದಿ' (438) ಎಂಬುದು ವಿಶಿಷ್ಟವಾದ ಪ್ರಯೋಗ. ಇಲ್ಲಿ 'ತಿದ್ದು'ವುದೆಂದರೆ 'ತೀರ್ಚು' ಅಥವಾ 'ಮುಗಿಸು' ಎಂಬರ್ಥ. ('ತಿದ್ದಿತೇ ಭವದೀಯ ಕರ್ಣದ ಹೊದ್ದಿಗೆ'– ತೊರವೆ ರಾಮಾಯಣ: 2–6–25) ಕೊಟ್ಟ ಭಾಷೆಯನ್ನು ಈಡೇರಿಸಿದನೆಂಬುದು ಭಾವಾರ್ಥ. ಕುಬ್ಜೆಯ ವಕ್ರತೆಯನ್ನು ತಿದ್ದಿದ ಭಗವಂತ ಇಲ್ಲಿ ಭಾಷೆಯನ್ನೂ ತಿದ್ದಿಬಿಟ್ಟ!

ಬಹೆ ನಿನ್ನ ಮನೆಗೆ ಮುದದಿ । ಪರಿವಾರ ।
ಸಹಿತಲಿ ನಿರಾಲಸ್ಯದಿ ॥
ವಿಹಿತವ್ಯೆ ನೀ ಪೇಳ್ವುದು । ಶರಣುಗಳ ।
ಗೃಹದೊಳಾರೋಗಿಸುವುದು ॥ (201)

ಇದು ಅಕ್ರೂರನಿಗೆ ಶ್ರೀಕೃಷ್ಣನ ಪ್ರತ್ಯುತ್ತರ. ಇಲ್ಲಿಯ 'ಶರಣುಗಳ' ಎಂಬ ಪದಪ್ರಯೋಗ ವಿಶಿಷ್ಟವಾದುದು. ವಂದನಾರ್ಥದ 'ಶರಣು' ಇಲ್ಲಿ ಭಕ್ತಿನಿರ್ವೇದನೆಯ ಜೊತೆಗೆ 'ನೈವೇದ್ಯ/ಆತಿಥ್ಯ' ಎಂಬ ಅರ್ಥಧ್ವನಿಯನ್ನೂ ಪಡಿಮೂಡಿಸುತ್ತದೆ!

ಛಂದಸ್ಸು:

ಯಕ್ಷಗಾನಛಂದಸ್ಸಿನ ಎಲ್ಲ ಮಾದರಿಗಳನ್ನೂ ಈ ಕವಿ ಬಳಸಿಕೊಂಡಿದ್ದಾರೆ ಎನ್ನಬಹುದು. ಸೌರಾಷ್ಟ್ರ–ತ್ರಿವುಡೆ, ಭೈರವಿ–ತ್ರಿವುಡೆ, ಕಾಂಭೋದಿ–ಝಂಪೆ, ಭೈರವಿ–ರಝಂಪೆ, ಶಂಕರಾಭರಣ–ಅಷ್ಟ, ಕೇದಾರಗೌಳ–ಅಷ್ಟ, ಆರ್ಯಾಸವಾಯಿ–ಏಕ, ಮುಖಾರಿ–ಏಕ, ಭೈರವಿ–ಏಕ, ಶಂಕರಾಭರಣ–ಮಟ್ಟೆ ಮುಂತಾದ ಪ್ರಸಿದ್ಧ ಛಂದೋಬಂಧಗಳ ಜೊತೆಗೆ ಸಾಂಗತ್ಯ, ದ್ವಿಪದಿ, ಕಂದಪದ್ಯಗಳನ್ನೂ ಬಳಸಿದ್ದಾರೆ. ಭಾಮಿನಿ, ವಾರ್ಧಕಗಳ ಜೊತೆಗೆ ಶರ, ಕುಸುಮ, ಭೋಗ ಷಟ್ಪದಿಗಳನ್ನೂ ಬಳಸಿರುವುದು ವಿಶೇಷವಾಗಿದೆ. ಶಾರ್ದೂಲವಿಕ್ರೀಡಿತ, ಚಂಪಕಮಾಲೆ ಮತ್ತು ಮತ್ತೇಭವಿಕ್ರೀಡಿತ ವೃತ್ತಗಳು ಬಳಕೆಯಾಗಿವೆ. ಇವುಗಳಲ್ಲಿ ಮತ್ತೇಭವಿಕ್ರೀಡಿತವನ್ನು 'ಗಜವಿಕ್ರೀಡಿತ' ಎಂದು ಹೆಸರಿಸಲಾಗಿದೆ.

ಅಪೂರ್ವವಾಗಿ 'ತಾರಾವಳಿವೃತ್ತ–ದಂಡಕ' ಎಂಬ (385) ಛಂದೋಬಂಧವನ್ನು ಈ ಪ್ರಸಂಗದಲ್ಲಿ ನೋಡಬಹುದು. ಇಪ್ಪತ್ತೊಂಬತ್ತು ಸಾಲುಗಳ ಈ ತಾರಾವಳಿ ಛಂದಸ್ಸು ವಿಶೇಷವಾದುದು. ಪ್ರತಿಪಾದದಲ್ಲಿ

ದ್ವಿತೀಯಾಕ್ಷರ ಪ್ರಾಸವಿರುವ ಎರಡು ವಿಷ್ಣುಗಣಗಳ ಬಳಿಕೆ ಮತ್ತು ಅದನ್ನು ದಂಡಕವೆಂದು ಕರೆದಿರುವುದು ಗಮನಾರ್ಹ. (ಕನ್ನಡಕಾವ್ಯಗಳಲ್ಲಿ ದೊರೆತ ತಾರಾವಳಿಗಳಲ್ಲಿ 27 ಮತ್ತು ಅದಕ್ಕಿಂತ ಕಡಿಮೆ ಪಾದಗಳಿದ್ದು, ಪ್ರತಿಪಾದದಲ್ಲಿ ನಾಲ್ಕು ವಿಷ್ಣುಗಣಗಳಿರುವ ಉದಾಹರಣೆಗಳು ದೊರೆತಿವೆ. ನೋಡಿ: ಡಾ. ಎಂ. ಚಿದಾನಂದ ಮೂರ್ತಿ– ಛಂದೋತರಂಗ, ಪುಟ 270)

'ಕಕ್ಕುಭ' ಎಂಬ (192) ಛಂದಸ್ಸಿನ ಸೂಚನೆಯಿದೆಯಾದರೂ ಅದು 'ಕಕುಪ್/ಕಕುಭ್' ಎಂಬ ವೈದಿಕಛಂದಸ್ಸನ್ನು ಹೋಲುವುದಿಲ್ಲ. ಶ್ರೀಕೃಷ್ಣನನ್ನು ಸ್ತುತಿಸುವ ಸಂದರ್ಭದಲ್ಲಿ ಕಂಡುಬರುವ 'ದಶಾವತಾರ' ಕೀರ್ತನೆಯೊಂದು (342) ಯಕ್ಷಗಾನ ಮತ್ತು ದಾಸಸಾಹಿತ್ಯಗಳ ಅವಿನಾಭಾವ ಸಂಬಂಧಕ್ಕೆ ಸಾಕ್ಷಿಯಂತಿದೆ.

ಮೂಲಕಾಸುರ ಕಾಳಗ:

ಈ ಪ್ರಸಂಗದ ಕವಿ ರತ್ನಪುರದ ರಾಮ. 'ತಾಮ್ರಧ್ವಜ ಕಾಳಗ' ಮತ್ತು 'ಮೂಲಕಾಸುರ ಕಾಳಗ' ಎರಡೂ ಇವನ ಕೃತಿಗಳು. ಉತ್ತರಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಶಿವಪುರದವನೆಂಬ ಅಭಿಪ್ರಾಯವಿದೆ. ಅವನ 'ಮೂಲಕಾಸುರ ಕಾಳಗ' ಕೃತಿಯಲ್ಲಿ ದೊರಕುವ ಕವಿಮುದ್ರಿಕೆ ಹೀಗಿದೆ:

ಧರೆಯೊಳು ಶತ್ರುತ್ಕರೀಪುರಮಧ್ಯವಾಸಿ ಭೂ ।
ಸುರಕುಲೋತ್ಪನ್ನ ಕಾಶ್ಯಪಗೋತ್ರಭವ ಮನೋ ।
ಹರ ತಿರುಮಲಾರ್ಯನ ಸುಪುತ್ರ ಶಂಕರನ ಕುಲಸತಿ ಸರಸ್ವತಿಸೂನು ನಾ ॥
ಪರಮಗುರುವರ್ಯ ಸುಬ್ರಹ್ಮಣ್ಯನಂಘ್ರಿಪಂ ।
ಕರುಹದೊಲವಿಂದ ವಿರಚಿಸಿದೆನೀ ಕಾವ್ಯಮಂ ।
ತರಳ ರಾಮನ ಬಾಲಭಾಷಿತವನುದ್ಧರಿಸಿ ಸುಜನರೊಲಿದಾಲಿಸುವುದು ॥ (335)

ಇದರ ಅರ್ಥ: "ರತ್ನಪುರದಲ್ಲಿ ವಾಸವಾಗಿರುವ ಬ್ರಾಹ್ಮಣಕುಲದ ಕಾಶ್ಯಪಗೋತ್ರದ ತಿರುಮಲನ ಸುಪುತ್ರನಾದ ಶಂಕರನ ಮಡದಿಯಾದ ಸರಸ್ವತಿಯ ಮಗನಾದ ರಾಮನು ಸುಬ್ರಹ್ಮಣ್ಯಗುರುಗಳ ಆಶೀರ್ವಾದದಿಂದ ಈ ಕಾವ್ಯವನ್ನು ರಚಿಸಿದ್ದೇನೆ. ಈ ಬಾಲಭಾಷಿತವನ್ನು ಸಜ್ಜನರು ಪ್ರೀತಿಯಿಂದ ಆಲಿಸುವುದು" ಎಂದು. ಈ ಪ್ರಸಂಗದ ನಾಂದಿಯಲ್ಲಿ 'ರತ್ನಪುರದ ವೆಂಕಟೇಶ'

ಮತ್ತು 'ಬೆಪ್ಪಳಿನಿಲಯದ ಗೋಪೀನಾಥ'ನ ಸ್ಮರಣೆಯಿದೆ. ಡಾ. ಶಿವರಾಮ ಕಾರಂತರು ಇವನ ಕಾಲವನ್ನು ಪ್ರಸಂಗದ ತಾಡವಾಲೆಯ (ಕ್ರಿ.ಶ. 1691) ಆಧಾರದಿಂದ ಹದಿನೇಳನೆಯ ಶತಮಾನದ ಆದಿಭಾಗವೆಂದು ತರ್ಕಿಸಿದ್ದಾರೆ.

ಮೂಲಕಾಸುರ ಕಾಳಗದ ಕಥಾವಸ್ತುವಿಗೆ ಮೂಲ ಯಾವುದೆಂದು ತಿಳಿಯದು. ಆದರೆ ಅದರಲ್ಲಿ ಬರುವ ಕುಶನು ದರ್ಭೆಯಲ್ಲಿ ಜನಿಸಿದನೆಂಬ ಜನ್ಮವೃತ್ತಾಂತವು ಜನಪದ ರಾಮಾಯಣಕ್ಕೆ ಋಣಿಯಾಗಿದೆ ಎನ್ನಬಹುದು. ಕುಶನು ಅಯೋನಿಜನಾದ ಕಾರಣದಿಂದಲೇ ಮೂಲಕಾಸುರನನ್ನು ವಧಿಸಲು ಸಮರ್ಥನಾದನೆಂಬುದು ಇಲ್ಲಿಯ ಕಥೆಯ ವಿಶೇಷತೆ.

ರಾಮಾಯಣದ ಕಥೆಯನ್ನು ಸಂಕ್ಷೇಪವಾಗಿ ಹೇಳಿ, ರಾವಣವಧಾನಂತರದಲ್ಲಿ ಸೀತೆಯ ಅಗ್ನಿಪ್ರವೇಶವನ್ನು ನಿರೂಪಿಸಿ ಶ್ರೀರಾಮನು ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗುವುದು ಪ್ರಸಂಗದ ಪೂರ್ವಭಾಗವಾದರೆ, ರಾವಣಪುತ್ರನಾದ ಮೂಲಕಾಸುರನು ವಿಭೀಷಣನನ್ನು ಲಂಕೆಯಿಂದ ಓಡಿಸುವುದು, ಅಯೋಧ್ಯೆಯ ಮೇಲೆ ದಾಳಿಮಾಡುವುದು, ಯುದ್ಧದಲ್ಲಿ ಲಕ್ಷ್ಮಣಾದಿಗಳನ್ನು ಸೋಲಿಸುವುದು, ಕೊನೆಗೆ ಕುಶನಿಂದ ಸಾಯುವುದು ಉತ್ತರಭಾಗವಾಗಿ ರಂಗದಲ್ಲಿ ರಂಜಿಸುತ್ತದೆ. (ರಾವಣನಿಗೆ ಮೂಲಾನಕ್ಷತ್ರದಲ್ಲಿ ಅರಿಷ್ಟಸೂಚಕನಾಗಿ ಜನಿಸಿದ ಮೂಲಕನೆಂಬವನನ್ನು ಕಾಡಿನಲ್ಲಿ ಬಿಟ್ಟ ಕಥಾಹಂದರ ರಂಗದಲ್ಲಿ ಅಭಿನೀತಗೊಳ್ಳುವುದಿಲ್ಲ.) ಪರಿಚಿತವಲ್ಲದ ಕಥೆ, ಸಂವಾದದ ಸೊಬಗು, ಯುದ್ಧದೃಶ್ಯಗಳು ಈ ಪ್ರಸಂಗದ ವಿಶೇಷತೆ.

ಕಾವ್ಯದ ಮನೋಹರತೆಯೂ ಗಮನಾರ್ಹವಾಗಿದೆ. ಹಲವಾರು ವಾರ್ಧಕ ಷಟ್ಪದಿಗಳು ಅನುಪ್ರಾಸವೈಭವದಿಂದ ಮನಸೆಳೆಯುತ್ತವೆ. ಒಂದೆರಡು ಉದಾ:

ಸರಸಿಜಾದಳನೇತ್ರೆ ಲಲಿತಮಂಗಳಗಾತ್ರೆ ।
ಮೆರೆವ ಮುಕುರಕಪೋಲೆ ಮಧುಪಕುಂತಳಜಾಲೆ ।
ಮಿರುಪ ಮಂಜುಳಭಾಸೆ ಮುಕುಳಚಂಪಕನಾಸೆ ಶಶಿವದನೆ ಕುಂದರದನೆ॥
ಸರಸಗುಣಸಂಪನ್ನೆ ಕಾಮಿನೀಕುಲರನ್ನೆ ।
ಉರಗಸನ್ನಿಭವೇಣಿ ಮಧುರಕೋಕಿಲವಾಣಿ ।
ನಿರುಪಮ ಮಹೀಜಾತೆ ಮುದದಿ ತ್ರಿಜಗನ್ಮಾತೆ ಮಣಿಪರಿಸ್ತೃತೆಯಾದಳು ॥ (33)

ಕುಸುಮ ಫಲಭಾರದಿಂದಳಿಯ ಝೇಂಕಾರದಿಂ ।
ಲಸದುತ್ತ್ರವಾಳದಿಂ ಶುಕಪಿಕ ಮರಾಳದಿಂ ।
ಶ್ವಸನ ದಾಳಿಂಬದಿಂ ವಟ ಶಮಿ ಕದಂಬದಿಂ ಪೂಗಪುನ್ನಾಗದಿಂದ ॥
ಕಿಸಲಯ ಮರೀಚಿಯಿಂದಪರಿಮಿತ ವೀಚಿಯಿಂ ।
ದೆಸೆವ ಕಾಸಾರದಿಂದಮಲಪಯಪೂರದಿಂ ।
ಬಿಸಜಸುಮಗಂಪಿನಿಂ ಶ್ರಮಗಳವತಂಪಿನಿಂದೆಸೆದಿರ್ದವಾ ವನಗಳು ॥ (129)

ಪೆಗಲೊಳೇರಿಸಿದ ನವ ತೂಣದಿಂ ಬಾಣದಿಂ ।
ಬಗೆಬಗೆಯ ವಾದ್ಯಗಳ ಘೋಷದಿಂ ತೋಷದಿಂ ।
ದೃಗುಯುಗದೊಳೊಗೆವ ಕೂರ್ಗಿಡಿಗಳಿಂದಡಿಗಳಿಂ ಪೊಡವಿ ಕಂಪಿಸುತಿರಲ್ಕೆ ॥
ಸಗರಾನ್ವಯನ ಕೃಪೆಯ ಬಲದಿಂದ ಛಲದಿಂದ ।
ಮೃಗರಾಜರವ ಪರಾಕ್ರಮದಿಂದ ಕ್ರಮದಿಂದ ।
ಸುಗದಾಸಿ ಪರಶು ತೋಮರದಿಂದ ಭರದಿಂದ ಪೊರಮಟ್ಟುದಾ ವಾಹಿನಿ ॥ (144)

ಈ ಷಟ್ಪದಿಗಳಲ್ಲಿ ಲಾಟಾನುಪ್ರಾಸದ ಸೊಬಗಿದೆ. ಮೊದಲಿನ ಎರಡು ಷಟ್ಪದಿಗಳ ಪ್ರಾಸರೂಪಕ್ಕೂ, ಅನಂತರದ ಷಟ್ಪದಿಯ ಪ್ರಾಸರೂಪಕ್ಕೂ ಅಂತರವಿರುವುದನ್ನು ಗಮನಿಸಬಹುದು. ಗಾಯನದಲ್ಲಿ ಈ ಪ್ರಾಸಶಬ್ದಗಳು ನಾದಮನೋಹರತೆಗೆ ಕಾರಣವಾಗುವುದನ್ನು ರಸಜ್ಞರು ಬಲ್ಲರು.

ಶ್ರೀರಾಮನ ಆಡಳಿತದ ಸುಖಸಂತೃಪ್ತಿಯನ್ನು ವರ್ಣಿಸುವ ಎರಡು ವಾರ್ಧಕಷಟ್ಪದಿಗಳು ಗಮನಿಸಬೇಕಾದವುಗಳು. ಅವುಗಳಲ್ಲಿ ಒಂದು ಯಾವುದೇ ರೀತಿಯ ಕೆಡುಕುಗಳಿಲ್ಲವೆಂಬುದನ್ನೂ, ಇನ್ನೊಂದು ಒಳಿತಿನ ಸರಣಿಯೇ ಇದೆಯೆಂಬುದನ್ನೂ ವರ್ಣಿಸುವ ಕವಿಕೌಶಲಗಳು.

ಜಂತುಗಳ ಮೇಲೆ ನಿರ್ದಯವಿಲ್ಲ ಭಯವಿಲ್ಲ ।
ಚಿಂತೆ ನಿಷ್ಠೂರಘರ್ಷಣವಿಲ್ಲ ಋಣವಿಲ್ಲ ।
ಸ್ವಂತದೊಳಜಸ್ರ ಚಂಚಲವಿಲ್ಲ ಛಲವಿಲ್ಲ ವರ್ಣಸಂಕರಗಳಿಲ್ಲ ॥
ಸಂತತಂ ದುಃಖದುಷ್ಕೃತಿಯಿಲ್ಲ ಖತಿಯಿಲ್ಲ ।
ಕ್ರಂತನವ್ಯಾಧಿಸಂಕಟವಿಲ್ಲ ಸಟೆಯಿಲ್ಲ ।
ಕಂತುಶರದುರುಬೆಗಾಸ್ಪದವಿಲ್ಲ ಮದವಿಲ್ಲ ಕೃತಬಂಧನಂಗಳಿಲ್ಲ ॥ (78)

ಎಲ್ಲಿ ನೋಡಿದರು ದಾಕ್ಷಿಣ್ಯಮಯ ಪುಣ್ಯಮಯ ।
ಎಲ್ಲಿಯುಂ ನಡೆವ ಸತ್ಕರ್ಮಮಯ ಧರ್ಮಮಯ ।
ಎಲ್ಲಿಯುಂ ಹರಿಕಥಾನಾದಮಯ ವೇದಮಯ ವಿಪ್ರಸಂತರ್ಪಣೆಗಳು ॥
ಎಲ್ಲಿಯುಂ ಸರ್ವದಾರೋಗ್ಯಮಯ ಭಾಗ್ಯಮಯ ।
ವೆಲ್ಲಿಯುಂ ಶಮೆ ದಮೆ ವಿಭೂತಿಮಯ ನೀತಿಮಯ ।
ಎಲ್ಲಿಯುಂ ಶೋಭಿಪಾರಾಮಮಯ ಹೇಮಮಯವಾದುದಾ ರಾಷ್ಟ್ರದೊಳಗೆ ॥ (79)

ಈ ನಿರೂಪಣೆಯಲ್ಲೂ ವ್ಯಂಜನಸಮತೆಯ ಅಲಂಕಾರವಿದೆ. ಜೊತೆಗೆ ಅರ್ಥಭೂಯಿಷ್ಠವಾದ ಸಾಹಿತ್ಯಶ್ರೀಮಂತಿಕೆಯಿದೆ.

ಛಂದಸ್ಸು :

ಈ ಕವಿಯು ಬಳಸಿದ ವೈವಿಧ್ಯಪೂರ್ಣವಾದ ಯಕ್ಷಗಾನ ಛಂದೋಬಂಧಗಳು ಪ್ರಸಂಗದ ರಸಾಭಿವ್ಯಂಜನೆಗೆ ಪೂರಕವಾಗಿಯೇ ಇದೆ. ಕೆಲವು ಸೃಜನಶೀಲವಾದ ವಿನ್ಯಾಸಗಳು ರಂಗದಲ್ಲಿ ಚೇತೋಹಾರಿಯಾದ ಅನುಭವಕ್ಕೆ ಕಾರಣವಾಗುವುದುರಲ್ಲಿ ಸಂದೇಹವಿಲ್ಲ. ಉದಾ:

ಮಾನಿನಿ ಕೇಳೇನಿದು ಪೇಳ್ ತಿಳಿಯದು ॥ ಪ ॥

ಸತಿಯ ಪುರುಷ ಕೂಡದೆ । ಸುತರು ಬೇಕೆನ್ನದೆ ।
ಕ್ಷಿತಿಗೆ ಜನಿಸಲಪ್ಪುದೇ । ಮ । ನ್ಮತಿಗೆ ಸಂಶಯವಿದೆ ॥

ಖಳನ ಸಂಗರದಲ್ಲಿ । ಒಲವನಂಬರದಲ್ಲಿ ।
ಒಲಿದುಸುರ್ದ ನುಡಿಯಲ್ಲಿ । ನಾ । ತಿಳಿದೆನಾ ದಿನದಲ್ಲಿ ॥ (318–319)

ಈ ಪದ್ಯದ ಉತ್ತರಾರ್ಧದಲ್ಲಿರುವ ಎರಡು ಮಾತ್ರೆಗಳ 'ವರಣ' ಸಂಯೋಜನೆ ಅನ್ಯತ್ರ ಕಂಡುಬಾರದ ವಿಶೇಷಾಂಶ.

ಸಾಮಾನ್ಯವಾಗಿ ಕಂಡುಬರುವ 'ನೀಲಾಂಬರಿ–ರೂಪಕ'ದ ಛಂದೋಬಂಧದಲ್ಲಿ ಆರುಮಾತ್ರೆಯ ಗಣವಿನ್ಯಾಸವಿದ್ದು ವಿಳಂಬಗತಿಯ ಗಾಯನಕ್ಕೆ ಮುದನೀಡುತ್ತದೆ. ವಿಷಮಪಾದಗಳಲ್ಲಿ '6+6+6+6' ಮತ್ತು ಸಮಪಾದಗಳಲ್ಲಿ '6+6+6+3' ಎಂಬ ವಿನ್ಯಾಸವಿರುತ್ತದೆ. ಇದು ಅಚ್ಚಗನ್ನಡದ ಅಂಶಲಯಛಂದಸ್ಸಿನ 'ಮದನವತಿ'ಯ ಮಾತ್ರಾತ್ಮಕ ವಿನ್ಯಾಸ ಎಂಬುದನ್ನು

ಗಮನಿಸಬೇಕು. ಆದರೆ ಇಲ್ಲಿ ಅದು ಕೆಲವೆಡೆ '6+4+4' ಎಂಬ ಧ್ರುವತಾಳದ ಸ್ವರೂಪವನ್ನು ಪಡೆಯುವುದು ಗತಿಭಂಗಕ್ಕೆ ಕಾರಣವಾಗುತ್ತದೆ. ಉದಾ:

ಪಾವನ ಮುನಿ/ ವಂಶೋದ್ಭವ / ರಾವಣನುದ/ ರದಿ ಜನಿಸಿದೆ /
ನೀ ವನದಲಿ / ಬದುಕಿದೆ ವನ / ದೇವತೆಯರ / ದಯದಿ ॥
ದೇವಾರಾ / ತಿಯು ವಿಪಿನಕೆ / ಪಾವಕನಾ / ದೆನೆ ಶಿವಶಿವ /
ಭೂವಳಯದಿ / ಶಾಲೂರನ / ತೆರದಲಿ / ಜೀವಿಸಿ ಫಲ / ವೇನು ॥ (100)

ಕುಲಕಂಟಕ / ನೆನಿಸಿದೆ ಜಗ / ದೊಳಗಿದನರಿ / ಯದೆ ವ್ಯರ್ಥದಿ /
ಸಲೆ ನಿಂದೆಗೆ / ಗುರಿಯಾ / ದೆನೆ ರಣ / ದೊಳಗಳಿದರೆ / ಬಂಧುಗಳು /
ನೆಲನಾಸೆಗೆ / ತನ್ನಣ್ಣನ / ಕೊಲಿಸಿದ ಕಿರಿ / ಯಪ್ಪನು / ಪಾಪದ /
ಕೆಲಸವಿದೆಂ / ದುಳಿಯದೆ / ವೈರಿಗ / ಳೊಳಗಾಗದೆ / ತಾನು ॥ (101)

ಭಾಷೆ :
ಅಮಮ ಭೋರೆಂದುರಿ ಛಡಾಳಿಸಲ್ ತೆಗೆದೆಚ್ಚ ।
ಸುಮತಿ ಕೈಕಾತ್ಮಜನ ಪೇರುರಕೆ ತಾಗಿದುದು ।
ನಿಮಿಷಾರ್ಧದೊಳ್ ಬಟ್ಟೆದೆಗೆಯಲ್ಕೆ ಬೆನ್ನೊಳಗೆ ಧರಣಿಗಂ ಪಸೆಗೈದನು ॥(230)

ಇಲ್ಲಿ 'ಬಟ್ಟೆದೆಗೆಯುವುದು' ಎಂದರೆ ಪಲಾಯನ ಮಾಡುವುದು ಎಂದರ್ಥ. 'ಬೆನ್ನೊಳಗೆ' ಎಂದರೆ ತತ್‌ಕ್ಷಣದಲ್ಲಿ ಎಂದರ್ಥ. ಇದು ಆಡುನುಡಿಯ ಪ್ರಭಾವದಿಂದ ಉಂಟಾದ ಪ್ರಯೋಗ. ರೂಢಿಯಲ್ಲಿ ಹೇಳುವ 'ಅದರ ಬೆನ್ನಿಗೆ ಬಂದೆ', 'ಅದಾದ ಬೆನ್ನಿಗೆ ತಂದರು' ಮುಂತಾದೆಡೆ 'ವಿಳಂಬಿಸದೆ' ಎಂಬ ಅರ್ಥಚ್ಛಾಯೆ ಕಾಣಿಸುತ್ತದೆ. 'ಧರಣಿಗಂ ಪಸೆಗೈದನು' ಎಂದರೆ 'ಭೂಮಿಗೆ ತಂಪನ್ನು ಉಂಟುಮಾಡಿದನು' ಎಂದರ್ಥ. ಅಪರಿಚಿತಾರ್ಥಗಳನ್ನೇ ಬಳಸಿ ವಾಕ್ಯವನ್ನು ರಚಿಸಿರುವುದು ಇಲ್ಲಿಯ ಕ್ಲಿಷ್ಟತೆ. ಒಟ್ಟಿನಲ್ಲಿ "ಭರತನ ಹೃದಯಕ್ಕೆ ಅಗ್ನಿಶರವು ತಾಗಿದ ಕೂಡಲೇ ಅವನು ಓಡಿಹೋದನು ಮತ್ತು ಮರುಕ್ಷಣದಲ್ಲೇ ಪ್ರತ್ಯಸ್ತ್ರದಿಂದ ಭೂಮಿಯನ್ನು ತಂಪುಗೊಳಿಸಿದನು" ಎಂಬ ಅರ್ಥ ಹೊಳೆಯುತ್ತದೆ.

ಸಂವಾದವಿಶೇಷತೆಗಳು ಈ ಪ್ರಸಂಗದಲ್ಲಿ ಗಮನಸೆಳೆಯುವಂತಿವೆ. 'ಸೀತಾ–ರಾಮ ಸಂವಾದ', 'ಶಿವ–ರಾಮ ಸಂವಾದ', 'ಮೂಲಕ–ನಾರದ ಸಂವಾದ'ಗಳನ್ನು ಇದಕ್ಕೆ ಉದಾಹರಿಸಬಹುದು. ಪರಶಿವನು ಶ್ರೀರಾಮನಲ್ಲಿ ಕೇಳುವ ಪ್ರಶ್ನೆಗಳು ತಾತ್ತ್ವಿಕಚಿಂತನೆಗೆ ಇಂಬುನೀಡುತ್ತವೆ.

ಮೇದಿನೀಶತಿಲಕ ನಮ್ಮೊಳ । ಭೇದಗೊಂಡ ತನುವಿಗೀ ಸ ।
ಮಾಧಿಯೆಂಬುದೊಂದು ಬರಿವಿ । ನೋದ ಬಳಲಿಕೆ ॥
ಸಾಧುಗುಣಸುಶೀಲ ನಿರಪ । ವಾದಿ ನಿನ್ನ ಮನದಿ ಬಯಕೆ ।
ಯಾದುದೆಂತೆನುತ್ತಲಭವ । ಮೋದದಿಂದ ಕರವ ಪಿಡಿದ ॥ (304)

ವಾರಿಯೊಳಗೆ ಕೆಡೆದು । ತೋಯನು ।
ದಾರ ವಾಯು ಬಡಿದು ॥ ಒಣಗಿಸ ।
ಲಾರದಗ್ನಿವಿಡಿದು ॥ ದಹಿಸನು ।
ಬೇರೆ ಶರದಿ ಕಡಿದು ॥ ಕೊಲ್ಲುವ ।
ರಾರು ನೋಡು ನಿರವಯ ನಿಶ್ರೇಯನ ।
ತೋರಿ ತೋರಿದಾದ್ಯಂತರಹಿತನೆಂತಹ ॥ (309)

ಇಲ್ಲಿರುವ 'ಶಿವ-ರಾಮ ಸಂವಾದ'ದಲ್ಲಿ ಹರಿ-ಹರರು ಸ್ವಯಂ ಅಭಿನ್ನರಾಗಿದ್ದೂ, "ಸಮಾಧಿಯೆಂಬುದೊಂದು ಬರಿವಿನೋದ ಬಳಲಿಕೆ" ಎಂಬ ವಿಚಾರದೀಪ್ತಿಯಿದೆ. ಅಲ್ಲಿಯೇ ಗೀತೋಪನಿಷತ್ತಿನ "ನೈನಂ ಛಿಂದಂತಿ ಶಸ್ತ್ರಾಣಿ" 2-23) ಮುಂತಾದ ಚಿಂತನೆಗಳು ಮಡುಗಟ್ಟಿವೆ. ತಾಳಮದ್ದಳೆಗಳಲ್ಲಿ ಈ ಭಾಗ ಹೆಚ್ಚು ರಂಜಿಸಬಹುದಾಗಿದೆ.

ಗ್ರಂಥಸಂಪಾದನೆಯಲ್ಲಿ ಏಕೈಕ ಹಸ್ತಪ್ರತಿಯನ್ನು ಅವಲಂಬಿಸಿರುವುದರಿಂದ, ಪಾಠಾಂತರಗಳ ಪ್ರಮೇಯವಿಲ್ಲ. ಗಣನ್ಯೂನತೆ/ಪಾದನ್ಯೂನತೆಗಳು ಕಂಡುಬಂದ ಪದ್ಯಗಳಲ್ಲಿ ಊಹಾಪಠ್ಯವನ್ನು ಚೌಕಕಂಸದಲ್ಲಿ ನೀಡಲಾಗಿದೆ. ಉದಾ : 2-175, 3-228, 3-346, 3-413, 4-6, 4-65, 4-123, 4-162, 4-252, 4-308, 4-310 ಇತ್ಯಾದಿ.

* * * * *

ಈ ನಾಲ್ಕು ಪ್ರಸಂಗಗಳ ಸಂಪುಟವು ಯಕ್ಷಗಾನ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ ತುಂಬಾ ಸಹಕಾರಿಯಾಗಿದೆ. ಇದನ್ನು ಪ್ರಕಟಿಸುತ್ತಿರುವ 'ಫಣಿಗಿರಿ ಪ್ರತಿಷ್ಠಾನ'ದ ಶ್ರೀ ಉಮೇಶ ಶಿರೂರು ಮತ್ತು ಅವರ ಮಿತ್ರರ ಕಾರ್ಯ ಸ್ತುತ್ಯರ್ಹವಾದುದು. ಅವರಿಗೆ ಸರ್ವಶುಭವನ್ನು ಹಾರಯಿಸುತ್ತೇನೆ.

ದಿನಾಂಕ 15.10.2023
ನವರಾತ್ರಿ

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ
ಚರವಾಣಿ : 99450 55534

ಪ್ರಕಾಶಕರ ಮಾತು

ಯಕ್ಷಗಾನಕವಿ ಶಿರೂರು ಫಣಿಯಪ್ಪಯ್ಯವರ ನೆನಪಿನಲ್ಲಿ ನಾವು ಕುಟುಂಬಸ್ಥರು ಮತ್ತು ಯಕ್ಷಾಭಿಮಾನಿಗಳ ಸಹಕಾರದಿಂದ ಪ್ರಾರಂಭಿಸಿದ 'ಫಣಿಗಿರಿ ಪ್ರತಿಷ್ಠಾನ ಶಿರೂರು' ವತಿಯಿಂದ ಯಕ್ಷಗಾನ ಪ್ರಸಂಗ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕಳೆದ ಮೂರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ನಾಲ್ಕನೆಯ ಕೃತಿಯನ್ನು ಪ್ರಕಟಸುತ್ತಿರುವುದಕ್ಕೆ ಹೆಮ್ಮೆ ಮತ್ತು ಸಂತೋಷವಾಗುತ್ತಿದೆ. ಶಿರೂರು ಫಣಿಯಪ್ಪಯ್ಯ ವಿರಚಿತ ಆರು ಯಕ್ಷಗಾನ ಪ್ರಸಂಗಗಳು ಮತ್ತು ಯಕ್ಷಲೋಕದ ಅಪರೂಪದ ಕೃತಿಯೆಂದು ಗುರುತಿಸಲ್ಪಟ್ಟ ಮೂಲಿಕೆ ವೆಂಕಣ್ಣಕವಿಯ ಮಾನಸಚರಿತ್ರೆ ಪ್ರಸಂಗ ಕೃತಿಗಳನ್ನು ಹಿಂದಿನ ವರ್ಷಗಳಲ್ಲಿ ಹಿರಿಯ ಯಕ್ಷಗಾನ ವಿದ್ವಾಂಸರೂ, ಪ್ರತಿಷ್ಠಿತ 'ಪಾರ್ತಿಸುಬ್ಬ ಪ್ರಶಸ್ತಿ' ಪುರಸ್ಕೃತರೂ ಆದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರ ಸಂಪಾದಕತ್ವದಲ್ಲಿ ಫಣಿಗಿರಿ ಪ್ರತಿಷ್ಠಾನ ಪ್ರಕಟಿಸಿರುವುದು ಯಕ್ಷಗಾನ ಸಾಹಿತ್ಯಾಭಿಮಾನಿಗಳಿಗೆ ತಿಳಿದ ವಿಷಯವಾಗಿದೆ. ಅದೇ ರೀತಿ ಈ ವರ್ಷ ಕೂಡ ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ ಪ್ರಸಂಗ ಕೃತಿಗಳನ್ನು ಈ ಸಂಪುಟದಲ್ಲಿ ಡಾ. ಕಬ್ಬಿನಾಲೆಯವರ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿದ್ದೇವೆ.

ಶಿರೂರು ಫಣಿಯಪ್ಪಯ್ಯ ವಿರಚಿತ 'ಶ್ರೀಕೃಷ್ಣಗಾರುಡಿ' ಮತ್ತು 'ಮಹೇಂದ್ರವಿಜಯ' ಪ್ರಸಂಗಗಳೊಂದಿಗೆ ಅವರು ತಾಳೆಗರಿ ಗ್ರಂಥಗಳಿಂದ ಹಸ್ತಪ್ರತಿ ಮಾಡಿಟ್ಟ ಹಟ್ಟಿಯಂಗಡಿ ರಾಮಭಟ್ಟ ವಿರಚಿತ 'ಬಿಲ್ಲಹಬ್ಬ-ಕಂಸವಧೆ', ಮತ್ತು ರತ್ನಪುರದ ರಾಮಕವಿ ವಿರಚಿತ 'ಮೂಲಕಾಸುರ ಕಾಳಗ' ಎಂಬ ಒಟ್ಟು ನಾಲ್ಕು ಯಕ್ಷಗಾನ ಪ್ರಸಂಗಗಳನ್ನು ಈ ಸಂಪುಟದಲ್ಲಿ ಪ್ರಕಟಿಸುತ್ತಿದ್ದೇವೆ. ಹಟ್ಟಿಯಂಗಡಿ ರಾಮಭಟ್ಟರ 'ಬಿಲ್ಲಹಬ್ಬ-ಕಂಸವಧೆ', ರತ್ನಪುರದ ರಾಮಕವಿಯ 'ಮೂಲಕಾಸುರ ಕಾಳಗ' ಎರಡೂ ಬಹಳ ಅಪರೂಪದ ಪೌರಾಣಿಕ ಪ್ರಸಂಗ ಕೃತಿಗಳಾಗಿದ್ದು ಈವರೆಗೆ ಎಲ್ಲಿಯೂ ಪ್ರಕಟವಾಗಿರುವುದಿಲ್ಲ. ಮೊದಲ ಬಾರಿಗೆ ಈ ಅಪೂರ್ವ ಕೃತಿಗಳನ್ನು ಯಕ್ಷಗಾನ ಸಾಹಿತ್ಯ ಅಭಿಮಾನಿಗಳಿಗೆ ಸಮರ್ಪಿಸುವ ಮೂಲಕ ನಮ್ಮ ತಂದೆ ಶಿರೂರು ಫಣಿಯಪ್ಪಯ್ಯನವರ ಸಾರಸ್ವತ ಶ್ರಮವನ್ನು ಸಾರ್ಥಕಗೊಳಿಸಿದ ಕ್ಷಣ ನಮ್ಮದಾಗಿದೆ. 'ಮಹೇಂದ್ರ ವಿಜಯ' ಯಕ್ಷಗಾನಕೃತಿ ಮೊದಲ ಬಾರಿಗೆ ಪ್ರಕಟವಾಗುತ್ತಿದ್ದು ಬಹಳ

ಹಿಂದೆಯೇ ಖ್ಯಾತ ಭಾಗವತ ದಿವಂಗತ ನಾರ್ಣಪ್ಪ ಉಪ್ಪೂರರ ನಿರ್ದೇಶನದಲ್ಲಿ ಯಶಸ್ವಿಯಾಗಿ ಮೇಳಗಳಲ್ಲಿ ಹಲವು ಪ್ರದರ್ಶನ ಕಂಡ ಪ್ರಸಂಗ. 'ಶ್ರೀಕೃಷ್ಣಗಾರುಡಿ' 1963ರಲ್ಲಿ ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಣೆಗೊಂಡಿದ್ದರೂ ಈಗ ಪ್ರತಿಗಳು ಅಲಭ್ಯ ಮತ್ತು ಫಣಿಯಪ್ಪಯ್ಯನವರ ಸಂಪುಟದಲ್ಲಿ ಈ ಪ್ರಸಂಗಕೃತಿ ಕೂಡ ಯಕ್ಷಗಾನ ಆಸಕ್ತರಿಗೆ ಲಭಿಸಲಿ ಎಂಬ ಕಾರಣಗಳಿಂದ ಸೇರಿಸಿದ್ದೇವೆ.

ಮುಂದಿನ ದಿನಗಳಲ್ಲಿ ಯಕ್ಷಗಾನಕವಿಗಳ ಅಪ್ರಕಟಿತ ಪೌರಾಣಿಕ ಛಂದೋಬದ್ಧ ಯಕ್ಷಗಾನ ಪ್ರಸಂಗಗಳನ್ನು ಅವುಗಳ ಹಸ್ತಪ್ರತಿಗಳು ಲಭ್ಯವಾದಂತೆ ಪ್ರಕಟಿಸುವ ಉದ್ದೇಶವನ್ನು ನಮ್ಮ ಪ್ರತಿಷ್ಠಾನ ಹೊಂದಿದೆ. ಈ ಬಗ್ಗೆ ಹಸ್ತಪ್ರತಿಗಳ ಮಾಹಿತಿಗಳನ್ನು ಯಕ್ಷಗಾನ ಪ್ರಸಂಗ ಸಾಹಿತ್ಯಾಭಿಮಾನಿಗಳು ನಮಗೆ ನೀಡುವಂತೆ ಕೋರಿಕೊಳ್ಳುತ್ತಿದ್ದೇವೆ.

ಕಳೆದ ಮೂರು ವರ್ಷಗಳಿಂದ ನಮ್ಮ ಪ್ರಕಟಣೆಯ ಎಲ್ಲ ಪ್ರಸಂಗ ಕೃತಿಗಳನ್ನು ಬಹಳ ಮುತುವರ್ಜಿಯಿಂದ ಪರಿಶೀಲಿಸಿ ಸಂಪಾದಕತ್ವವನ್ನು ಮಾಡಿ ನಮ್ಮ ಕಾರ್ಯಕ್ಕೆ ಪ್ರೋತ್ಸಾಹ ನೀಡುತ್ತಿರುವ ನಾಡಿನ ಹಿರಿಯ ಸಾಹಿತಿ ಹಾಗೂ ಯಕ್ಷಗಾನ ವಿದ್ವಾಂಸ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರಿಗೆ, ಸುಂದರವಾಗಿ ಮುದ್ರಿಸಿಕೊಟ್ಟ ಓಂಶಿವಪ್ರಕಾಶ ಅವರಿಗೆ, ಹಸ್ತಪ್ರತಿ ಗಣಕೀಕರಣಗೊಳಿಸಲು ಸಹಕರಿಸಿದ ಶ್ರೀ ಎಸ್. ಆರ್. ರಘುಭಟ್ ಅವರಿಗೆ ತುಂಬು ಹೃದಯದ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇವೆ. ನಮಗೆ ಸಲಹೆ ಸಹಕಾರ ನೀಡಿ ನಮ್ಮ ಪ್ರತಿಷ್ಠಾನದ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿರುವ ಎಲ್ಲ ಯಕ್ಷಗಾನ ಅಭಿಮಾನಿಗಳಿಗೆ ಮತ್ತು ಪ್ರತಿಷ್ಠಾನದ ಎಲ್ಲ ಸದಸ್ಯರಿಗೆ ಹೃತ್ಪೂರ್ವಕ ವಂದನೆಗಳು.

ದಿನಾಂಕ 15.10.2023 **ಉಮೇಶ ಶಿರೂರು**

ನವರಾತ್ರಿ ಚರವಾಣಿ : 94483 53910

ಪರಿವಿಡಿ

ಶಿರೂರು ಫಣಿಯಪ್ಪಯ್ಯ ವಿರಚಿತ

ಯಕ್ಷಗಾನ

ಮಹೇಂದ್ರವಿಜಯ

[ಹಸ್ತಪ್ರತಿ ದಿನಾಂಕ 12–10–1965]

ಕಥಾಸಾರ

ನೀಲಾವತೀಪುರದಲ್ಲಿ ಶೂರಸೇನನೆಂಬ ಅರಸ. ಅವನ ರಾಣಿ ಕುಮುದ್ವತಿ. ನಹುಷನೆಂಬ ಮಂತ್ರಿ ಮತ್ತು ವಜೀರನೆಂಬ ದಳಪತಿ. ಮಕ್ಕಳಾಗದೆ ಇರುವ ಚಿಂತೆಯನ್ನು ಪರಿಹರಿಸಲು ಮಂತ್ರಿಯ ಸಲಹೆಯಂತೆ ಕಂಕಭಟ್ಟನೆಂಬ ಜೋಯಿಸನನ್ನು ಕರೆಸುತ್ತಾನೆ. ಯಜ್ಞ, ದಾನಾದಿಗಳಿಂದ ವಿಬುಧರನ್ನು ಸಂತೃಪ್ತಿಪಡಿಸಿದೆಯಾದರೆ ಸುಪುತ್ರಿಯೊಬ್ಬಳು ಜನಿಸುತ್ತಾಳೆ ಹಾಗೂ ಅವಳು ಅರುವತ್ತನಾಲ್ಕು ವಿದ್ಯೆಗಳಲ್ಲಿ ಪ್ರವೀಣೆಯಾಗುತ್ತಾಳೆ ಎಂದು ಜೋಯಿಸನು ಹೇಳುತ್ತಾನೆ. ಹಾಗೆಯೇ ಯಜ್ಞಾದಿಗಳನ್ನು ನಡೆಸಿದ ಮೇಲೆ ರಾಣಿಯು ಹೆಣ್ಣುಮಗುವಿಗೆ ಜನ್ಮನೀಡುತ್ತಾಳೆ. ಆ ಮಗುವಿಗೆ ಮಂಜರಿ ಎಂದು ನಾಮಕರಣ ಮಾಡುತ್ತಾರೆ. ಶುಕ್ಲಪಕ್ಷದ ಚಂದ್ರನಂತೆ ಅವಳು ಬೆಳೆಯುತ್ತಾಳೆ.

ಇತ್ತ ಚಂಪಕಾವತಿ ಎಂಬ ನಗರದಲ್ಲಿ ಬಲದೇವನೆಂಬ ಅರಸ. ಅವನಿಗೆ ಮಂಗಳೆ ಮತ್ತು ಭರಣಿಯರೆಂಬ ಇಬ್ಬರು ರಾಣಿಯರು. ಮಂಗಳೆಗೆ ಜಗಸಿಂಹನೆಂಬ ಕುಮಾರ. ಅವನು ಜಯನೆಂಬ ಮಂತ್ರಿಯ ಮಗನಾದ ಮಹೇಂದ್ರನ ಜೊತೆಗೆ ಆಸ್ಥಾನಕ್ಕೆ ಬರುತ್ತಾನೆ. ಆಗಲೇ ವನಪಾಲಕರು ಬಂದು ಮೃಗಗಳ ಹಾವಳಿಯೆಂದು ದೂರುತ್ತಾರೆ. ಅದನ್ನು ಕೇಳಿ ಜಗಸಿಂಹನು ಮಿತ್ರನೊಂದಿಗೆ ಬೇಟೆಯಾಡಿ ಬರುತ್ತೇನೆಂದು ಕಾಡಿಗೆ ಹೊರಡುತ್ತಾನೆ. ಬೇಟೆಯಾಡುತ್ತಾ ಬಂದ ಜಗಸಿಂಹನು ದಾರಿತಪ್ಪಿ ಏಕಾಂಗಿಯಾಗುತ್ತಾನೆ. ಗೆಳೆಯನನ್ನು ಕಾಣದೆ ಭಯಗೊಂಡು ಕಾಡಿನಿಂದ ತನ್ನ ಅರಮನೆಗೆ ಹಿಂದಿರುಗುತ್ತಾನೆ. ಮಂತ್ರಿಯ ಮಗ ಮಹೇಂದ್ರ ಗೆಳೆಯನನ್ನು ಅರಸುತ್ತಾ ಕಾಡಿನಲ್ಲೇ ಉಳಿಯುತ್ತಾನೆ.

ಅರಮನೆಯಲ್ಲಿ ಜಗಸಿಂಹನ ಚಿಕ್ಕಮ್ಮ ಭರಣಿಯು ಅವನ ಮೇಲೆ ಮೋಹಪರವಶಳಾಗುತ್ತಾಳೆ. ತನ್ನ ಕಾಮವಾಂಛೆಯನ್ನು ಅವನಲ್ಲಿ ಹೇಳಿಕೊಂಡಾಗ, ಅವನು ಅದನ್ನು ನಿರಾಕರಿಸುತ್ತಾನೆ. ಅವಳು ರೋಷಾನ್ವಿತೆಯಾಗಿ ಮರಣದಂಡನೆಯ ಶಿಕ್ಷೆಯನ್ನು ಕೊಡಿಸುತ್ತೇನೆಂದು ನುಡಿಯುತ್ತಾಳೆ. ಜಗಸಿಂಹನು ತನ್ನನ್ನು ಬಲಾತ್ಕರಿಸಿದನೆಂದು ಗಂಡನಿಗೆ ದೂರುನೀಡುತ್ತಾಳೆ. ಅದರಂತೆ ರಾಜಶಿಕ್ಷೆ ಪ್ರಕಟವಾಗುತ್ತದೆ. ಕಟುಕರು ಅವನನ್ನು ವಧಿಸಲು ಕಾಡಿಗೊಯ್ಯುತ್ತಾರೆ. ಕಾಡಿನಿಂದ ಮರಳಿದ ಮಂತ್ರಿಯ ಮಗ

ಮಹೇಂದ್ರನು ತನ್ನ ತಾಯಿಯಿಂದ ವಿಷಯವನ್ನು ತಿಳಿದು, ಮಿತ್ರನ ದುರವಸ್ಥೆಗಾಗಿ ಮರುಗಿ, ಅವನನ್ನು ಕಾಪಾಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ ಹೊರಡುತ್ತಾನೆ. ಕಟುಕರಿಗೆ ದ್ರವ್ಯವನ್ನು ನೀಡಿ, ಮಿತ್ರನ ಜೀವವನ್ನು ಉಳಿಸುತ್ತಾನೆ.

ಇತ್ತ ಶೂರಸೇನನು ಮಗಳು ಮಂಜರಿಗೆ ಪರಿಣಯವನ್ನು ಮಾಡಬೇಕೆಂದು ನಿಶ್ಚಯಿಸುತ್ತಾನೆ. ಆದರೆ ಅವಳು ತನ್ನನ್ನು ವಿದ್ಯೆಯಲ್ಲಿ ಮೀರಿಸಿದ ವರನನ್ನೇ ಮದುವೆಯಾಗುವೆನೆಂದು ಹೇಳುತ್ತಾಳೆ. ಅದಕ್ಕೊಪ್ಪಿದ ತಂದೆಯು ಅವಳ ಚಿತ್ರವನ್ನು ಬರೆಸಿ ದಿಗ್ದೇಶಗಳಿಗೆ ಕಳುಹಿಸುತ್ತಾನೆ. ಆ ಚಿತ್ರವನ್ನು ದೇವಾಲಯದ ಗೋಡೆಯಲ್ಲಿ ಕಂಡ ಜಗಸಿಂಹನಿಗೆ ಮನಸ್ಸು ಮಾರುಹೋಗಿ ಮೂರ್ಛೆಯುಂಟಾಗುತ್ತದೆ. ಅವನಿಗೆ ಶೈತ್ಯೋಪಚಾರ ಮಾಡಿ ವಿಚಾರಿಸಿದಾಗ ಮಹೇಂದ್ರನಿಗೆ ಸಂಗತಿಯೆಲ್ಲಾ ತಿಳಿಯುತ್ತದೆ. ಮಿತ್ರನಿಗೆ ಆ ಕನ್ಯೆಯನ್ನು ಹುಡುಕಿ ಮದುವೆಮಾಡಿಸುತ್ತೇನೆಂದು ಹೇಳಿ ಮಹೇಂದ್ರನು ಅಲ್ಲಿಂದ ಹೊರಟು ದ್ವಾರಾವತೀ ಪಟ್ಟಣಕ್ಕೆ ಬರುತ್ತಾನೆ. ಅಲ್ಲಿ ವಿಚಾರಿಸಿ ಚಿತ್ರಕಾರನನ್ನು ಹುಡುಕಿ ರಾಜಕುಮಾರಿಯ ವಿವರವನ್ನು ಸಂಗ್ರಹಿಸುತ್ತಾನೆ. ಮಹೇಂದ್ರನು ನೀಲಾವತೀಪಟ್ಟಣಕ್ಕೆ ಬರುತ್ತಾನೆ. ಅಡಗೂಳಜ್ಜಿಯ ಮನೆಯೊಂದರಲ್ಲಿ ಆಶ್ರಯವನ್ನು ಪಡೆದು ಅವಳಿಗೆ ದ್ರವ್ಯದಾಸೆ ತೋರಿಸಿ, ಅರಮನೆಗೆ ಹೋಗಿ ರಾಜಕುಮಾರಿಯ ಕುರಿತು ಮಾಹಿತಿ ಸಂಗ್ರಹಿಸುವಂತೆ ಕೇಳಿಕೊಳ್ಳುತ್ತಾನೆ. ಅದಕ್ಕೆ ಅವಳು "ಪ್ರತಿ ಶುಕ್ರವಾರದ ರಾತ್ರಿಯ ಹೊತ್ತು ರಾಜಕುಮಾರಿಯು ಕಾಳಿಕಾಲಯಕ್ಕೆ ಹೋಗುವಳು" ಎಂಬ ಸಂಗತಿಯನ್ನು ತಿಳಿಸುತ್ತಾಳೆ. ಅದರಂತೆ ಮಹೇಂದ್ರನು ಶುಕ್ರವಾರ ರಾತ್ರಿಯ ವೇಳೆಗೆ ಸರಿಯಾಗಿ ಕಾಳಿಕಾಲಯಕ್ಕೆ ಬಂದು ಕಾಯುತ್ತಾನೆ.

ವಿದ್ಯಾಮಂಜರಿಯು ರಾತ್ರಿಯ ಹೊತ್ತು ಕಾಳಿಕಾಮಂದಿರಕ್ಕೆ ಬಂದು ವಿವಸ್ತ್ರಳಾಗಿ ವೀಣೆಯನ್ನು ಬಾರಿಸಿ, ಹಾಡಿ ಕುಣಿದು ದೇವಿಯಲ್ಲಿ ಬೇಡುತ್ತಾಳೆ. ಶಿಲಾವಿಗ್ರಹವನ್ನು ಆಲಿಂಗಿಸಿಕೊಂಡು "ನಿನ್ನನ್ನು ಸಜೀವಗೊಳಿಸುತ್ತೇನೆ. ನನ್ನ ಅಂತಃಪುರಕ್ಕೆ ಬಂದು ನನಗೆ ಸುಖವನ್ನು ನೀಡಿ ಅನಂತರ ಮರಳಿ ಬಾ" ಎಂದು ವಿನಂತಿಸುತ್ತಾಳೆ. ಆಗ ಅದು "ನಿನ್ನ ಅಪೇಕ್ಷೆಯನ್ನು ನಾನು ಈಡೇರಿಸಲಾರೆ, ಶೀಘ್ರವೇ ನಿನಗೊಬ್ಬ ತರುಣನು ದೊರಕುತ್ತಾನೆ. ಇನ್ನು ಮುಂದೆ ಶಿವೆಯು ನಿನಗೆ ಒಲಿಯಲಾರಳು, ಆದರೆ ಮುಂದಿನ ವಾರ

ನರಬಲಿಯನ್ನು ಕೊಟ್ಟೆಯಾದರೆ ದೇವಿ ಒಲಿಯುತ್ತಾಳೆ" ಎಂದು ನುಡಿಯುತ್ತದೆ. ಮಂಜರಿ ಕೋಪದಿಂದ ಅರಮನೆಗೆ ಹಿಂತಿರುಗುತ್ತಾಳೆ. ಅದನ್ನು ಮಹೇಂದ್ರನು ನೋಡಿ ಕಾಮಾಕ್ಷಿ ಎಂಬ ಹೆಸರಿನ ಸ್ತ್ರೀವೇಷ ಧರಿಸಿ, ರಾಜಕುಮಾರಿಯಲ್ಲಿಗೆ ಬರುತ್ತಾನೆ. ಅವಳ ಸೇವೆಯನ್ನು ಮಾಡುತ್ತಾ ಒಲಿಸಿಕೊಂಡು ರತ್ನಹಾರ ಮತ್ತು ಮುದ್ರಿಕೆಯನ್ನು ಮೆಚ್ಚುಗೆಯಾಗಿ ಪಡೆಯುತ್ತಾನೆ.

ಇತ್ತ ಜಗಸಿಂಹನು ಸುತ್ತಾಡುತ್ತಾ ಬಂದು ಪದ್ಮಾವತಿಯೆಂಬ ವೇಶ್ಯೆಯ ಮನೆಯನ್ನು ಸೇರುತ್ತಾನೆ. ಮಹೇಂದ್ರನಾದರೋ ಮುಂದಿನ ವಾರ ಕಾಳಿಕಾಲಯಕ್ಕೆ ಬಂದು ನರಬಲಿಯನ್ನು ನೀಡಿ ದೇವಿಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಚೌಷಷ್ಟಿವಿದ್ಯೆಯನ್ನೂ, ಮೃತದೇಹವನ್ನು ಸ್ಪರ್ಶಿಸಿದ ಕೂಡಲೇ ಅವರು ಜೀವಂತಗೊಳ್ಳುವ ವರವನ್ನೂ ಪಡೆಯುತ್ತಾನೆ. ಅಷ್ಟು ಹೊತ್ತಿಗೆ ಕಾಳಿಕಾಲಯಕ್ಕೆ ಬಂದ ವಿದ್ಯಾಮಂಜರಿಯು ನರಬಲಿ ನಡೆದುದನ್ನು ತಿಳಿದು ಬೇಸರಗೊಂಡು ಹಿಂದಿರುಗುತ್ತಾಳೆ. ಮಹೇಂದ್ರನು ವರಬಲದಿಂದ ನರಬಲಿ ಕೊಟ್ಟವನನ್ನು ಬದುಕಿಸಿ ಕಳುಹಿಸುತ್ತಾನೆ. ಅವನಾದರೋ ನೇರವಾಗಿ ವಿದ್ಯಾಮಂಜರಿಯಲ್ಲಿಗೆ ಬಂದು ತನ್ನನ್ನು ವೀರನೊಬ್ಬ ಬದುಕಿಸಿದನೆಂದು ಹೇಳುತ್ತಾನೆ. ವಿದ್ಯಾಮಂಜರಿಯು ಆಘಾತಗೊಂಡು ನಿದ್ರಾಹಾರವನ್ನು ತ್ಯಜಿಸಿ ಹಾಸುಗೆ ಹಿಡಿಯುತ್ತಾಳೆ. ತಾಯಿತಂದೆಯರು ಬಂದು ಅವಳನ್ನು ಬಗೆಬಗೆಯಾಗಿ ಉಪಚರಿಸುತ್ತಾರೆ.

ಜಗಸಿಂಹನ ಧನವೆಲ್ಲ ಬರಿದಾಗಲು, ಪದ್ಮಾವತಿ ಅವನನ್ನು ಮನೆಯಿಂದ ಹೊರಹಾಕುತ್ತಾಳೆ. ಅಲ್ಲಿಂದ ಹೊರಟ ಜಗಸಿಂಹ ಧನಪಾಲನೆಂಬ ವೈಶ್ಯನ ಮನೆಯಲ್ಲಿ ಸೇವಕನಾಗಿರುತ್ತಾನೆ. ಇದನ್ನು ತಿಳಿದ ಮಹೇಂದ್ರನು ಮಿತ್ರನನ್ನು ಅಲ್ಲಿಂದ ಹೇಗೋ ಬಿಡಿಸಿ ಆವಂತಿಪಟ್ಟಣಕ್ಕೆ ಕರೆತಂದು ಮನೆಯೊಂದರಲ್ಲಿ ನೆಲೆಗೊಳಿಸುತ್ತಾನೆ. ಅನಂತರ ಪಕ್ಕದ ನೀಲಾವತಿನಗರದ ಉದ್ಯಾನದಲ್ಲಿ ಸನ್ಯಾಸಿಯ ವೇಷತೊಟ್ಟು ವಾಸಿಸುತ್ತಾನೆ. ಇದನ್ನು ತಿಳಿದ ರಾಜನು ಸನ್ಯಾಸಿಯನ್ನು ಅರಮನೆಗೆ ಕರೆತರುತ್ತಾನೆ. ಅಲ್ಲಿಗೆ ಬಂದ ವಿದ್ಯಾಮಂಜರಿಯನ್ನು ಕಂಡು ಅವಳ ಮನಸ್ಸಿನ ಇಂಗಿತವನ್ನು ಅರುಹುತ್ತಾನೆ. ಆದಷ್ಟು ಶೀಘ್ರದಲ್ಲಿ ರಾಜಕುಮಾರನೊಂದಿಗೆ ಮದುವೆಯಾಗುವೆ ಎಂದೂ ಭವಿಷ್ಯ ನುಡಿಯುತ್ತಾನೆ. ಅರಮನೆಗೆ ಯಾವಾಗ ಬೇಕಾದರೂ ಬರುವುದಕ್ಕಾಗಿ

ಅವಳಿಂದ ಗುರುತೊಂದನ್ನು ಪಡೆದು ತೆರಳುತ್ತಾನೆ. ಮುಂದೆ ವೈದ್ಯವೇಷವನ್ನು ಧರಿಸಿ ಬಂದು ಅವಳ ಶಿರೋವೇದನೆಯನ್ನು ಪರಿಹರಿಸುತ್ತಾನೆ.

ಇತ್ತ ಯಕ್ಷಕನ್ಯೆ ಕರ್ಣೋಜ್ವಲೆ ಎಂಬವಳು ಸಖಿಯರ ಸಹಿತ ಭೂಮಿಗೆ ವಿಹಾರಕ್ಕಾಗಿ ಬರುತ್ತಾಳೆ. ಅಲ್ಲಿ ಜಗಸಿಂಹನನ್ನು ಕಂಡು ಮೋಹಪರವಶಳಾಗುತ್ತಾಳೆ. ತನ್ನ ಪರಿಚಯವನ್ನು ಹೇಳಿ ಅವನನ್ನು ಯಕ್ಷಲೋಕಕ್ಕೆ ಕರೆದೊಯ್ಯುತ್ತಾಳೆ. ತಂದೆಯಾದ ಯಕ್ಷರಾಜ ಪಿಂಗಳನಲ್ಲಿಗೆ ಬಂದು ತನ್ನ ಪ್ರಣಯವಿಚಾರವನ್ನು ಅರುಹುತ್ತಾಳೆ. ಆದರೆ ಮಾನವರೊಂದಿಗಿನ ವಿವಾಹಸಂಬಂಧಕ್ಕೆ ಇಂದ್ರನ ಅನುಮತಿಯು ಬೇಕೆಂದು ಪಿಂಗಳನು ದೇವೇಂದ್ರನಲ್ಲಿಗೆ ಬಂದು ವಿನಂತಿಸುತ್ತಾನೆ. ಅದಕ್ಕೆ ಒಪ್ಪದ ದೇವೇಂದ್ರನಲ್ಲಿ ಜಗಸಿಂಹನು ಪರಿಪರಿಯಾಗಿ ವಾದಮಾಡುತ್ತಾನೆ. ಅದರಿಂದ ಕುಪಿತನಾದ ದೇವೇಂದ್ರನು ಅವನಿಗೆ ಶಿಲೆಯಾಗೆಂದು ಶಪಿಸುತ್ತಾನೆ. ಕರ್ಣೋಜ್ವಲೆಗೂ ನಾಯಿಯಾಗುವಂತೆ ಶಾಪನೀಡುತ್ತಾನೆ.

ಜಗಸಿಂಹನನ್ನು ಹುಡುಕುತ್ತಾ ಬಂದ ಮಹೇಂದ್ರನನ್ನು ಕಾಡಿನಲ್ಲಿ ದರೋಡೆಕೋರರು ಅಡ್ಡಗಟ್ಟುತ್ತಾರೆ. ಅವರನ್ನು ಬಡಿದು ಮನೆಗೆ ಬರುವಾಗ ಮಹೇಂದ್ರನು ಸ್ತ್ರೀಯರ ಜೊತೆಗೆ ಹೋದನೆಂಬ ವಿಚಾರ ತಿಳಿಯುತ್ತದೆ. ಮಿತ್ರನನ್ನು ಹುಡುಕುತ್ತಾ ಅಡವಿಮಧ್ಯದಲ್ಲಿ ಬರುವಾಗ ಮಹಾಜ್ವಾಲೆ ಎಂಬ ರಾಕ್ಷಸಿ ಎದುರಾಗುತ್ತಾಳೆ. ಮುದುಕಿಯ ರೂಪದಿಂದ ಅವಳು ಹತ್ತಿರ ಬಂದು ಮೋಸದ ಮಾತನ್ನಾಡಿ ಮಹೇಂದ್ರನನ್ನು ತನ್ನ ಗುಹೆಯೊಳಗೆ ಕರೆದೊಯ್ಯುತ್ತಾಳೆ. ಅಲ್ಲಿರುವ ಕನ್ಯೆಯೊಬ್ಬಳಿಂದ ಅದು ರಕ್ಕಸರ ತಾಣವೆಂಬುದು ತಿಳಿಯುತ್ತದೆ. ಅಷ್ಟರಲ್ಲಿಗೆ ಬಂದ ಪ್ರಲಂಬನೆಂಬ ರಾಕ್ಷಸನು ಆ ಕನ್ಯೆಯನ್ನು ಪೀಡಿಸುತ್ತಾನೆ. ಆಗ ಮುಂದೆ ಬಂದ ಮಹೇಂದ್ರನು ಆ ರಾಕ್ಷಸನನ್ನು ಕೊಲ್ಲುತ್ತಾನೆ. ಆಗ ಅವನಿಗೆ ವಂದಿಸಿದ ಆ ಕನ್ಯೆ ತನ್ನ ನಿಜವನ್ನು ತಿಳಿಸುತ್ತಾ ತಾನು ಗಂಧರ್ವ ಭೃಂಗಾಧರನ ಮಗಳು ಕುಂಭೋದರಿ ಎಂದು ತಿಳಿಸುತ್ತಾಳೆ. ಗಂಧರ್ವವಿಧಿಯಿಂದ ಅವರೀರ್ವರೂ ಮದುವೆಯಾಗಿ ಅಲ್ಲಿಂದ ತೆರಳುತ್ತಾರೆ.

ಇದರಿಂದ ಚಿಂತೆಗೊಳಗಾದ ಮಹಾಜ್ವಾಲೆಯು ಪಾತಾಳದಲ್ಲಿರುವ ಅಣ್ಣ ಹಿಡಿಂಬಾಸುರನೆಡೆಗೆ ಬರುತ್ತಾಳೆ. ಕುಂಭೋದರಿಯ ಸೌಂದರ್ಯವನ್ನು ಬಣ್ಣಿಸಿ ಅವಳನ್ನು ಪಡೆಯಬೇಕೆನ್ನುತ್ತಾಳೆ. ಅದರಂತೆ ಕಾಡಿನಲ್ಲಿ ಹುಡುಕುತ್ತಾ

ಬಂದ ಹಿಡಿಂಬಾಸುರನು ಕುಂಭೋದರಿ ಒಬ್ಬಳೇ ಇರುವ ಸಮಯದಲ್ಲಿ ಅವಳನ್ನು ಸೆಳೆದೊಯ್ಯುತ್ತಾನೆ. ಮಹೇಂದ್ರನು ಕುಂಭೋದರಿಯನ್ನು ಹುಡುಕುತ್ತಾ ಬಂದು ಮರದ ಬೇರೊಂದನ್ನು ಎಡಹಿದಾಗ ಬೃಹದಾಕಾರದ ಭೂತವೊಂದು ಕಾಣಿಸುತ್ತದೆ. ದೇವಿಯ ವರಬಲದಿಂದ ಆ ಭೂತವನ್ನು ನಿಯಂತ್ರಿಸಿದಾಗ ಅದು ಹಿಡಿಂಬನ ಸೆರೆಯಿಂದ ಕುಂಭೊದರಿಯನ್ನು ಬಿಡಿಸಿ ತರುವೆನೆಂದು ಹೇಳುತ್ತದೆ. ಶ್ರೀಕಾಳಿಕಾಂಬೆಯನ್ನು ಸ್ತುತಿಸಿದ ಕೂಡಲೇ ಅವಳು ಪ್ರತ್ಯಕ್ಷಳಾಗಿ "ಮಗುವೆ, ಎರಡು ಕಲ್ಲುಗಳನ್ನು ನಿನಗೆ ನೀಡುತ್ತೇನೆ. ಅವುಗಳಲ್ಲಿ ಒಂದನ್ನು ಪಶ್ಚಿಮದಿಕ್ಕಿನಲ್ಲಿರುವ ಹುತ್ತದ ಬಳಿಯಿರುವ ಹಾವಿನ ಮೇಲೆ ಬಿಸಾಡು. ಆದ ಅದು ಮಾನವರೂಪ ತಳೆದು ನಿನ್ನನ್ನು ಪಾತಾಳಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ ಮತ್ತೊಂದು ಕಲ್ಲನ್ನು ಬಿಸಾಡಲು ರಾಕ್ಷಸನು ನಿದ್ರೆಗೆ ಜಾರುತ್ತಾನೆ. ಆಗ ನೀನು ನಿನ್ನ ಮನದನ್ನೆಯನ್ನು ಹುಡುಕಿ ಹಿಂದಕ್ಕೆ ಕರೆತಾ" ಎಂದು ಅಭಯವೀಯುತ್ತಾಳೆ. ಅದರಂತೆ ಮಹೇಂದ್ರನು ಪಾತಾಳಕ್ಕೆ ಹೋಗಿ, ರಾಕ್ಷಸನನ್ನು ಸಂಹರಿಸಿ ಕುಂಭೋದರಿಯನ್ನು ಹುಡುಕಿ ಕರೆತರುತ್ತಾನೆ. ತನ್ನ ಮಿತ್ರ ಜಗಸಿಂಹನ ಸಂಗತಿಯನ್ನು ಅವಳಿಗೆ ತಿಳಿಸಿದಾಗ, ಅವನಿಗೆ ದೇವಲೋಕದಲ್ಲಿ ಉಂಟಾದ ಪರಿಭವವನ್ನು ಹೇಳುತ್ತಾಳೆ. ಅವನನ್ನು ಬಿಡಿಸಬೇಕೆಂದಿದ್ದರೆ, ಇಂದ್ರನ ಮಗಳಾದ ದುಂದುಭಿ ಎಂಬವಳು ಜಲಕ್ರೀಡೆಗೆ ಬಂದಾಗ ಬಂಧಿಸಿಡು ಎಂದೂ ಹೇಳುತ್ತಾಳೆ. ಅಷ್ಟರಲ್ಲಿ ಅಲ್ಲೇ ಸುಳಿದ ನಾಯಿಯನ್ನು ಕರ್ಣೋಜ್ವಲೆಯೆಂದು ತಿಳಿದು, ಮಂತ್ರಜಲವನ್ನು ತಳಿದು ಹಿಂದಣ ರೂಪವನ್ನು ನೀಡೆಂದು ಸೂಚಿಸುತ್ತಾಳೆ. ಅದರಂತೆ ಮಾಡಿದಾಗ ಅವಳು ಶಾಪವಳಿದು ಮೊದಲ ರೂಪವನ್ನು ಪಡೆಯುತ್ತಾಳೆ. ಅನಂತರ ಇಂದ್ರನಂದನೆಯಾದ ದುಂದುಭಿಯು ಬಂದುದನ್ನರಿತು ಅವಳನ್ನು ಮಹೇಂದ್ರನು ಸೆರೆಯಲ್ಲಿಡುತ್ತಾನೆ.

ಇತ್ತ ದೇವೇಂದ್ರನು ತನ್ನ ಮಗಳನ್ನು ಹುಡುಕುತ್ತಾನೆ. ಕುಂಭೋದರಿಯು ತನ್ನ ತಂದೆಯನ್ನು ನೋಡಲೆಂದು ದೇವಲೋಕಕ್ಕೆ ತೆರಳುತ್ತಾಳೆ. ಅಲ್ಲಿ ತನ್ನ ಕಥೆಯನೆಲ್ಲಾ ತಂದೆಗೆ ತಿಳಿಸುತ್ತಾಳೆ. ತನಗೆ ಉಪಕರಿಸಿದ ಮಹೇಂದ್ರನ ಮಿತ್ರನಾದ ಜಗಸಿಂಹನು ಇಂದ್ರಶಾಪದಿಂದ ಕಲ್ಲಾಗಿರುವುದನ್ನು ತಿಳಿದು, ಇಂದ್ರಸುತೆಯಾದ ದುಂದುಭಿಯನ್ನು ಮಹೇಂದ್ರನು ಸೆರೆಯಲ್ಲಿರಿಸಿ ಕೊಂಡುದನ್ನೂ ಹೇಳುತ್ತಾಳೆ. ಅದನ್ನು ಕೇಳಿದ ಪಿಂಗಳನು ಇಂದ್ರನಿಗೆ

ಸಂಗತಿಯೆಲ್ಲವನ್ನೂ ತಿಳಿಸಿ, ಭೂಲೋಕಕ್ಕೆ ಬಂದು ಮಹೇಂದ್ರನ ಮೈತ್ರಿಯನ್ನು ಗಳಿಸಿ ದೇವಲೋಕಕ್ಕೆ ಕರೆತರುತ್ತಾನೆ. ಮಹೇಂದ್ರನು ಮಂತ್ರಜಲದಿಂದ ಜಗಸಿಂಹನ ಶಾಪವನ್ನು ಕಳೆಯುತ್ತಾನೆ. ಆಗ ಅವನು ಮಹೇಂದ್ರನ ಉಪಕಾರವನ್ನು ಸ್ಮರಿಸಿ, ಪ್ರತಿಯಾಗಿ ವಿದ್ಯಾಮಂಜರಿಯನ್ನು ಮದುವೆಯಾಗೆಂದು ಬಿನ್ನವಿಸುತ್ತಾನೆ. ಎಲ್ಲರೂ ನೀಲಾವತೀಪಟ್ಟಣಕ್ಕೆ ಆಗಮಿಸಿ ಶೂರಸೇನದೊರೆಯನ್ನು ಭೇಟಿಯಾಗುತ್ತಾರೆ. ವಿದ್ಯಾಮಂಜರಿಯನ್ನು ಮದುವೆಯಾಗಲು ಬಂದಿರುವೆನೆಂದು ಮಹೇಂದ್ರನು ಹೇಳಲು, ವಿದ್ಯಾಮಂಜರಿಯು ಯೋಚಿಸುತ್ತಾಳೆ. ಆಗ ಮಹೇಂದ್ರನು ಹಿಂದೆ ಕಾಳಿಕಾಲಯದಲ್ಲಿ ನಡೆದ ಘಟನೆಯನ್ನು ನಿರೂಪಿಸಿ, ಅವಳಲ್ಲಿಗೆ ಸಂನ್ಯಾಸಿ ಮತ್ತು ವೈದ್ಯನಾಗಿ ತಾನು ಬಂದ ವಿಷಯವನ್ನು ತಿಳಿಸಿ, ರತ್ನಹಾರ ಮತ್ತು ಮುದ್ರಿಕೆಗಳನ್ನು ಕುರುಹಾಗಿ ತೋರಿಸುತ್ತಾನೆ. ವಿದ್ಯಾಮಂಜರಿಯು ಕ್ಷಮೆಯನ್ನು ಯಾಚಿಸಿ ಮದುವೆಯಾಗಲು ಸಮ್ಮತಿಸುತ್ತಾಳೆ. ಮಹೇಂದ್ರನೊಂದಿಗೆ ಭೃಂಗಾಧರನ ಮಗಳಾದ ಕುಂಭೋದರಿಯ ವಿವಾಹವೂ, ಶೂರಸೇನಸುತೆ ವಿದ್ಯಾಮಂಜರಿಯ ವಿವಾಹವೂ ಜರಗುತ್ತದೆ. ಅಲ್ಲಿಯೇ ಜಗಸಿಂಹನೊಂದಿಗೆ ಇಂದ್ರನ ಮಗಳಾದ ದುಂದುಭಿಯ ವಿವಾಹವೂ, ಪಿಂಗಳ ಪುತ್ರಿಯಾದ ಕರ್ಣೋಜ್ವಲೆಯ ವಿವಾಹವೂ ನೆರವೇರುತ್ತದೆ. ಮಂಗಲ.

* * * * *

ಪಾತ್ರಗಳು

1. ಶೂರಸೇನ – ನೀಲಾವತಿಯ ಅರಸ
2. ಕುಮುದ್ವತಿ – ಶೂರಸೇನನ ರಾಣಿ
3. ಕಂಕಭಟ್ಟ – ಜೋಯಿಸ
4. ವಿದ್ಯಾಮಂಜರಿ – ಶೂರಸೇನನ ಮಗಳು
5. ಬಲದೇವ – ಚಂಪಕಾವತಿಯ ಅರಸ
6. ಮಂಗಳೆ – ಬಲದೇವನ ಹಿರಿಯ ರಾಣಿ
7. ಭರಣಿ – ಬಲದೇವನ ಕಿರಿಯ ರಾಣಿ
8. ಜಗಸಿಂಹ – ಮಂಗಳೆಯ ಮಗ
9. ಮಹೇಂದ್ರ – ಬಲದೇವನ ಮಂತ್ರಿಯ ಮಗ
10. ಕಾಮಾಕ್ಷಿ – ಮಹೇಂದ್ರನ ಸ್ತ್ರೀವೇಷ
11. ಪದ್ಮಾವತಿ – ವೇಶ್ಯೆ
12. ಕಾಳಿಕಾದೇವಿ
13. ಧನಪಾಲ – ವೈಶ್ಯ
14. ಸನ್ಯಾಸಿ – ಮಹೇಂದ್ರನ ಮಾರುವೇಷ
15. ವೈದ್ಯ – ಮಹೇಂದ್ರನ ಮಾರುವೇಷ
16. ಕರ್ಣೋಜ್ವಲೆ – ಪಿಂಗಳನೆಂಬ ಯಕ್ಷನ ಮಗಳು
17. ಪಿಂಗಳ – ಯಕ್ಷ
18. ಮಹಾಜ್ವಾಲೆ – ರಾಕ್ಷಸಿ
19. ಮುದುಕಿ – ಮಹಾಜ್ವಾಲೆ ಎಂಬ ರಾಕ್ಷಸಿಯ ಕಪಟರೂಪ
20. ಪ್ರಲಂಬಾಸುರ – ರಾಕ್ಷಸ
21. ಕುಂಭೋದರಿ – ಗಂಧರ್ವ ಭೃಂಗಾಧರನ ಮಗಳು
22. ಹಿಡಿಂಬಾಸುರ – ಪಾತಾಳದ ರಾಕ್ಷಸ
23. ದುಂದುಭಿ – ದೇವೇಂದ್ರನ ಮಗಳು
24. ವನಪಾಲಕರು
25. ಕಟುಕರು
26. ಚಿತ್ರಕಾರ
27. ಅಡಗೂಳಜ್ಜಿ
28. ಭೂತ
29. ನರಬಲಿಗೆ ತುತ್ತಾಗುವ ಮುಗ್ಧ ಇತ್ಯಾದಿ

****

॥ ಶ್ರೀ ಗಣಾಧಿಪತಯೇ ನಮಃ ॥

॥ ಶಾರ್ದೂಲವಿಕ್ರೀಡಿತ ವೃತ್ತ ॥

ಶ್ರೀಲಕ್ಷ್ಮೀವದನಾರವಿಂದಮಿಹಿರಂ । ತ್ರೈಲೋಕರಕ್ಷಾಮಣಿಂ ।
ಬಾಲಾದಿತ್ಯಸಹಸ್ರಭಾಸುರಯುತಂ । ಫಾಲಾಕ್ಷಮಿತ್ರಂ ಹರಿಂ ॥
ಖೂಳಧ್ವಂಸಮಭಂಗತಾತಮಮಲಂ । ನೀಲಾಂಗಸನ್ಮೋಹನಂ ।
ವ್ಯಾಳಾಧೀಶಸುತಲ್ಪ ಭಕ್ತಜನಸಂ । ಮೇಳಂ ಸದಾ ಭಾವಯೇ ॥ 1 ॥

॥ ನಾಟಿ – ರೂಪಕ ॥

ಜಯಗೌರೀಸುತ ವಿಘ್ನಾ । ಬ್ಧಿಯ ಕುಂಭಜ ಗಣಪಾಲಕ ।
ಭಯವರ್ಜಿತ ಸುಕಲಾನ್ವಿತ । ದಯವಿರಿಸ್ಯೆ ಸತತ ॥
ಲಯವಿರಹಿತಚರಣ ಕುಶೇ । ಶಯ ನಂಬಿದಜನ ಪಾಲಿತ ।
ಪ್ರಿಯಮೋದಕ ಕರುಣಿಸು ಸುಮ । ತಿಯ ಪೊರೆ ಸಿರಿಬೆನಕ ॥
ಜಯಜಯ ಜಯಜಯತೂ ॥ 2 ॥

ಪಾಶಾಂಕುಶಧರ ಸುಂದರ । ಮೂಷಿಕವಾಹನ ಶುಭಕರ ।
ಈಶಾತ್ಮಜ ನಂಬಿದೆ ವಿ । ಘ್ನೇಶನೆ ಭವನಾಶ ॥
ದೋಷವಿದೂರಣ ದುಷ್ಟವಿ । ನಾಶನ ಸಜ್ಜನಪೋಷಣ ।
ವಾಸವಮುಖ್ಯದಿವೌಕಸ । ಪೋಷಕ ದಯವಿರಿಸು ॥
ಜಯಜಯ ಜಯಜಯತೂ ॥ 3 ॥

ಗಜಮುಖ ತ್ರೈಜಗಪಾವನ । ಭುಜಗವಿಭೂಷಣ ಸಜ್ಜನ ।
ವ್ರಜಪಾಲಿತ ಶಂಕರಸುತ । ರಜನಿಪ ಮದಭಂಗ ॥
ಕುಜನಕುಠಾರನೆ ಶಿರಿಪುರ । ನಿಜವಾಸನೆ ನಿರ್ವಿಘ್ನದಿ ।
ಸೃಜಿಸುವ ಸತ್ಕಥೆ ಮೆರೆಸುತ । ಸುಜನರ ಪೊರೆ ದಯದಿ ॥ 4 ॥

॥ ವಾರ್ಧಕ ॥

ಶರಣಜನಪಾಲನಂ ಕರುಣಾಲವಾಲನಂ ।
ಗಿರಿಸುತಾಲೋಲನಂ ವರರುಂಡಮಾಲನಂ ।
ಕರಿವದನತಾತನಂ ನೆರೆಭೂತವ್ರಾತನಂ ಸೋಮನಂ ಜಿತಕಾಮನಂ ॥

ಶರಧಿಸುತಧಾರನಂ ಸುರಕುಲೋದ್ಧಾರನಂ ।
ಮುರಹರನ ಮಿತ್ರನಂ ಜಗದಿ ಸುಪವಿತ್ರನಂ ।
ಶಿರಿಪುರದ ವಾಸನಂ ದೇವ ಯಲಗೇಶನಂ ಭಜಿಸಿ ಮತಿಯಂ ಪಡೆವೆನು ॥ 5 ॥

॥ **ಭಾಮಿನಿ** ॥

ಮಾತೆ ಪಿತರನು ನೆನೆದು ಲಕ್ಷ್ಮೀ ।
ನಾಥಗೊಂದಿಸಿ ಸಕಲ ಮುನಿಜನ ।
ವ್ರಾತಕೆರಗುತ ಗುರುಪದಾಂಬುಜ ಮನದಿ ಧ್ಯಾನಿಸುತ ॥
ಭೂತಪತಿ ಗುಹ ಗಣಪ ಶಾರದೆ ।
ವೀತಿಹೋತ್ರಸಖಾತ್ಮಜಾತ ಮ ।
ಹೀತಳಾತ್ಮಜೆಯರಸ ಮುಖ್ಯರಿಗೆರಗಿ ಪೇಳುವೆನು ॥ 6 ॥

॥ **ದ್ವಿಪದಿ** ॥

ಕಮಲಸಂಭವ ಸರಸ್ವತಿಯರನು ನೆನೆದು ।
ಕಮಲನಾಭನಿಗಿಂದಿರೆಗೆ ಮನದಿ ಮಣಿದು ॥ 7 ॥

ಹರಗಿಜೆಯರಿಗೆರಗಿ ಸಕಲ ನವಗ್ರಹರ ।
ಚರಣಕೆರಗುತ ನೆನೆವುತಿಂದ್ರಾದಿ ಸುರರ ॥ 8 ॥

ರಚಿಸುವ ಕಾವ್ಯವಿದನಾರು ದೂಷಿಸದೆ ।
ಮೆರೆಸಿ ತಪ್ಪನು ತಿದ್ದಿ ದ್ವೇಷಸಾಧಿಸದೆ ॥ 9 ॥

ಹೆಚ್ಚುಕುಂದುಗಳಿರಲು ಸರಿಪಡಿಸಿ ಜಗದಿ ।
ಮೆಚ್ಚುವಂದದಿ ಮೆರೆಸಿರೆಂಬೆ ಕವಿವ್ರಜದಿ ॥ 10 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಭೂವಲಯದೊಳು ಶೋಭಿಸುವ ಗೋ ।
ದಾವರೀ ತೀರದೊಳಿರುವ ನೀ ।
ಲಾವತೀಪುರವರವನಾಳುತ ।
ಭೂವರೇಣ್ಯಾ ॥ 11 ॥

ಶೂರಸೇನನೆನಿಪ್ಪ ಘನಗಂ ।
ಭೀರವಿಕ್ರಮಿ ತನ್ನ ಪಟ್ಟದ ।

ನಾರಿಯಾದ ಕುಮುದ್ವತಿಯು ಸಹ ।
ಸೇರಿ ಸುಖದಿ ॥ 12 ॥

ಮಂತ್ರಿ ನಹುಷನು ಸಹ ವಜೀರನು ।
ಯೆಂತೆನುವ ದಳಪತಿಯ ಕೂಡಿ ಮ ।
ಹಾಂತ ವೈಭವದಿಂದ ಸುರಪತಿ ।
ಗಿಂತ ಮಿಗಿಲು ॥ 13 ॥

ಧರ್ಮಲೋಪವು ಬಾರದಂತೆ ಸು ।
ಕರ್ಮನಿರತದಿ ಸಕಲ ಪ್ರಜೆಗಳ ।
ಮರ್ಮವರಿದಾಳುತಿರೆ ಜಗದಿ ಸು ।
ಧರ್ಮಿಯೆನಿಸಿ ॥ 14 ॥

ಇಂತು ವಿಭವದೊಳಿರ್ದ ರಾಜಗೆ ।
ಸಂತತಿಗಳಿಲ್ಲೆಂಬ ಘನತರ ।
ಚಿಂತೆಯೊಂದಾವರಿಸುತರುಹಿದ ।
ಮಂತ್ರಿವರಗೆ ॥ 15 ॥

॥ ಕೇದಾರಗೌಳ – ಝಂಪೆ ॥

ಕೇಳು ಸಚಿವಾಗ್ರೇಸರ । ಮನದೊಳಗೆ ।
ತಾಳಿಹೆನು ಬಲು ಬೇಸರ ॥
ಭೂಲಲನೆಯಾಳುತಿಂತು । ವೈಭವದಿ ।
ಕಾಲವೀವರೆಗೆ ಸಂತು ॥ 16 ॥

ಮುಂದೀ ಧರಿತ್ರಿಯಾಳಿ । ಮತ್ಕುಲಕೆ ।
ಕುಂದು ಬರದಂತೆ ಬಾಳಿ ॥
ಪೊಂದುವರ್ಭಕರಿಲ್ಲದೆ । ಇನಿತಿರ್ದ ।
ರಿಂದು ಸೊಗಸಿದಕೆಲ್ಲಿದೆ ॥ 17 ॥

ಸುತರಿಲ್ಲದಿಹ ಮನುಜಗೆ । ಮುಂದೆ ಸ ।
ದ್ಗತಿ ದೊರಕದೆಂದು ಹೀಗೆ ॥
ಶ್ರುತಿವಚನವಿರಲಿಕೆಂತು । ಗೈವುದೆನ ।
ಲತಿನಯದೊಳೊರೆದನಿಂತು ॥ 18 ॥

॥ ಸಾಂಗತ್ಯ – ರೂಪಕ ॥

ಭುವಿಯಾಣ್ಮ ಕೇಳವರವರ ಪೂರ್ವಜನ್ಮಾರ್ಜಿ ।
ತವ ಬಲ್ಲರಾರು ತತ್ಫಲದಿ ॥
ಕುವರಸಂತಾನವಾಗುವುದಲ್ಲದನ್ಯ ಸಂ ।
ಭವಿಸಲಾರದು ಪುಣ್ಯ ಜಗದಿ ॥ 19 ॥

ಆದರೂ ಮನದಿ ನೀ ಖೇದಗೊಳ್ಳದೆ ಯೋಗ್ಯ ।
ರಾದ ಭೂದಿವಿಜರ ಕರೆಸಿ ॥
ಸಾದರದಲಿ ಯಜ್ಞದಾನಾದಿ ಸತ್ಕಾರ್ಯ ।
ಮೋದದೊಳೆಸಗು ಸತ್ಕರಿಸಿ ॥ 20 ॥

ಆ ಪುಣ್ಯಫಲದಿಂದ ಮುಂದಕೆ ಸತ್ಕುಲ ।
ದೀಪರಾಗುವರು ನಿಶ್ಚಯವು ॥
ಭೂಪ ನಿನ್ನಯ ಧರ್ಮ ಕೈಬಿಡದೆನೆ ಮಂತ್ರಿ ।
ಗಾ ಪರಿಯೆಸಗೆಂದು ಬೆಸಸೆ ॥ 21 ॥

॥ ಭಾಮಿನಿ ॥

ಭೂವರೇಣ್ಯನ ನುಡಿಗೆ ಸಚಿವ ಯ ।
ಥಾವಿಧಿಯೊಳೆಸಗುವರೆನುತ ಧರ ।
ಣೀವಿಬುಧನಹ ಕಂಕಭಟ್ಟನೆನಿಪ್ಪ ಜ್ಯೋತಿಷನ ॥
ಸಾವಧಾನದಿ ಕರೆಸುತವನೊಡ ।
ನೀ ವಿಷಯವರುಹಲ್ಕೆ ಜ್ಯೋತಿ ।
ರ್ಭಾವವೆಣಿಸುತ ಶೋಧಿಸುತಲಿಂತೊರೆದನಾ ವಿಪ್ರ ॥ 22 ॥

॥ ಸಾರಂಗ – ಅಷ್ಟ ॥

ಸೃಷ್ಟಿಪಾಲನೆ ಲಾಲಿಸಯ್ಯಾ । ಮನ ।
ದಿಷ್ಟಾರ್ಥವಹಡೆ ಕೇಳಯ್ಯಾ ॥
ಶ್ರೇಷ್ಠತರದ ಯಜ್ಞದಾನಭೋಜನದಿ ಸಂ ।
ತುಷ್ಟಿಪಡಿಸು ಭೂದಿವಿಜರನು ಸುರರನು ॥ 23 ॥

ಹಲವುರೀತಿಯೊಳು ಶೋಧಿಸಲು । ಪುತ್ರ ।
ಫಲವಿಲ್ಲ ನಿನಗೀ ಜನ್ಮದೊಳು ॥
ಬಳಿಕ ನೀನೀ ವಿಧದೊಳು ಗೈದ ಪುಣ್ಯದೊ ।
ಳೊಲಿದು ಶಾರದೆಯನುಗ್ರಹಿಪಳು ಸುತೆಯನು ॥ 24 ॥

ಆ ಸರಸ್ವತಿಯನುಗ್ರಹದಿ । ಪುಟ್ಟು ।
ವಾ ಸುತೆ ಮುಂದೆ ಭೂತಳದಿ ॥
ಚೌಷಷ್ಟಿವಿದ್ಯೆಯೊಳಧಿಕ ಕೋವಿದೆಯಾಗಿ ।
ಲೇಸಹುದವಳಿಂದಲೀಸು ನಂಬಿರು ನೀನು ॥ 25 ॥

॥ **ವಾರ್ಧಕ** ॥

ಎಂದ ಭೂಸುರನ ವಚನವ ಕೇಳಿ ಭೂಪ ಮುದ ।
ದಿಂದ ಯೋಚಿಸುತೆಂದನಾದುದಾಗಲಿ ಪುತ್ರ ।
ನಿಂದ ಶತಗುಣ ಪುತ್ರಿಯಂ ಬರೆದರಿಂದಲೇನೆನುತ ಸಂತೋಷದಿಂದ ॥
ಎಂದ ರೀತಿಯಲಿ ಯಾಗಾದಿ ಸತ್ಕಾರ್ಯಂಗ ।
ಳಂ ಧರಣಿಪತಿಯೆಸಗುತಿರಲದರ ಪುಣ್ಯಫಲ ।
ದಿಂದ ಭೂಮಿಪನರಸಿ ಗರ್ಭಮಂ ಧರಿಸಿ ಪಡೆದಳು
ಸುತೆಯನೇನೆಂಬೆನು ॥ 26 ॥

॥ **ಕಂದಪದ್ಯ** ॥

ಪುಟ್ಟಿದ ಸುತೆಯನ್ನೀಕ್ಷಿಸಿ ।
ಸೃಷ್ಟಿಪ ಸಂತಸದಾಳುತ ಕುವರಿಗೆ ಪೆಸರ ।
ನ್ನಿಟ್ಟನು ಮಂಜರಿಯೆನ್ನುತ ।
ತೊಟ್ಟಿಲೊಳಾ ಶಿಶುವನಿಟ್ಟು ತೂಗಿದರೊಲವಿಂ ॥ 27 ॥

॥ **ಜೋಗುಳ** ॥

ಜೋಜೋ ನವಮೋಹನಾಂಗಿ ಸುಶೀಲೆ ।
ಜೋಜೋ ಚಾರುಚಂದಿರಮುಖಿ ಬಾಲೆ ।
ಜೋಜೋ ಸುಗುಣೆ ದರ್ಪಣಸುಕಪೋಲೆ ।
ಜೋಜೋ ಶಾರದೆ ಸಲಹಲಿ ಮೇಲೆ ॥ ಜೋಜೋ ॥ 28 ॥

ಕನ್ಯಾಶಿರೋಮಣಿ ಸನ್ಮೋಹನಾಂಗಿ ।
ಮನ್ಮಥನರಗಿಣಿಯೊಲು ಸುಂದರಾಂಗಿ ।
ಚಿನ್ನದ ಲತೆಯಂತೊಪ್ಪುವ ಕೋಮಲಾಂಗಿ ।
ನಿನ್ನ ಕಾಪಾಡಲಿ ಹರಿ ಮಂಜುಳಾಂಗಿ ॥ ಜೋಜೋ ॥ 29 ॥

ಕುವಲಯಾಂಬಕಿ ಮಾರನರಗಿಣಿ ಜೋಜೋ ।
ಅವನಿಪ ಶೂರಸೇನಾತ್ಮಜೆ ಜೋಜೋ ।
ಯುವತಿ ಕುಮುದ್ವತಿಯಣುಗೆ ನೀ ಜೋಜೋ ।
ಶಿವನರ್ಧಾಂಗಿಯು ಸದಾ ಸಲಹಲಿ ಜೋಜೋ ॥ ಜೋಜೋ ॥ 30 ॥

॥ ಭಾಮಿನಿ ॥

ಶಿಶುವ ತೊಟ್ಟಿಲೊಳಿಟ್ಟು ಪಾಡುತ ।
ಕುಸುಮನೇತ್ರೆಯರತ್ತ ತೆರಳಲು ।
ವಸುಮತೀಶನ ನಿಳಯದೊಳಗಾ ಬಾಲೆ ದಿನದಿನಕೆ ॥
ಶಶಿಯ ತೇಜದಿ ಜನನಿಜನಕರಿ ।
ಗೆಸೆವ ಲೀಲೆಯ ತೋರಿ ಬೆಳೆಯುತ ।
ಮಿಸುನಿಯಂತಿರಲ್ಯೆದು ವತ್ಸರಮಾಗಲಾ ಸುತೆಗೆ ॥ 31 ॥

॥ ಕಂದಪದ್ಯ ॥

ಧರಣಿಪ ವಿದ್ಯಾಭ್ಯಾಸವ ।
ಗುರುಮುಖದಿಂ ಕಲಿಸಲ್ಕಾತ್ಮಜೆಗಂ ನೃಪ ತಾಂ ॥
ಸರುವವನಭ್ಯಾಸಿಸಿ ಮನ ।
ಹರುಷಿಸುತಿರ್ದಳ್ ಸಕಲರನರಮನೆಯೊಳಗಂ ॥ 32 ॥

॥ ವಾರ್ಧಕ ॥

ಭೂರಮಣನಾತ್ಮಸಂಭವೆಯು ದಿನದಿನ ಶುಕ್ಲ ।
ಶಾರದೇಂದುವಿನಂತೆ ಬೆಳೆಯುತಿರಲಿತ್ತ ಗಂ ।
ಭೀರದೊಳು ಬಲದೇವನೆಂಬರಸನಾಳುತಿರಲಾ ಚಂಪಕಾವತಿಯನು ॥
ನಾರಿಯರು ಮಂಗಳೆ ಭರಣಿಯೆನಿಪ್ಪುಭಯರನು ।
ಸೇರಿ ಸುಖದಿಂ ವಿಪ್ರ ಜಯ ವಿಜಯ ವಸುದೇವ ।
ವೀರಮಂತ್ರಿಗಳು ನಾಲ್ವರು ಸಹಿತಲೊಂದುದಿನ ಸೇರಿ ಸಭೆಯೊಳಗೆಂದನು ॥33॥

॥ **ಕಾಂಭೋದಿ – ಝಂಪೆ** ॥

ಕೇಳಿರೀವರೆಗೆ ಶ್ರೀಲೋಲನ ಕಟಾಕ್ಷದಲಿ ।
ಪಾಲಿಸುತಲಿರಲು ಭೂತಳವ ॥
ಶೀಲೆಮಂಗಳೆಗಣುಗರಾಗದಿರಲದಕಾಗಿ ।
ಮೇಲೆ ಭರಣಿಯ ಲಗ್ನವಾದೆ ॥ 34 ॥

ಆ ಮುಹೂರ್ತದಲಿ ಪಿರಿಯರಸಿ ಗರ್ಭಿಣಿಯಾಗಿ ।
ಕಾಮಸನ್ನಿಭ ಸುತನ ಪಡೆಯೆ ॥
ಪ್ರೇಮದಲಿ ಜಗಸಿಂಹನೆನಿಪ ಪೆಸರಿಟ್ಟವಗೆ ।
ನೇಮದಲಿ ಸಕಲವಿದ್ಯೆಗಳ ॥ 35 ॥

ಕಲಿಸಲಟ್ಟಿರಲವನ ಗೆಳೆಯನಾದನು ಮಂತ್ರಿ ।
ಗಳಲಿ ಜಯನರಸಿ ವೇಣುಕಿಯು ॥
ತಳೆದಣುಗನಾ ಮಹೇಂದ್ರನು ಕೂಡಿ ಬೆಳೆಯುತಿಹ ।
ರಿಳೆಗೆ ರವಿಶಶಿಗಳಂದದಲಿ ॥ 36 ॥

ಬಾಲರನು ಕರೆಸು ಸಭೆಗೆನೆ ಸಚಿವ ಬರಹೇಳೆ ।
ಶೀಲರುಭಯರು ಬಂದು ನೃಪನ ॥
ಕಾಲಿಗೆರಗಲು ಮನ್ನಿಸುತ ಸಭೆಯೊಳಿರಲು ವನ ।
ಪಾಲರೈತಂದು ಕೈಮುಗಿದು ॥ 37 ॥

॥ **ಲಾವಣಿ** ॥

ಕಾಲಿಗೊಂದಿಪೆವು ಬುದ್ಧಿ । ಆಲಿಸೆಮ್ಮಯ ಸುದ್ದಿ ।
ಬಾಳ ಹೆಚ್ಚೈತೆ ಮಿಗಗಳು । ಹೊಲನಾಗೆ ಕೇಳು ॥ 38 ॥

ಕಾಡೆಮ್ಮೆ ಹಂದಿ ಸಿಂಗ । ಕೈಡಿ ಕಾಡ್ಗೋಣ ಮಂಗ ।
ಪೀಡೆಯ ಸೈಸಲಾರೆವು । ಪೇಳಲ್ಬಂದೆವು ॥ 39 ॥

ಗಿಡ್ಮರಬಳ್ಳಿನೆಲ್ಲ । ಬಡ್ಮಂದಿ ನೋಡ್ವದಲ್ಲ ।
ಹೊಡ್ಮಂಣ ಹಾಕ್ದಾಂಗಾಗ್ತೈತೆ । ಕಂಡವರ್ ಹೊಟ್ಟಾಗೆ ॥ 40 ॥

॥ ವಾರ್ಧಕ ॥

ವಡ್ಯರೊಂದ್ಸಾರಿ ಕಾಡಿನ ಬದಿಗೆ ಕೈರಾತ ।
ಪಡ್ಯನೊಡಗೊಂಡು ಮಿಗಗಳ್ಕೊಂದು ಬಾರದಿರೆ ।
ಯಡ್ಯ ನಮ್ಮಿಂದ ಕಾಯಲ್ಕೊಲವನೆಂದೆರಗೆ ಪೊಡವಿಪತಿಯದ ಕೇಳುತ ॥
ಬಿಡಿ ಚಿಂತೆಯಂ ಬೇಟೆಯಾಡಿ ಮೃಗವಿಂಡುಗಳ ।
ಕಡಿಕಡಿದು ಕೆಡಹಿ ಶಾಂತತೆಗೊಳಿಪೆನೆಂದುಸುರಿ ।
ಕಡಲಂಬರೇಶವೇಳಲ್ಕೆ ಜಗಸಿಂಹ ಪಿತನಡಿಗೆರಗುತಿಂದೆಂದನು ॥ 41 ॥

॥ ಮಾರವಿ – ಏಕ ॥

ತಾತನೆ ನೀವಿದಕೀತರ ಪೊರಡುವ ।
ದೇತರ ಘನವೆನಗೆ ॥
ಪ್ರೀತಿಯೊಳಪ್ಪಣೆಗೊಟ್ಟರೆ ಮೃಗಗಳ ।
ವ್ರಾತವ ಸದೆಬಡಿವೆ ॥ 42 ॥

॥ ಕೇದಾರಗೌಳ – ಅಷ್ಟ ॥

ಮೃಗಬೇಟೆ ಸದರವೆ ಮಗನೆ ಸಣ್ಣವನೋರ್ವ ।
ಹೊಗಲಾರ ದಳವನದಿ ॥
ಬಗೆಬಗೆ ತೊಡರುಗಳ್ ಮಿಗೆ ಬರಲೆಡೆಯಿಹು ।
ದಗಲದಿರೆನಲೆಂದನು ॥ 43 ॥

॥ ಮಾರವಿ – ಏಕ ॥

ಬಿಡುಬಿಡು ಪಿತನೆ । ನ್ನೊಡನಾಡಿಯ ಜೊತೆ ।
ಬಿಡದಿರ್ವರು ಪೋಗಿ ॥
ಕಡಿದಿಕ್ಕುತ ಮೃಗ । ಗಡಣವ ಬರುವೆವು ।
ಕೊಡಿಸಪ್ಪಣೆ ಜವದಿ ॥ 44 ॥

॥ ಕೇದಾರಗೌಳ – ಅಷ್ಟ ॥

ಸರಿಯಾದುದಿರ್ವರೆ ತರಳರೊಂದಾಗುತ ।
ಚರಿಸಿ ಕಾಂತಾರದಲಿ ॥
ಪರಿಪರಿ ಮೃಗಗಳ ತರಿದೊಟ್ಟಿ ಬಹರೆಂಬ ।
ಭರವಸಿಲ್ಲವು ನಿಮ್ಮಲಿ ॥ 45 ॥

॥ **ಮಾರವಿ – ಏಕ** ॥

ಹುಲು ಮೃಗಬೇಟೆಗೆ । ಅಳುಕುವುದಾದರೆ ।
ಕಲಹದಿ ರಿಪುಗಳನು ॥
ಗೆಲಿದಿಳೆಯಾಳುವ । ಛಲವಿರೆ ಮನದೊಳ ।
ಗಳೆಯದೆ ಕಳುಹೆಮಗೆ ॥ 46 ॥

॥ **ಭಾಮಿನಿ** ॥

ಕಂದನಾಡಿದ ವೀರನುಡಿಗೆ ವ ।
ಸುಂಧರೇಶನು ಕರೆದು ಮಂತ್ರಿಯ ।
ನಂದನ ಮಹೇಂದ್ರನನು ಜೊತೆಗೊಳಿಸುತ್ತ ಕೈರಾತ ॥
ಸಂದಣಿಯ ಬೆಂಬಳಿಸಿ ಕಳುಹಲು ।
ಮಂದಹಾಸದೊಳುಭಯವೀರರು ।
ಬಂದರಶ್ವವನೇರುತಡವಿಗೆ ಬೇಟೆಯಾಡುತಲಿ ॥ 47 ॥

॥ **ಸೌರಾಷ್ಟ್ರ – ಮಟ್ಟೆ** ॥

ಬೇಟೆಯಾಡುತ್ತೈದಲುಭಯರು । ಕೂಡಿ ಶಬರ ।
ಕೂಟದೊಡನೆ ತುರಗವಡರಲು ॥
ಈಟಿ ಸಬಳ ಕುಂತ ಖಡ್ಗ ।
ಸಾಟಿಯಿಲ್ಲದಸ್ತ್ರಗಳಲಿ ।
ಮೀಟುತಖಿಳ ಖಳಮೃಗಗಳ ।
ಕೋಟಲೆಯನು ಹರಿಸುತ್ತೈದೆ ॥ 48 ॥

ಬಂದು ಬಂದು ವಿಪಿನಮಧ್ಯದಿ । ನಿಖಿಳಮೃಗವ ।
ಕೊಂದು ಕೊಂದು ಕೆಡಹಿ ಚೋದ್ಯದಿ ॥
ಬಂದಮಾರ್ಗದಪ್ಪುತುಭಯ ।
ರೊಂದನಗಲಿ ಬೇರೆ ಬೇರೆ ।
ಹೊಂದುತರಸುತಿರಲು ನೃಪತಿ ।
ಕಂದನೆಂದನೊಂದು ಮನದಿ ॥ 49 ॥

॥ ಪಂತುವರಾಳಿ – ಮಟ್ಟೆ ॥

(ಎನುತ ವೃತ್ರಜ್ವಾಲೆ...... ಎಂಬಂತೆ)

ಏನಿದಕಟ ಘೋರವಿಪಿನ ದಾರಿಗಾಣೆನು ।
ತಾನದೊರ್ವನುಳಿದೆ ಮಿತ್ರನೆಲ್ಲಿ ಪೋದನೊ ॥ 50 ॥

ಜೊತೆಗೆ ಬಂದ ಪಡೆಯದೆಲ್ಲೋ । ಗತಿಯನರಿಯೆನು ॥
ಪಥವದೊಂದೂ ತೋರದುಮಾ । ಪತಿಯೆ ಬಲ್ಲನು ॥ 51 ॥

ದೂರಲಾರೊಳಿದನು ಪುರಕೆ । ಸೇರುವಂದವ ॥
ನೀರಜಾಕ್ಷ ಬಲ್ಲನೆನುತ । ಸಾರೆ ಮುಂದವ ॥ 52 ॥

॥ ಭಾಮಿನಿ ॥

ಭೂತಳೇಶನ ತನುಜ ಸಚಿವ ಸು ।
ಜಾತನರಸಲು ಕಾಣದೊರ್ವನೆ ।
ಭೀತನಾಗುತ ಪುರಕೆ ತೆರಳುವೆನೆನುತ ಪಥವಿಡಿದು ॥
ಸಾತಿಶಯದಿಂ ಬರುತಿರಲು ಬಳಿ ।
ಕೇತನರಸುತ ಮಂತ್ರಿಸುತನಿರೆ ।
ಭೂತಳಾಧಿಪನೆರಡನೆಯ ಸತಿ ಭರಣಿ ತತ್ಪುರದಿ ॥ 53 ॥

॥ ಕಂದಪದ್ಯ ॥

ಭೂಮಿಪನಣುಗನನೊಲಿಸುತ ।
ಕಾಮಿತಪಡೆವೆನೆನುತ್ತಲಿ ಕಾಮುಕತನದಿಂ ॥
ಕಾಮಿನಿ ಸಮಯವ ಕಾಣದೆ ।
ಕಾಮಗೆ ಗುರಿಯಾಗುತ ಮನವೆಣಿಸುತ್ತಿರ್ದಳ್ ॥ 54 ॥

॥ ಮಧುಮಾಧವಿ – ತ್ರಿವುಡೆ ॥

ಧರಣಿಪಾಲನ ಪಿರಿಯರಸಿ ಪಡೆ ।
ದಿರುವ ತರಳನ ರೂಪ ಯವ್ವನ ।
ಕೆರಗಿತೆನ್ನೆಯ ಮನಸದಾ ಸ್ಮರ ।
ನಿರಿತವಾನೆನು ಶಿವಶಿವಾ ॥ 55 ॥

ತಡೆಯಲಾರೆನು ವಿರಹವೇದನೆ ।
ನುಡಿಸಿ ನೋಡುವೆ ತರಳನನು ಎನೆ ।
ಬಿಡನು ಜೊತೆಯಾ ಸಚಿವಕುವರನು ।
ಎಡೆದೊರಕದಲಿಲ್ಲಿಂದಿಗೂ ॥ 56 ॥

ಏನ ಮಾಡುವೆನೆಂತು ಕೂಡುವೆ ।
ಸೂನುವನು ತಾನೆನುತ ದುರ್ಮನ ।
ದಾ ನಿತಂಬಿನಿ ಯೋಚಿಸುತ್ತಿರೆ ।
ಕಾನನವ ಪೊರಟಣುಗನು ॥ 57 ॥

ಬರುತಿರಲುಪುರಕೋರ್ವನೇಕಿರಿ।
ಯರಸಿಯಂತಃಪುರದಮಾರ್ಗದಿ।
ತರಳನನುಕಂಡಾಗಸಮಯವು।
ದೊರಕಿತೆನುತಿಂತೆಂದಳೂ ॥ 58 ॥

॥ **ಶಂಕರಾಭರಣ – ಅಷ್ಟ** ॥

(ಮಾತನಾಡೋ ಮಮ ಪ್ರಾಣನಾಥ...... ಎಂಬಂತೆ)

ಬಾರೊ ಬಾರೋ ನವಮೋಹನಾಂಗ ।
ದೂರದಿ ದಣಿದಂತಿರುವುದು ನಿನ್ನಂಗ ।
ವಿ–ಶ್ರಮಿಸಂತರಂಗ ।
ಪೇ–ಳುವೆನು ಶುಭಾಂಗ ॥ 59 ॥

ಹಾಲು ಸಕ್ಕರೆಯಿದೆ ಶೀಲನೀ ಕೊಳ್ಳೈ ।
ಮೇಲೆ ಭೋಜನ ಗೈದು ವಿಶ್ರಾಂತಿಗೊಳ್ಳೈ ।
ತಾಂ–ಬೂಲ ತಕ್ಕೊಳ್ಳೈ ।
ಸ–ದಾನಂದಗೊಳ್ಳೈ ॥ 60 ॥

ನೋಡದೆ ನಿನ್ನನು ಬಲುದಿನವಾಯ್ತು ।
ನೋಡಿದೆನೀಗದಕಾನಂದವಾಯ್ತು ।
ಬೇ–ಸರವೆಲ್ಲ ಹೋಯ್ತು ।
ಮ–ನ್ಮನದಿಚ್ಛೆಯಾಯ್ತು ॥ 61 ॥

ಎನುತಾ ಮಾನಿನಿಯುಪಚರಣೆಯ ಗೈದು ।
ಜನಪನಂದನನ ಮನ್ನಿಸಿ ಮೋಹಗೈದು ।
ಮ–ನ್ಮಥನನು ಬೈದು ।
ಪೇ–ಳಿದಳಡಹಾಯ್ದು ॥ 62 ॥

॥ **ಸೌರಾಷ್ಟ್ರ – ಮಟ್ಟೆ** ॥

ಲಾಲಿಸೆನ್ನ ನುಡಿಯ ಮುದದೊಳು । ಸುರೂಪ ಸುಗುಣ ।
ಶೀಲ ಪೇಳ್ವೆಯೆನ್ನ ಮನದೊಳು ॥
ಬಾಲನೆಂಬ ಭಾವವಿಡದೆ ।
ಪಾಲಿಸೆನ್ನ ಧೈರ್ಯಗೆಡದೆ ।
ಖೂಳ ಮದನನೆನ್ನ ನಿರಿವ ।
ತಾಳಲಾರೆನವನ ಬಲುಹ ॥ 63 ॥

ಸುಂದರಾಂಗ ನಿನ್ನ ರೂಪನು । ಬಹಳ ದಿನಗ ।
ಳಿಂದ ನೋಡಿ ಮೋಹಿಸಿರ್ಪೆನು ॥
ಸಂದು ದೊರಕದಾಯ್ತು ಸಚಿವ ।
ಕಂದ ನಿನ್ನನಗಲದಿರುವ ।
ನಿಂದು ಕಾರ್ಯಲಭಿಸಿತಿನ್ನು ।
ಹೊಂದದಿಂಥ ಕಾಲವನ್ನು ॥ 64 ॥

ಮಾತೆಯೆಂಬ ಭಾವವಿರಿಸದೆ । ಕಾಮಶರಕೆ ।
ಸೋತು ಬಂದ ಸತಿಯ ವರಿಸದೆ ॥
ನೀತಿ ತಪ್ಪಿದೆಂದು ಮನದಿ ।
ಭೀತಿಗೊಳದಿರಿನ್ನು ಪಡೆದ ।
ಮಾತೆಯನ್ಯಳಿರಲು ಎನ್ನ ।
ರೀತಿ ಬೇರಿದೆಂದು ತಿಳಿಯೋ ॥ 65 ॥

॥ **ಭೈರವಿ – ಅಷ್ಟ** ॥

ಶಿವಶಿವ ಕೇಳಲಾರೆ । ನೀನೆನಗಿಂಥ ।
ಅವಹೇಳನವ ಪೇಳ್ವರೆ ॥
ತವಪತಿಯಾತ್ಮಜನಾದಡೆನ್ನನು ಪಡೆ ।
ದವಳನ್ಯಳೆನ್ನುವರೆ ॥ 66 ॥

[ತಾಯಿಯೆ ಜಗನ್ಮಾತೆಯೆ] । ನೀನೆಂಬುದು ।
ನ್ಯಾಯಸಮ್ಮತ ರೀತಿಯೆ ॥
ಹೇಯದ ನುಡಿಯೆನ್ನೊಳಾಡಿ ಸುಮ್ಮನೆ ಕೊಳೆ ।
ಬಾಯಾಗ ಬೇಡವವ್ವಾ ॥ 67 ॥

ಕೇಳಲಾರದ ಮಾತನು । ಎನ್ನೊಳು ಪೇಳಿ ।
ಹಾಳುಗೈಯ್ಯದಿರೆನ್ನನು ॥
ಕಾಲಿಗೆರಗಿ ಬೇಡಿಕೊಂಬೆನು ತ್ಯಜಿಸಿಂಥ ।
ಕೀಳು ಬುದ್ಧಿಯನು ನೀನು ॥ 68 ॥

॥ **ಕೇದಾರಗೌಳ – ಝಂಪೆ** ॥

ಮಾರಸನ್ನಿಭ ಕೋಮಲ । ಮನದಿ ನೀ ।
ಬೇರೆಣಿಸದಿರು ನಿರ್ಮಲ ॥
ನಾರಿಯೆನುತೆನ್ನ ಬಗೆದು । ಮನದಿಚ್ಛೆ ।
ತೀರಿಸಲುದೋಷ ಪೊಗದು ॥ 69 ॥

ಯಾತಕೀ ಮಾತು ಸರಿಯೆ । ಪಿತನಮಲ ।
ಪ್ರೀತಿಯರ್ಧಾಂಗಿಯರಿಯೆ ॥
ಜಾತನಾಗಿರ್ಪೆನ್ನೊಳು । ಮನಗೈಯೆ ।
ಪಾತಕವು ಬಿಡ ನಿನ್ನೊಳು ॥ 70 ॥

ತಡೆಯಲಾರೆನು ವಿರಹವ । ಸೋತಿರ್ಪ ।
ಮಡದಿಯೆಂದರಿದನ್ಯವ ॥
ಕಡೆಗಣಿಸುತವಳಿಚ್ಛೆಯ । ಪೂರೈಸಿ ।
ದಡೆ ದೋಷ ಪೊಗ ನಿಶ್ಚಯ ॥ 71 ॥

ಬೇಡ ಬೇಡವ್ವ ಬರಿದೆ । ಎನ್ನ ನೀ ।
ಕಾಡದಿರು ನೀತಿಗೆಡದೆ ॥
ಕೂಡೆನೆಂದಿಗು ಸರ್ವಥಾ । ಸ್ಥೈರ್ಯವಿರೆ ।
ಕೇಡನೆಸಗನು ಮನ್ಮಥ ॥ 72 ॥

ಸುಗುಣ ನೀನೇನೆಂದರು । ಮನ ಬೇರೆ ।
ಪೊಗದು ಬಿಡೆನೇನಾದರೂ ॥
ಬಗೆಯೆನೆಂದಡಗಟ್ಟುತ । ಸತಿ ಮೊಗದಿ ।
ಮೊಗವಿಟ್ಟು ಮುತ್ತನಿಡುತ ॥ 73 ॥

॥ ಭಾಮಿನಿ ॥

ತರುಣಿ ಬಿಗಿದಂಗಜ ವಿಕಾರದಿ ।
ತರಳನನು ಪಿಡಿದಪ್ಪಿ ಗುರುಕುಚ ।
ವೆರಡನೊತ್ತುತ ಚುಂಬಿಸುತ್ತಿರಲೊಡನೆ ನೃಪಸುತನು ॥
ಭರದೊಳಾಕೆಯ ದೂಡಿ ಪಿಂದಕೆ ।
ತಿರುಗಲಾ ಸತಿ ಭಗ್ನಪ್ರಣಯದೊ ।
ಳುರಿಗೆದರಿ ರೋಷದೊಳು ನುಡಿದಳು ಧರಣಿಪಾತ್ಮಜಗೆ ॥ 74 ॥

॥ ಭೈರವಿ – ಏಕ ॥

ಎಲವೋ ಫಡ ನೃಪಕುವರ । ಎ ।
ನ್ನೊಳು ನೀನಂಗಜಬವರ ॥
ಕಲಸಿಯೆ ಹೊರದೂಡಿದೆಯ । ನಾ ।
ಕೊಲಿಸದೆ ಬಿಡೆ ನೋಡಿದೆಯಾ ॥ 75 ॥

ಬಲುದಿನದಿಂದಲಿ ನಿನ್ನ । ಮೇಲ್ ।
ನೆಲೆಸಿರೆ ಮನ ಕೇಳೆನ್ನ ॥
ತೊಲಗಿಸಿದೆಯ ಲೇಸಾಯ್ತು । ನಿ ।
ನ್ನಲಿ ನಿಜಮೋಹವು ಪೋಯ್ತು ॥ 76 ॥

ನೋಡೀ ಕ್ಷಣದಲಿ ನಿನ್ನ । ಕಡಿ ।
ದೀಡಾಡಿಸಿ ಶಿರವನ್ನ ॥
ಕೂಡೆ ರಕುತದಲಿ ಕರವ । ತೊಳೆ ।
ದಾಡುವೆ ನೋಡೆನ್ನಳವ ॥ 77 ॥

॥ **ಭಾಮಿನಿ** ॥

ಭರಣಿಯಾಡಿದ ಕ್ರೂರವಾಕ್ಯದ ।
ಸರಣಿಯನು ಕೇಳುತ್ತ ಮನದೊಳು ।
ತರಹರಿಸಿ ಬಲದೇವಸುತ ಚಿಂತಿಸುತ ತನ್ನೊಳಗೆ ॥
ತರುಣಿ ಮುನಿದರೆ ಮಾರಿಯೆಂಬುದು ।
ಸರುವಥಾ ಸುಳ್ಳಲ್ಲವಾದರು ।
ನಿರಪರಾಧಿಯನೇನ ಗೈವಳೆನುತ್ತ ಪೊರಮಡಲು ॥ 78 ॥

॥ **ವಾರ್ಧಕ** ॥

ಅಂತಾಕೆ ಜಗಸಿಂಹನಂ ಕೊಲಿಸಿದಪೆನೆಂದು ।
ಪಂಥಮಂ ಮಾಡಿ ತಲೆಯಂ ಕೆದರಿ ಕೈಬಳೆಗ ।
ಳಿಂ ತನ್ನ ದೇಹಮಂ ಗೀರುತಂಗವನೆಲ್ಲ ರುಧಿರಮಯವಾಗುವಂತೆ ॥
ಚಿಂತೆಯಿಂ ಮೇಲುದವ ಸೆಳೆದು ಮಂಚದಲಿ ಮುಸು ।
ಕಂ ತಳೆದು ಮಲಗಿರಲಿಕಿತ್ತಲಾ ಭೂಪಾಲ ।
ಕಂ ತನ್ನ ಮಡದಿಯೆಡೆಗೈತಂದು ವಿಸ್ಮಯವನಾಂತು ಮಾತಾಡಿಸಿದನು ॥ 79 ॥

॥ **ಮುಖಾರಿ – ಏಕ** ॥

ಏನಾದುದಕಟ ಸುಗುಣಶೀಲೆ । ಚಂದಿರಮುಖಿ ಬಾಲೆ ।
ಮಾನಿನಿಕುಲಕೆ ರತ್ನಮಾಲೆ ॥
ನೀನೇತಕೆ ದುಗುಡದಿ ಮುಸುಕಿಕ್ಕುತ ।
ಮೌನದೊಳಿರುವೆ ಪೇಳೆ ॥ 80 ॥

ಮೈಯೆಲ್ಲ ಗಾಯಗೊಂಡುದೇನು । ಮನ್ಮನ ಸುರಧೇನು ।
ಕೈಯ ಕಂಕಣವೆಲ್ಲಿ ನೀನು ॥
ವೈಯಾರವ ತೊರೆ । ದೊಯ್ಯನೆ ಮಂಚದಿ ।
ಶಯ್ಯೆಯೊಳಿಹೆ ಬೆಸ । ಗೈಯ್ಯುವೆನರುಹಿಸು ॥ 81 ॥

ಅಕ್ಕನಿಂದೇನು ಕೇಡು ಬಂತೋ । ಅಲ್ಲದಡಿನ್ನೆಂತೊ ।
ಮಿಕ್ಕವರಾರು ಬೈದರೆಂತೊ ॥
ದುಃಖವ ಬಿಡು ಮನ । ಕಕ್ಕರೆಗೊಳು ಶೋ ।
ಕಕ್ಕೇನು ಕಾರಣ । ವಿಕ್ಕೆಂದರಿಯೆನು ॥ 82 ॥

॥ ಕಂದಪದ್ಯ ॥

ಧರಣಿಪನೀಪರಿ ತನ್ನಯ ।
ತರುಣಿಯ ಶೋಕದ ಕಾರಣವರಿಯದೆ ಕೇಳು ।
ತ್ತಿರೆ ನಿಜವಡಗಿಸಿ ಮಾನಿನಿ ।
ಮರುಕವ ತೋರುತಲೊರೆದಳ್ ಪತಿಯೊಡನಂ ತಾ ॥ 83 ॥

॥ ನೀಲಾಂಬರಿ – ಏಕ ॥

ನುಡಿಯ ಲಾಲಿಸು ವಲ್ಲಭ । ನಿನ್ನಯ ಮುದ್ದು ।
ಹುಡುಗನಿಂಥವ ದುರ್ಲಭ ॥
ಅಡವಿಗೆ ಬೇಟೆಗೆಂದು । ಪೋದವ ಬರ ।
ಲೊಡನೆ ನಾ ಮನದಿ ನೊಂದು ॥ 84 ॥

ದಣಿದು ಬಂದಿಹನೆನ್ನುತ । ಕ್ಷೀರಾನ್ನಭೋಜ್ಯ ।
ಉಣಲಿಕ್ಕಿ ಮನ್ನಿಸುತ ॥
ಗುಣದಿ ಮಾತಾಡಿಸುತ । ಇರಲು ಎನ್ನ ।
ಕೆಣಕೆ ಕಾಮುಕನಾಗುತ ॥ 85 ॥

ಮಾತೆಯೆನ್ನುವ ಭಾವವ । ತೊರೆದು ಮನ ।
ಸೋತು ಮನ್ಮಥನಿಂಗವ ॥
ನೋತು ಪೀಡಿಸಲೆನ್ನನು । ಒಪ್ಪದೆ ದೂಡ ।
ಲೀತೆರ ಗೈದನಿನ್ನೇನು ॥ 86 ॥

॥ ಭಾಮಿನಿ ॥

ಬಾಲರೆನ್ನುತಲಿನ್ನು ಹುಡುಗರ ।
ಮೇಲೆ ಮಮತೆಯನಿಡಲು ಯವ್ವನ ।
ಕಾಲ ಬರೆ ನಿಜಜನನಿಯೆಂಬುದ ಮರೆವರೆಂದಾಯ್ತು ॥
ಖೂಳರಿಂಥವರಣುಗರಿರೆ ಮಿಗೆ ।
ಬಾಳುವುದೆ ಕಡುಕಷ್ಟ ಧರ್ಮದಿ ।
ಪೇಳಲಂಜುವೆನೆನೆ ಕಠೋರದ ವಚನವಾಲಿಸುತ ॥ 87 ॥

॥ **ಘಂಟಾರವ – ಅಷ್ಟ** ॥
(ತಾಳಿ ಪರ್ವತ ಕಲ್ಮರಂಗಳ.....ಎಂಬಂತೆ)

ಕೇಳಲಾರೆನು ಸ್ವೈರಿಸಂಗನೆ ಇಂಥ ।
ಬಾಲರನು ಪಡೆದೇನು ಫಲ ಗುಣ ।
ಶೀಲವಿಲ್ಲದ ದುರ್ಮತಿ ॥ 88 ॥

ಪುತ್ರರಿಲ್ಲೆಂದು ಬಯಸಿ ಪಡೆದರಿಂಥ ।
ಧೂರ್ತನೇಕುದಿಸಿದನೊ ಮತ್ಕುಲ ।
ಕೀರ್ತಿವೃಕ್ಷ ಕುಠಾರನು ॥ 89 ॥

ಬಿಟ್ಟರೀತನ ಮುಂದೆಮ್ಮ ವಂಶಕೆ ।
ಕೆಟ್ಟನುಡಿ ತರಿಸುವನು ತಕ್ಷಣ ।
ಗುಟ್ಟಿನಿಂದಲೆ ಕೊಲಿಸುವೆ ॥ 90 ॥

ಎಂದು ರೋಷದಿ ಕೊಲೆಗಡುಕರ ಕರೆ ।
ದೆಂದನವರೊಳು ಸುತನ ಮಮತೆಯ ।
ನಂದೊರೆದು ಧರಣೀಂದ್ರನು ॥ 91 ॥

॥ **ಭಾಮಿನಿ** ॥

ಕೇಳಿರೆನ್ನಾಜ್ಞೆಯನು ಪರರಿಗೆ ।
ಪೇಳದಿರಿ ಜಗಸಿಂಹನೆಂಬಾ ।
ಬಾಲನನು ಕೊಂಡೊಯ್ದು ಶಿರವರಿದವನ ರಕುತವನು ॥
ಪಾಳುಗೈಯ್ಯದೆ ತಂದು ನಮ್ಮಯ ।
ಆಲಯಕೆ ಕೊಡಿರೆಂದು ನೇಮಿಸೆ ।
ಕೀಳು ಕಟುಕರು ಹುಡುಕುತ್ಯೈದಿದರರಸನಾತ್ಮಜನ ॥ 92 ॥

ಇತ್ತಲವನಿಪನಂದನನು ಬೇ ।
ಸತ್ತು ಕೊರಗುತ ತನ್ನ ಜನನಿಗೆ ।
ಬಿತ್ತರಿಪೆ ಕಿರಿಯವ್ವೆಯುಪಟಳವೆಂದು ನಡೆತರಲು ॥
ಮತ್ತಕಾಶಿನಿಯಣುಗನನು ಕಂ ।
ಡತ್ಯಧಿಕ ತೋಷದೊಳು ಮನ್ನಿಸಿ ।
ಪುತ್ರನೊಡನಿಂತೆಂದಳನುರಾಗದಲಿ ಕುಳ್ಳಿರಿಸಿ ॥ 93 ॥

॥ ಮಧುಮಾಧವಿ – ತ್ರಿವುಡೆ ॥

ಬಾ ಮಗನೆ ಮೃಗಬೇಟೆಗೆನ್ನುತ ।
ನೀ ಮಹೇಂದ್ರನ ಜೊತೆಯೊಳೈದಿರೆ ।
ನಾ ಮನದೊಳೆಣಿಸುತ್ತಿರಲ್ಕೆ ಸು ।
ಖಾಗಮನವೀಗಾದುದು ॥ ತೋಷವಾಯ್ತು ॥ 94 ॥

ಮೊಗದಲೇನಿದು ಕುಂದು ತೋರುವ ।
ಬಗೆಯದೇನೈ ಜೊತೆಯ ಸಚಿವನ ।
ಮಗನನೆಲ್ಲಗಲಿದೆಯೊ ದುಗುಡದ ।
ಹೊಗರಿದೇನೈ ತರಳನೆ ॥ ಪೇಳು ಎನಗೆ ॥ 95 ॥

ಕೇಳದೆನ್ನಯ ಮನನಿಧಾನವ ।
ತಾಳದೆನೆ ನಿಜಮಾತೆಗೊಂದಿಸಿ ।
ಪೇಳಿದನು ತನಗಾದ ಪರಿಗಳ ।
ಮೂಲಸಂಗತಿಯೆಲ್ಲವ ॥ ಸಾಂಗವಾಗಿ ॥ 96 ॥

॥ ನವರೋಜು – ಏಕ ॥

ಲಾಲಿಪುದೆನ್ನಯ ಮಾತೇ । ಸುಗು ।
ಣಾಲಯ ಮತ್ಪಿತಪ್ರೀತೇ ॥
ಪೇಳುವೆ ನಾವೀರ್ವರು ಮೃಗಬೇಟೆಯ ।
ಕೋಲಾಹಲದಿಂದಲಿ ಮುಂದೈದುತ ॥ 97 ॥

ಕಾಡಿನೊಳು ಜೊತೆಯಗಲಿ । ಪಥ ।
ನೋಡದೆ ಸುತ್ತಲು ತೊಳಲಿ ॥
ಜೋಡಿಗನನು ಹುಡುಕಾಡಿದರೆಲ್ಲಿಯು ।
ಪಾಡರಿಯದೆ ಪುರಕೈದುವೆನೆನುತಲಿ ॥ 98 ॥

ಬರುತಿರೆ ಮಾರ್ಗದಿ ಪಿತನ । ಕಿರಿ ।
ಯರಸಿಯು ತಾ ಮನ್ಮಥನ ॥
ಶರದೊಳು ಬಳಲುತಲೆನ್ನನು ಪೀಡಿಸೆ ।
ತೊರೆಯೆ ಬಲಾತ್ಕರಿಸಲು ಕೈಗೂಡದೆ ॥ 99 ॥

॥ ಭಾಮಿನಿ ॥

ನಿನ್ನ ಶಿರವನು ಕಡಿಸಿ ರಕುತದಿ ।
ತನ್ನ ಕರಗಳ ತೊಳೆಯದಿರೆ ತಾ ।
ಹೆಣ್ಣುಜನ್ಮವಿದಲ್ಲೆನುತ ಶಪಥಂಗಳನು ಗೈದು ॥
ಎನ್ನ ನಿಂದಿಸಿ ಕಳುಹೆ ಮನದೊಳು ।
ಖಿನ್ನನಾಗುತ ಬಂದೆನೆನೆ ಸುತ ।
ನನ್ನು ಬಿಗಿವಡೆದಬಲೆ ಹಲುಬಿದಳಧಿಕ ದುಗುಡದಲಿ ॥ 100 ॥

॥ ಆನಂದಭೈರವಿ – ಏಕ ॥

ಮಗನೆ ಕೇಳಲಾರೆನಿಂಥಾ ।
ಬಗೆಯನೆಲ್ಲೂ ಕಾಣನೆಂಥಾ ।
ಕಾಲವೋ । ಮಾಯಾ । ಜಾಲವೋ ॥ 101 ॥

ಗಂಡುಹೆಣ್ಗಳೆಂಬ ಭೇದ ।
ಗೊಂಡು ಜಗದಳಿರ್ಪರಾದ ।
ರದಕೆಲ್ಲಾ । ರೀತಿ । ಇದೆಯಲ್ಲಾ ॥ 102 ॥

ಮಾತೆ ಸುತನೊಳ್ಮೋಹಗೊಂಡ ।
ರೀತಿ ಪೊಸತು ಕೇಳಿಕೊಂಡ ।
ಹಾಗಾಯ್ತೊ । ನೀತಿ । ಪೋಗಾಯ್ತು ॥ 103 ॥

ದುರುಳೆಯೆನ್ನೀ ಸುತನ ಕೊರಳ ।
ನರಿಯದುಳಿಯಳಕಟ ಗರಳ ।
ಗಳಬಲ್ಲಾ । ಪರಿ । ಗಳನೆಲ್ಲಾ ॥ 104 ॥

ಪುತ್ರರಿಲ್ಲವೆಂದು ಮರುಗಿ ।
ಧೂರ್ತೆ ಇವಳ ತರಲು ತಿರುಗಿ ।
ಪಡೆದೆನೂ । ಕೀರ್ತಿ । ವಡೆದೆನೂ ॥ 105 ॥

ಪತಿಯೊಳೊಂದಕೊಂದ ಪೇಳಿ ।
ಹಿತವ ಕೆಡಿಸಿ ಸುತನ ಮೂಳಿ ।
ಕೊಲಿಪಳೂ । ಪಂಥ । ಗೊಳಿಪಳೂ ॥ 106 ॥

॥ **ಭಾಮಿನಿ** ॥

ಏನಗೈವಳೊಯೆನ್ನಣುಗನನು ।
ಹೀನ ದುರ್ಗುಣಿಯೆನುತ ದ್ರವ್ಯವ ।
ಸೂನುವನು ಕರೆದಿತ್ತು ನೀನೆಂತಾದರೂ ಬದುಕಿ ॥
ಕಾಣಿಸೊಮ್ಮೆಗೆನುತ್ತ ಕಳುಹ ।
ಲ್ಕಾ ನರೇಶಜನ್ಯೆದುತಿರಲಾ ।
ಹೀನಕಟುಕರು ಬಂದು ಪಿಡಿದೊಯ್ದರು ವನಾಂತರಕೆ ॥ 107 ॥

॥ **ಸಾಂಗತ್ಯ – ರೂಪಕ** ॥

ಇತ್ತ ಕಾನನದೊಳು ಸುತ್ತಿ ಮಂತ್ರಿಜ ತನ್ನ ।
ಮಿತ್ರನ ಕಾಣದೆ ಬಳಲಿ ॥
ಚಿತ್ತದಿ ಮರುಗುತ ಪತ್ತನದೆಡೆಗೈದಿ ।
ಬಿತ್ತರಿಸಿದ ಮಾತೆಗಿದನು ॥ 108 ॥

ಸುತನ ಕಂಡವಳು ಮನ್ನಿಸುತೂಟವಿಕ್ಕಿ ಭೂ ।
ಪತಿಯಾತ್ಮಭವನ ವೃತ್ತವನು ॥
ಅತಿಕ್ಲೇಶದಿಂದಣುಗನೊಳರುಹಲ್ಕೇಳಿ ।
ವ್ಯಥಿಸಿ ಮಹೇಂದ್ರ ತಕ್ಷಣದಿ ॥ 109 ॥

ಅರುಹಿದ ಮಾತೆ ನಾ ತರುವೆನು ಮಿತ್ರನ ।
ದುರುಳರ ಕೈಯಿಂದಲುಳುಹಿ ॥
ಪರಮರಹಸ್ಯದಿ ಮಂಗಳೆಗೊರೆಯೆಂದು ।
ಹರಕೆಯನಾಂತತಿ ಜವದಿ ॥ 110 ॥

ಪೊರಟೆರಡಶ್ವವ ಕೊಂಡು ದ್ರವ್ಯವ ಪಿಡಿ ।
ದರಸನಾತ್ಮಜನ ದುರ್ಜನರು ॥
ಶಿರವರಿವಣಿಗೈಯ್ಯುವನಿತರೊಳಡಹಾಯ್ದು ।
ದೊರೆಕುಮಾರನ ಕಂಡು ಮರುಗಿ ॥ 111 ॥

ಅಕಟಕಟೇಕಿಂತೀ ವಿಧಿಯಿಯ್ತು ನಿನಗೆಂದು ।
ಸಖನನಪ್ಪುತ ಕಟುಕರಿಗೆ ॥

ಪ್ರಕಟಿಸದಿರಿ ದ್ರವ್ಯವೀವೆನೀತನ ಬಿಟ್ಟು ।
ಸುಖದಿ ನೀವ್ ತೆರಳಿರೆಂದನಲು ॥ 112 ॥

ಅದಕೊಪ್ಪಿ ದ್ರವ್ಯವ ಕೊಂಡು ಬಾಲನ ಬಿಟ್ಟು ।
ಬದಲೊಂದು ಮೃಗವ ಸಂಹರಿಸಿ ॥
ರುಧಿರವ ಕೊಂಡೊಪ್ಪಿಸಲು ಕುರುಹಿಗೆ ಇತ್ತ ।
ಚದುರರಿರ್ವರು ಸಾಗುತಿರಲು ॥ 113 ॥

॥ **ವಾರ್ಧಕ** ॥

ಕ್ಷಿತಿಪಾಲ ಶೂರಸೇನಕನಿತ್ತ ನಂದನೆಗೆ ।
ಗತಿಸಿದವು ಷೋಡಶಾಬ್ದಗಳೆನುತ ತಿಳಿದು ಭೂ ।
ಪತಿಯಣುಗೆಯಂ ಕರೆದು ಪರಿಣಯವ ಮಾಳ್ಪೆನೆನುತಭಿಮತಗಳಂ ಕೇಳಲು ॥
ಕ್ಷಿತಿಯೊಳೆನ್ನಂ ವಿದ್ಯೆಯೊಳ್ ಮೀರಿದಾತನೇ ।
ಪತಿಯಾಗಲರ್ಹನೆನಗನ್ಯಥಾ ಸಲ್ಲದೆನೆ ।
ಹಿತದಿ ಮಂತ್ರಿಯ ಕರೆಸುತಾತನೊಡನೀ ಪರಿಸ್ಥಿತಿಯನಾಲೋಚಿಸಿದನು ॥ 114 ॥

॥ **ಸುರುಟಿ – ಏಕ** ॥

ಕೇಳಮಾತ್ಯವರ್ಯ । ನಿನ್ನೊಳು ।
ಪೇಳುವೆನಾಂತರ್ಯ ॥
ಬಾಲಕಿ ಮಂಜರಿ ವಿದ್ಯಾಭ್ಯಾಸದಿ ।
ಮೇಲೆನಿಸಿಹಳವಳಿಂಗಿತವರಿತೆನು ॥ 115 ॥

ವಿದ್ಯೆಯೊಳೆಲ್ಲರನು । ಮೀರುವ ।
ಬುದ್ಧಿಯುತೆಯನಿನ್ನು ॥
ವಿದ್ಯಾಮಂಜರಿಯೆಂಬಭಿಧಾನದಿ ।
ಸದ್ಯದೊಳೆಲ್ಲರು ಕರೆವಂತಾಗಲಿ ॥ 116 ॥

ಈಗವಳಿಗೆ ಪ್ರಾಯ । ಷೋಡಶ ।
ವಾಗಿದೆ ಶುಭಕಾಯ ॥
ಬೇಗದಿ ಪರಿಣಯವೆಸಗುವ ಮನಸಿನೊ ।
ಳೀಗವಳಭಿಮತವರಿತುದನರುಹುವೆ ॥ 117 ॥

॥ **ಭಾಮಿನಿ** ॥

ಈ ರಸೆಯೊಳೆನ್ನೊಡನೆ ವಿದ್ಯೆಯ ।
ಮೀರಿಸುವ ಪುರುಷನ ಹೊರತು ಮಿಗಿ ।
ಲಾರ ಸೇರೆನೆನುತ್ತ ತನ್ನಯ ರೂಪವನು ಬರೆದು ॥
ವಾರಿಜಾಂಬಕಿಯೆನ್ನೊಳಿತ್ತಿಹ ।
ಳಾರು ರೂಪನು ನೋಡಿ ತನ್ನನು ।
ಮೀರಿಸುವರಿರೆ ಬರಲೆನುತ್ತರುಹಿರ್ಪಳದಕಾಗಿ ॥ 118 ॥

॥ **ಕಂದಪದ್ಯ** ॥

ಚಾರರ ದಿಗ್ದೇಶದೊಳೀ ।
ನಾರಿಯ ರೂಪವ ಚಿತ್ರಿಸುತೆಲ್ಲ ಜನಂಗಳ್ ॥
ಸೇರುವ ಜಾಗದೊಳಿರಿಸುತ ।
ಸಾರಲ್ಕಟ್ಟೆನಲಸ್ತೆನುತಂತೆಸಗಲ್ ತಾಂ ॥ 119 ॥

॥ **ಭಾಮಿನಿ** ॥

ತುರಗವೇರುತಲಿತ್ತಲುಭಯರು ।
ಪೊರಟು ವೇಗದಿ ಗಿರಿನದಿಗಳು ।
ತ್ತರಿಸಿ ಬಹುದೇಶಗಳ ಕಳೆಕಳೆದೈದಿ ದಣಿವಿನಲಿ ॥
ತೆರಳುತಿರೆ ಮಿಗೆ ಚಂದ್ರಕಾಳೇ ।
ಶ್ವರವೆನಿಪ ದೇಗುಲವದೊಂದಿರೆ ।
ಹರಿಗಳನು ಬಂಧಿಸುತ ವಿಶ್ರಮಿಸಿದರದೇ ಸ್ಥಳದಿ ॥ 120 ॥

॥ **ಕಂದಪದ್ಯ** ॥

ಬಾಲರು ಮಲಗಿರೆ ಗೋಡೆಯ ।
ಮೇಲಿಹ ಸುಂದರ ತರುಣಿಯ ಚಿತ್ರವ ಕಂಡಾ ॥
ಭೂಲೋಲಾತ್ಮಜ ಮೂರ್ಛೆಯ ।
ತಾಳಲ್ವಿರಹದಿ ಸಚಿವಜ ಬೆರಗಿನೊಳೆಂದಂ ॥ 121 ॥

॥ **ನೀಲಾಂಬರಿ – ಏಕ** ॥

ಸಖನಿಗೇನಾದುದಿಂತು । ಮೂರ್ಛೆಯು ಆಕ ।
ಸ್ಮಿಕವಾಗಿದೆಲ್ಲಿ ಬಂತು ॥
ಸುಖದಿಂದೀವರೆಗೆ ಬಾಳಿ । ದಣಿದು ಬಂದು ।
ದಕೆ ಹೀಗಾಯ್ತೇನೊ ಕೇಳಿ ॥ 122 ॥

ತಿಳಿವೆನೆನ್ನುತ ಮಿತ್ರನ । ಶೈತ್ಯೋಪಚಾರ ।
ಗೊಳಿಸುತರಸುಪುತ್ರನ ॥
ತಲೆವಿಡಿದೊರಗಿಸುತ । ಕುಳ್ಳಿರಿಸಿ ತಂ ।
ಬೆಲರ ಮೆಲ್ಲಗೆ ಬೀಸುತ ॥ 123 ॥

ಏನಾದುದೆಲೆ ಸಖನೆ । ಮೂರ್ಛಿಸೆ ನಿನ ।
ಗೇನು ಬಂದುದು ಯಾತನೆ ॥
ನೀನರುಹೆನೆ ಕೇಳುತ್ತ । ಪೇಳ್ದನು ಮಂತ್ರಿ ।
ಸೂನುವ ಮೊಗ ನೋಡುತ್ತ ॥ 124 ॥

॥ **ಪಂತುವರಾಳಿ – ಏಕ** ॥
(ಏನಿದು ಏನಿದು ಸಮರದ ಪರಿಯೂ..... ಎಂಬಂತೆ)

ನೋಡು ನೋಡೈ ಪರಮಾಪ್ತ ನೀನಿತ್ತ ।
ಗೋಡೆಯೊಳ್ ಬರೆದ ಸುಂದರಿಗಾಯ್ತು ಚಿತ್ತ ॥
ಪಾಡರಿಯೆನು ಮುಂದೆ ಜೀವಿಪ ಬಗೆಯ ।
ನೋಡುತಿಲ್ಲಿಯೆ ಪ್ರಾಣಬಿಡುವೆನೀಯೆಡೆಯ ॥ 125 ॥

ತೆರಳು ನೀನೆಲ್ಲಿಗಾದರು ಎನ್ನ ಬಿಟ್ಟು ।
ಬರುವನಲ್ಲವು ನಾನೀ ತರುಣಿಯ ಬಿಟ್ಟು ॥
ಬರೆದ ರೂಪವೆ ಮೂರ್ಛೆಗೊಳಿಸಿರಲಿಷ್ಟು ।
ಹರಿಣಾಕ್ಷಿ ರೂಪವೆಂತರಿಯೆನೀ ಗುಟ್ಟು ॥ 126 ॥

ಎನೆ ಕೇಳಿ ಮಂತ್ರಿಸಂಭವನೆಂದ ನಿನ್ನಾ ।
ಮನವಿನಿತಾದುದಚ್ಚರಿಯಾದರಿನ್ನಾ ॥
ವನಿತೆ ಯಾರೆಂದರಿತವಳ ನಾ ತಂದು ।
ನಿನಗೆ ಲಗ್ನವ ಮಾಡಿಸುವೆ ಸೈರಿಸಿದು ॥ 127 ॥

॥ **ಭಾಮಿನಿ** ॥

ಎನುತುಸುರಿ ನಾನಾ ಪ್ರಕಾರದಿ ।
ಜನಪನಂದನನೊಡಬಡಿಸಿ ತ ।
ಕ್ಷಣದೊಳವ ಸಹಿತಶ್ವವೇರುತ ಪೊರಟು ಸನಿಹದಲಿ ॥
ಘನಜವದಿ ದ್ವಾರಾವತೀ ಪ ।
ಟ್ಟಣವ ಸೇರುತಲಲ್ಲಿ ಚರಿಸುತ ।
ಜನರ ಮೂಲಕ ಚಿತ್ರಕಾರನ ಕರೆಸುತವನೊಡನೆ ॥ 128 ॥

ಚಿತ್ರವನು ಬರೆದವರ ಕೇಳೆ ವಿ ।
ಚಿತ್ರವೇನಿದೆ ತಾನೆ ಬರೆದೆನೆ ।
ನುತ್ತರುಹಲಾ ತರುಣಿ ಯಾರೆಂದವಳ ವಿಷಯವನು ॥
ಬಿತ್ತರಿಪುದೆನೆ ಕೇಳ್ದು ಪೇಳಿದ ।
ಚಿತ್ರಿಕನು ನೀಲಾವತೀಶನ ।
ಪುತ್ರಿ ವಿದ್ಯಾಮಂಜರಿಯ ಪೂರ್ವೋಕ್ತ ಸಂಗತಿಯ ॥ 129 ॥

॥ **ಕಂದಪದ್ಯ** ॥

ಕೇಳ್ದು ಮಹೇಂದ್ರಂ ಸಂತಸ ।
ತಾಳ್ದಾ ಜಗಸಿಂಹನಿಗಿದನೆಲ್ಲವನರುಹುತ ॥
ತಾಳ್ದಿರು ನೀನಿಲ್ಲೆನುತಲಿ ।
ಪೇಳ್ದಾತನ ಬಿಟ್ಟೈದಿದ ನೀಲಾವತಿಗಂ ॥ 130 ॥

॥ **ವಾರ್ಧಕ** ॥

ಇತ್ತ ನೀಲಾವತೀ ಪುರದಿ ಪೊರಟಿಹ ಚರರು ।
ಚಿತ್ರವನು ತೋರುತಲ್ಲಲ್ಲರಸುತವನೀಶ ।
ಪುತ್ರಿಗಹ ವರನ ಕಾಣದೆ ದೊರೆಗೆ ಬಿನ್ನೈಸೆ ಚಿತ್ತದಲಿ ವ್ಯಥೆತಾಳುತ ॥
ಮತ್ತೇನ ಗೈವೆನೆಂದರಸ ಯೋಚಿಸುತಿರಲಿ ।
ಕಿತ್ತಲು ಮಹೇಂದ್ರನಾ ಪುರಕೈದುತಡುಗೆಯಂ ।
ವಿತ್ತಮಂ ಪಡೆದು ಬಡಿಸುವ ಮುದುಕಿಯೊರ್ವಳಿರಲವಳಲಿ ಬಿಡಾರಗೈದು ॥131॥

॥ **ಕೇತಾರಗೌಳ – ಅಷ್ಟ** ॥

ಕರೆದೊಂದು ದಿನ ವೃದ್ಧೆ । ಗರುಹಿದನಾ ಮಂತ್ರಿ ।
ತರಳ ಗೌಪ್ಯದಿ ಕೇಳವ್ವಾ ॥
ಒರೆವೆನೊಂದನು ಪೇಳ್ದ । ತೆರ ಗೈಯ್ಯೆ ಮನದಿಷ್ಟ ।
ಕರುಣಿಪೆ ಕೇಳಿದಂತ ॥ 132 ॥

ಅರಮನೆಗನುದಿನ । ತೆರಳಿ ನೀನಲ್ಲಿ ಗು ।
ಟ್ಟರಿತು ಬಂದೆನ್ನೊಡನೆ ॥
ಅರುಹುತಿರಲು ನಿನ್ನ । ಪೊರೆವೆನೆಂದೆನಲೊಪ್ಪಿ ।
ಇರುತಿರಲೆಂದಿನಂತೆ ॥ 133 ॥

ಒಂದು ದಿವಸ ವೃದ್ಧೆ । ಗೆಂದ ನಿಮ್ಮರಸನ ।
ನಂದನೆಯನು ನೋಡಲು ॥
ಬಂದುದೆನಗೆ ಮನ । ಕಿಂದೇನದಕೆ ಗೈವು ।
ದೆಂದೆನಲೊರೆದಳಿಂತು ॥ 134 ॥

॥ **ಬೇಗಡೆ – ಏಕ** ॥
(ಏನಿದೂ ನಿಮ್ಮಲ್ಲಿ ಸಂವಾದಾ ..... ಎಂಬಂತೆ)

ಲಾಲಿಸೈ ನುಡಿ ಬಾಲ ಗುಣಶೀಲ । ಪೇಳುವೆನು ನರಪತಿ ।
ಬಾಲೆಯನು ನೀ ನೋಡಲನುಕೂಲ ॥
ಕಾಲವಲ್ಲಿದು ಕಾದಿಹರು ಕರ ।
ವಾಳವನು ಪಿಡಿದವಳ ಗೃಹವನು ।
ಪೇಳಲಾರೆನು ಪಗಲಿರುಳು ನೋಣ ।
ಕಾಲನಿಕ್ಕದವೋಲು ಸುಭಟರು ॥ 135 ॥

ಆದರೊಂದಿದಕರುಹುವೆನು ನಿನಗೆ । ಸರಿಯಾದುಪಾಯವ ।
ಸಾಧಿಸಿದಡಿಷ್ಟಾರ್ಥವದು ಕೊನೆಗೆ ॥
ಮೋದದಿಂದಹುದವಧರಿಸು ಭಾ ।
ಗ್ಯೋದಯವು ನಿನಗಹುದು ಭಕ್ತಿಯೊ ।
ಳಾ ದಯಾನಿದಿ, ಕಾಳಿಕಾಲಯ ।
ಕೈದುವಳು ಪ್ರತಿ ಶುಕ್ರವಾರವು ॥ 136 ॥

ಆ ತಳೋದರಿ ಮಧ್ಯರಾತ್ರಿಯಲಿ । ತಾನೋರ್ವಳೇ ಜಗ ।
ಮಾತೆಯರ್ಚನೆ ಗೈದು ಪ್ರೀತಿಯಲಿ ॥
ಸಾತಿಶಯದೊಳು ಪೋಪಳದ ನೀ ।
ನೇ ತಿಳಿವುತಾ ದಿನವ ಸಾಧಿಸಿ ।
ಭೂತಳಾಧಿಪನಣುಗೆಯನು ಮನ ।
ಸೋತು ನೋಡಲು ಸಾಧ್ಯವಪ್ಪುದು ॥ 137 ॥

॥ **ಕಂದಪದ್ಯ** ॥

ಅರಮನೆಯುತ್ತರದ್ವಾರದೊ ।
ಳಿರುತಿಹುದೈ ಕಾಳಿಯಗೃಹವದು ನೀನದನುಂ ।
ಅರಿತಲ್ಲಡಗಿರೆ ರೂಪವ ।
ಸರಿಯಾಗಿಯೆ ನೋಡಲುಬಹುದೆಂದರುಹಲ್ ತಾಂ ॥ 138 ॥

॥ **ವಾರ್ಧಕ** ॥

ಕೇಳ್ದಾ ಮಹೇಂದ್ರನತ್ಯುತ್ಸಾಹಮಂ ಮನದಿ ।
ತಾಳ್ದಾ ತಳೋದರಿಯ ನೋಳ್ಪಾತುರದಲಿ ಮಿಗೆ ।
ಪೇಳ್ದಂ ಮಹೋಪಕಾರಗಳಾದುದೆಂದವಳಿಗಿಷ್ಟಾರ್ಥಮಂ ಸಲ್ಲಿಸಿ ॥
ಆಳ್ದನಣುಗನ ಭಾಗ್ಯಮಂ ನೋಳ್ಪೆನೆಂದು ಮನ ।
ದೋಳ್ಧೈರ್ಯದಿಂದ ಮರುದಿನ ಶುಕ್ರವಾರ ನಿಶಿ ।
ಯೋಳ್ದೈತ್ಯಮರ್ದಿನಿಯ ಗೃಹಕ್ಕೈದುತಾರರಿಯದಂತಡಗಿ ಕುಳಿತಿರ್ದನು ॥ 139 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಇತ್ತ ವಿದ್ಯಾಮಂಜರಿಯು ಸಮ ।
ರಾತ್ರಿಯೊಳು ಶ್ರೀದೇವಿಯರ್ಚನೆ ।
ಗರ್ತಿಯೊಳು ಫಲಪುಷ್ಪಗಳ ಕೊ ।
ಳ್ಳುತ್ತ ಮುದದಿ ॥ 140 ॥

ಕಾಳಿಕಾಲಯಕ್ಕೈದಿ ಬಂಧಿತ ।
ಕೀಲಸಡಿಲಿಸಿ ಒಳಪೊಗುತಲಿ ದು ।
ಕೂಲವನು ತೆಗೆದಿಟ್ಟು ಬಾಗಿಲ ।
ತಾಳ ಬಿಗಿದು ॥ 141 ॥

ದೇವಿಯರ್ಚನೆ ಗೈದು ಇದಿರಿನೊ ।
ಳಾ ವನಿತೆಯಂಗಾತ ಶಯನಿಸಿ ।
ಭಾವಭಕ್ತಿಯೊಳಕ್ಷಿಗಳ ಮುಗಿ ।
ದಾ ವಿರಹದಿ ॥ 142 ॥

ವೀಣೆಯನು ಪಿಡಿದೆದ್ದು ಕಣ್ದೆರೆ ।
ದಾ ನಿತಂಬಿನಿ ವೇಶ್ಯೆಯರ ತೆರ ।
ಗಾನನರ್ತನಗೈದು ಮಣಿದು ನಿ ।
ಧಾನವಾಗಿ ॥ 143 ॥

ಆ ಶಿವೆಯ ಸನ್ನಿಧಿಯೊಳಿರುತಿರು ।
ವಾ ಶಿಲಾವಿಗ್ರಹವನಪ್ಪುತ ।
ಹೇಸಿಕೊಳದಿಂತೆಂದಳದರೊಳು ।
ಬೇಸರಿಸದೆ ॥ 144 ॥

॥ **ವಾರ್ಧಕ** ॥

ಹೇ ಶಿಲಾವಿಗ್ರಹವೆ ನಿರ್ಜೀವವಿಹ ನಿನ್ನ ।
ನಾ ಶೀಲದೊರೆಯುತಾಲಿಂಗಿಸಿದೆ ಮಂತ್ರದಿಂ ।
ದೇ ಸಜೀವವ ಗೈವೆ ನಿನ್ನ ನೀನೊಲಿದೆನ್ನ ಕಾಮಬಾಧೆಯ ಹಿಂಗಿಸು ॥
ತೋಷಗೊಳಿಸೆನಗೆನುತ ಮಂತ್ರಮುಚ್ಚರಿಸಿ ಜೀ ।
ವೇಶನಂತೆನ್ನ ಅಂತಃಪುರಕೆ ಬಂದು ಅಭಿ ।
ಲಾಷೆಯಂ ತೀರ್ಚು ಜನರರಿಯರೈ ನಿನ್ನ ಪಿಂತಿರುಗಿ ಬರೆ ಶಿಲೆಯಾಗಿರು॥145॥

॥ **ಕಂದಪದ್ಯ** ॥

ಹೀಗುಸುರುತಲಾ ಕಾಮಿನಿ ।
ಯಾಗಳ್ ಮಂತ್ರದಿ ಜೀವಂಗೊಳಿಸೆನೆ ಕೇಳ್ದಾ ॥
ಬೇಗದಿ ತದ್ವಿಗ್ರಹ ಮಿಗಿ ।
ಲಾಗೀ ಪರಿಯುಸುರಿತು ಗಜಗಮನೆಯೊಳುಂ ತಾ ॥ 146 ॥

॥ ಕೇದಾರಗೌಳ – ಝಂಪೆ ॥

ಕನ್ನಿಕಾಮಣಿಯೆ ಕೇಳು । ನೀನೀಗ ।
ಲೆನ್ನ ಜೀವಿಸದೆ ತಾಳು ॥
ನಿನ್ನ ಮನದಭಿಲಾಷೆಯ । ತೀರಿಸಲು ।
ಎನ್ನೊಳಾಗದು ನಿಶ್ಚಯ ॥ 147 ॥

ಯಾಕೆನ್ನೊಳೊರೆವೆ ಕೇಳು । ನಿಂತೀರ್ಪ ।
ನಾ ಕದಲಲಾರೆನೇಳು ॥
ಸಾಕು ಮನುಜರಿಗಲ್ಲದೆ । ಈ ಮಂತ್ರ ।
ಸೋಕಲರಿಯದು ಎನ್ನದೆ ॥ 148 ॥

ಚಲಿಸಲಾರೆನದಾದರೂ । ಜೀವಿಸಿದ ।
ಫಲಕೊರೆವೆನಿನ್ನಾದರೂ ॥
ಬಳಲದಿರು ಸದ್ಯ ನಿನಗೆ । ದೊರಕುವನು ।
ಚೆಲುವ ಸ್ವೈರಿಸಿದೊಮ್ಮೆಗೆ ॥ 149 ॥

ನಿನ್ನ ಈ ದುರ್ನಡತೆಗೆ । ನೀ ಗೈವ ।
ಸನ್ನುತಾರ್ಚನೆ ಘನತೆಗೆ ॥
ಇನ್ನೇನು ಫಲದೊರಕದು । ದೇವಿಯೊಲ ।
ವಿನ್ನು ನಿನಗಿಂದಾಗದು ॥ 150 ॥

ಆದರೊಂದೊರೆವೆನಿದಕೆ । ಬಹ ವಾರ ।
ಕಾದರಂಬಿಕೆ ಸನಿಹಕೆ ॥
ಮೋದದಿಂ ನರಬಲಿಯನು । ಕೊಡಲು ಶಿವೆ ।
ಗೈದಪಳು ದರುಶನವನು ॥ 151 ॥

॥ ಭಾಮಿನಿ ॥

ದೇವಿಯೊಲಿಸುತಲವಳೊಳಿಷ್ಟವ ।
ನೀವೊಲಿದು ಪಡೆಯೆನುತ ವಿಗ್ರಹ ।
ವೀ ವಿಧದೊಳರುಹಲ್ಕೆ ಕೋಪದೊಳಂಬರವನುಟ್ಟು ॥

ಭಾವಕಿಯು ತನ್ನರಮನೆಗೆ ಬರ ।
ಲೀ ವಿಚಿತ್ರವನೆಲ್ಲ ನೋಡುತ ।
ಲಾ ವನಿತೆಯಳ ರೂಪ ಪೊಗುಳುತ ಬಂದು ಸಚಿವಜನು ॥ 152 ॥

॥ **ವಾರ್ಧಕ** ॥

ಮರುದಿವಸವಾ ವೃದ್ಧೆಯಿಂದವಳ ವೃತ್ತಾಂತ ।
ವರಿತು ಬೇಸರಿಕೆಯಿಂದಿಹ ವಾರ್ತೆಯಿಂ ತನ್ನ ।
ಕುರುಹನಡಗಿಸಿ ಪೆಣ್ಣುರೂಪದಿಂ ಕಾಮಾಕ್ಷಿಯೆಂಬ ಪೆಸರೊಳು ಜರಡೆಯು ॥
ಪರಿಮುಖದೊಳವಳಾಲಯಕ್ಕೈದಿ ಸೇವೆಯಿಂ ।
ಹರುಷಗೊಳಿಸುತಲಾಕೆಯೊಡನೆ ಜೂಜಾಟ ಮುಂ ।
ಗುರುಳ ಬಾಚುವ ತೈಲಮನ್ನೊತ್ತುವಿವನಾ ಚಮತ್ಕೃತಿಗೆ ಮೆಚ್ಚುತವಳು ॥ 153 ॥

॥ **ಕಂದಪದ್ಯ** ॥

ತನ್ನಯ ಕಂಠದೊಳಿರುತಿಹ ।
ರನ್ನದ ಹಾರವ ಬೆರಳಿನೊಳಿಹ ಮುದ್ರಿಕೆಯನ್ನಾ ॥
ಚೆನ್ನಿಗನಿಂಗೀಯಲು ಕೊಂ ।
ಡಿನ್ನೈದುವೆನೆನುತ್ತೈತಂದಂ ನಿಜಗೃಹಕಂ ॥ 154 ॥

॥ **ನಾದನಾಮಕ್ರಿಯೆ – ಅಷ್ಟ** ॥

ಇತ್ತಲೊಂದಿನ ಜಗಸಿಂಹನು । ಪೊರ ।
ಡುತ್ತ ಬೇಸರದಿಂದಲೂರನು ॥
ಸುತ್ತಿ ಬರುವೆನೆಂದು ಬಯಸುತ್ತ । ಪೇಟೆ ।
ಪತ್ತನಗಳನೆಲ್ಲ ನೋಡುತ್ತ ॥ 155 ॥

ಬರುತಿರೆ ಮುಂದಕೊಂದೆಡೆಯಲ್ಲಿ । ವೇಶ್ಯಾ ।
ತರುಣಿ ಪದ್ಮಾವತಿ ಬೆಡಗಲ್ಲಿ ॥
ಸರಿಯಿಲ್ಲ ತನಗೆಂಬ ತೆರದಲ್ಲಿ । ಪ್ರಾಯ ।
ಭರಿತ ಸೌಂದರ್ಯದೊಳಿರಲಲ್ಲಿ ॥ 156 ॥

ವಿಟಪುರುಷರ ಬರವಿನೊಳಾಕೆ । ತನ್ನ ।
ಕುಟಿಲತನದಿ ಮೋಹಿಸುತಲೀಕೆ ॥

ಸಟೆನಗೆ ಸೂಸುತ ದ್ವಾರದಿ । ನಿಂದ ।
ವಿಟಗಾರ್ತಿಯನು ನೋಡಿ ದೂರದಿ ॥ 157 ॥

ಯಾರಿವಳಮಮ ಬಲ್ ಸುಂದರಿ । ನೋಡ ।
ಲಾರೆಂದರಿಯೆ ಕಾಮಮಂದಿರಿ ॥
ಸೂರೆಯಾದುದು ಮನವಿವಳೊಳು । ತಾಳ ।
ಲಾರೆನೆಂದೊರೆದ ಭಾವಕಿಯೊಳು ॥ 158 ॥

॥ ಕಲ್ಯಾಣಿ – ಆದಿ ॥

(ಕುಂದರದನೆ ಪೂರ್ಣೇಂದುವದನೆ ..... ಎಂಬಂತೆ)

ನೀರೆ ಸುಗುಣೆ ಗಂ । ಭೀರೆ ಸುಧಾಕರ । ಮೋರೆ ಕುಮುದನೇತ್ರೆ ॥
ಮಾರನ ಗಿಣಿವೈ । ಯ್ಯಾರ ಬೆಡಗುನಗೆ । ಬೀರೆ ವಿಮಲಗಾತ್ರೆ ॥
ಯಾರೆಂದರಿಯೆ ವಿ । ಚಾರಿಪೆ ತವಮನ ।
ಕೋರಿಕೆ ಸಲಿಸುವೆ । ಸೂರೆ ನಿನಗೆ ನಾ । ನೀರೆ ॥ 159 ॥

ಅಂಗಜನರಗಿಣಿ । ತುಂಗಪಯೋಧರೆ । ಭೃಂಗಾಳಕಿ ವಿಮಲೆ ॥
ಸಂಗವ ಬಯಸುತ । ನಂಗಜಬಾಣದಿ । ಭಂಗಿತ ನಾ ಕಮಲೆ ॥
ಹಿಂಗಿಸುತಲಿ ಮನ । ದಿಂಗಿತವನು ಪೂ ।
ರ್ಣಾಂಗಗೊಳಿಸು ಸುಗು । ಣಾಂಗಿ ಸುಕೋಮಲೆ ॥ ನೀರೆ ॥ 160 ॥

॥ ಕಂದಪದ್ಯ ॥

ಎಂದೀ ಪರಿಯವನೀಪತಿ ।
ನಂದನ ಹಲವಂಗದಿ ಕೇಳುತಿರಲ್ಕಾತನ ॥
ಸುಂದರರೂಪವನೀಕ್ಷಿಸು ।
ತಂದಾಲೋಚಿಸಿ ನಸುನಗುತೆಂದಳ್ ನಲವಿಂ ॥ 161 ॥

॥ ನವರೋಜು – ಏಕ ॥

ಸುಂದರ ಕೋಮಲಕಾಯ । ಬಾ ।
ನಿಂದಿಹೆ ಯಾತಕೆ ಪ್ರೀಯ ॥
ಮಂದಿರವಿದು ಪಾವನ ತವದರ್ಶನ ।
ದಿಂದ ಕೃತಾರ್ಥೆ । ವಂದಿಪೆ ಚರಣಕೆ ॥ 162 ॥

ನಿನ್ನಯ ರೂಪವ ಪೋಲ್ವ । ಜನ ।
ರೆನ್ನನು ನೋಡುತ ಸೋಲ್ವ ॥
ರೆನ್ನಲು ನಾನೇ ಧನ್ಯೆ ಸುಗುಣ ಸಂ ।
ಪನ್ನ ಸುಕೋಮಲ । ರನ್ನ ಶುಭಾಕರ ॥ 163 ॥

ಕರೆತಂದಾತನ ಮನೆಗೆ । ವಿಷ ।
ತರುಣಿ ಮುಗುಳ್ನಗೆ ಮಿನುಗೆ ॥
ಪರಿಪರಿಯುಪಚರಿಸುತ ಮನ್ಮಥಶರ ।
ದುರುಬೆಯ ಹರಿಸುತ ರಮಿಸುತಲನುದಿನ ॥ 164 ॥

॥ ಭಾಮಿನಿ ॥

ಇನಿತು ಕಾಮಿನಿ ಜನಪಸುತನನು ।
ದಿನದಿನದಿ ಮೋಹಿಸುತ ತನ್ನಯ ।
ಮನೆಯೊಳಿಟ್ಟುಪಚರಿಸುತಿರಲವಳಂಗಸುಖಕೆಳಸಿ ॥
ತನು ಮರೆವುತವಳಿಚ್ಛೆಯಂದದಿ ।
ಧನಕನಕಗಳನಿತ್ತು ಮುಂದಹು ।
ದನು ನಿರೀಕ್ಷಿಸದಿರ್ದನಾ ಜಗಸಿಂಹ ಮೌಢ್ಯದಲಿ ॥ 165 ॥

ಇಂತಿರಲ್ಕಾ ರಾಜಕುವರಿಗೆ ।
ಪಿಂತೆ ಪ್ರತಿಮೆಯು ಪೇಳ್ದ ವಾರವು ।
ಬಂತೆನುವುದರಿತಾ ಮಹೇಂದ್ರನು ತಾನೆ ದೇವಿಯನು ॥
ಮುಂತೆ ವೊಲಿಸುವೆನೆನುತಲೊರ್ವನ ।
ನಂತರಂಗದೊಳೊಯ್ದು ನರಬಲಿ ।
ಯಂ ತವಕದಿಂದೀಯೆ ಮೈದೋರಿದಳು ಚಂಡಿಕೆಯು ॥ 166 ॥

॥ ನವರೋಜು – ಏಕ ॥

ಮೆಚ್ಚಿದೆ ಮೆಚ್ಚಿದೆ ಮಗನೆ । ಮನ ।
ದಿಚ್ಛೆಯ ಪೇಳೆನ್ನೊಡನೆ ॥
ಸಚ್ಚರಿತನೆ ನಿನ್ನಿಂದಲಿ ಮುಂದಕೆ ।
ಹೆಚ್ಚಿನ ಕಾರ್ಯಗಳಾಗುವುದಿಹುದೈ ॥ 167 ॥

ಆವನಿಪನಾತ್ಮಜೆಯನ್ನಾ । ನೇ ।
ಮವಗೊಂಡರ್ಚಿಸಲಿನ್ನಾ ॥
ಕುವರಿಗೆವೊಲಿಯೆನು ನಿನ್ನ ಚಮತ್ಕೃತಿ ।
ಅವಳಿಗೆ ಬರದೊಲಿದವ ನೀನೆನಗೆಲೆ ॥ 168 ॥

ಬೇಡಿಕೊ ಬೇಕಾದದನು । ದಯ ।
ಮಾಡುವೆನಿಷ್ಟಾರ್ಥವನು ॥
ರೂಢಿಯೊಳೆನಗೀ ತೆರ ಸದ್ಭಕ್ತರ ।
ನೋಡೆನೆನಲು ಕೈಜೋಡಿಸಿ ನುತಿಸಿದ ॥ 169 ॥

॥ ಸುರುಟಿ – ಏಕ ॥

ಪಾಲಿಪುದೆಲೆ ತಾಯೆ । ತ್ರೈಜಗ ।
ಪಾಲೆ ಮಹಮ್ಮಾಯೆ ॥
ನೀಲಾಳಕಿ ಗುಣ । ಶೀಲೆ ಶಿವಪ್ರಿಯೆ ।
ಖೂಳಾಂತಕಿ ಮಹ । ಕಾಳಿ ಶುಭಪ್ರದೆ ॥ 170 ॥

ನಿನ್ನಯ ದರುಶನದಿ । ನಾನೇ ।
ಧನ್ಯ ಜಗತ್ರಯದಿ ॥
ಎನ್ನಲನುಗ್ರಹ । ಪೂರ್ಣವಿರಿಸಿ ಜಗ ।
ಮಾನ್ಯನೆನಿಸಿ ಕೃಪೆ । ಯನ್ನೀಡೌ ಸದ ॥ 171 ॥

ನಾ ನಡೆಸುವ ಸಕಲ । ಕಾರ್ಯಕೆ ।
ನೀನೊಲಿದಿರ್ದಖಿಳ ॥
ಮಾನವರೊಳು ಚೌಷಷ್ಟಿವಿದ್ಯೆಯೊಳ ।
ಗಾನೆ ಮಿಗಿಲುಯೆನಿ । ಸೌ ನೀ ದಯದಲಿ ॥ 172 ॥

ಮೃತದೇಹವ ನಾನು । ಮುಟ್ಟಲು ।
ತತುಕ್ಷಣ ಜೀವವನು ॥
ಹಿತದಿಂ ಪಡೆವಂ । ತತಿಶಯ ವರವನು ।
ಸತತವನುಗ್ರಹಿಸೆನಲಸ್ತೆಂದಳು ॥ 173 ॥

॥ **ಭಾಮಿನಿ** ॥

ವೀರ ನಿನ್ನಯ ಭಕ್ತಿಶೌರ್ಯಕೆ ।
ಮಾರುವೋದೆ ಸದಾಶುಭವು ಮೈ ।
ದೋರುವಂತಾಶೀರ್ವದಿಸಿ ವರವಿತ್ತೆ ಕೊಳ್ಳೆನುತ ॥
ಸಾರಲಂತರ್ಧಾನಕಿತ್ತ ಕು ।
ಮಾರ ನರಬಲಿಗೊಟ್ಟ ದೇಹವ ।
ಸೇರಿಸುತ ಶಿರಮುಟ್ಟೆ ಜೀವಿಸುತೆದ್ದು ನಮಿಸಿದನು ॥ 174 ॥

॥ **ಕಂದಪದ್ಯ** ॥

ನಮಿಸಿದ [ಮುಗುದನ] ಮನ್ನಿಸಿ ।
ಕ್ರಮದಿಂದುಚಿತವನಿತ್ತು ಕಳುಹಲಾ ಬಳಿಕಿ ।
ತ್ತ ಮಹೇಂದ್ರಂ ಶ್ರೀದೇವಿಗೆ ।
ನಮಿಸುತ ತನ್ನಯ ಸದನವ ಸೇರ್ದಂ ಮುದದಿಂ ॥ 175 ॥

॥ **ವಾರ್ಧಕ** ॥

ಇತ್ತ ವಿದ್ಯಾಮಂಜರಿಯು ಕಾಳಿಕಾಂಬಿಕೆಯ ।
ನಿತ್ತು ನರಬಲಿಯನೊಲಿಸುವೆನೆಂದೆನುತ ಹರುಷ ।
ವೆತ್ತೊರ್ವ ಚಾರನೊಡಗೊಂಡಖಿಳ ಸನ್ನಹದಿ ಕಾಳಿಕಾಲಯಕೆ ಬಂದು ॥
ಗೊತ್ತರಿಯದಂತವನ ಬಲಿಗೊಟ್ಟು ಬೇಡಿಕೊಳೆ ।
ಪ್ರತ್ಯಕ್ಷವಾಗದಿರಲೇನೆಂದು ಮನದಿ ಬೇ ।
ಸತ್ತು ಪಿಂತಿರುಗೆ ಬಾಗಿಲೊಳು ರಕುತದ ಕುರುಹ
ನೋಡುತಾಶ್ಚರ್ಯಗೊಳುತ ॥ 176 ॥

॥ **ಸಾಂಗತ್ಯ – ರೂಪಕ** ॥

ಅಕಟಕಟೇನಿದಚ್ಚರಿಯಾ ಪ್ರತಿಮೆಯೆಂದು ।
ದಕೆ ನಂಬಿ ನರಬಲಿ ಕೊಡಲು ॥
ಮುಕುತಿದಾಯಕಿಯ ದರ್ಶನವಿಲ್ಲ ಬಾಗಿಲೊಳ್ ।
ರಕುತ ಬಿದ್ದಂತಿದೆ ಶಿವನೆ ॥ 177 ॥

ಎನುತ ದುಃಖಿಸುತರಮನೆಗೆ ಪಿಂತಿರುಗಿ ಸು ।
ಮ್ಮನೆ ಮುಸುಕಿಕ್ಕೆ ಮೌನದಲಿ ॥
ವನಿತೆಯಿರಲ್ಕುದಯದಿ ಮಹೇಂದ್ರನು ದೇವಿ ।
ಯನು ನೆನಯುತಲದೃಶ್ಯದಲಿ ॥ 178 ॥

ಬಂದು ದೇವಿಯ ಸನ್ನಿಧಿಯಲಿ ಭೇದನಶಿರ ।
ದಿಂದ ಬಿದ್ದವನ ಮೈದಡವಿ ॥
ಹೊಂದಿಸಿ ತಲೆಯನೆಬ್ಬಿಸೆ ಚಾರ ಜೀವಿಸು ।
ತಂದಡಿಗೆರಗಿ ಬೀಳ್ಕೊಂಡು ॥ 179 ॥

ವಿದ್ಯಾಮಂಜರಿಯೆಡೆಗೈದೆ ಕಂಡಿವನನು ।
ಚೋದ್ಯಗೊಂಡವನೊಳೀ ಪರಿಯ ॥
ವೇದ್ಯವರಿಯಲೊರ್ವ ರಾಜಪುತ್ರನು ತನ್ನ ।
ಸದ್ಯ ಜೀವಿಸಿದನೆಂದೊರೆಯೆ ॥ 180 ॥

ಕೇಳುತಚ್ಚರಿಯೊಳಾ ಬಾಲೆ ಮೌನದೊಳು ಮಾಂ ।
ಕಾಳಿಯು ಪ್ರತ್ಯಕ್ಷಗೊಳದ ॥
ಮೂಲವನರಿಯದಾರೊಳು ಪೇಳದತಿದುಃಖ ।
ತಾಳುತಾಹಾರವ ತೊರೆದು ॥ 181 ॥

॥ **ಕಂದಪದ್ಯ** ॥

ಮಲಗಿದ ಸತಿಯನ್ನೀಕ್ಷಿಸಿ ।
ನೆಲೆಯರಿಯದೆ ದಾದಿಯರೈತಂದಾ ಮಾತೆಗೆ ॥
ತಲೆಬಾಗುತ ವಿಷಯವನರು ।
ಹಲು ಭಯದಿಂದೈತಂದಣುಗೆಯ ಕಂಡೆಂದಳ್ ॥ 182 ॥

॥ **ಸಾರಂಗ – ಅಷ್ಟ** ॥

ಏನಾದುದೆಲೆ ಮುದ್ದುಮಗಳೆ । ಮೌನ ।
ವೇನೆನ್ನೊಳರುಹಂತರ್ಯಗಳೆ ॥
ತಾನರಿಯೆನು ದುಃಖ । ಕೇನು ಕಾರಣವೆಂದು ।
ನೀನಂತರ್ಯವ ಪೇಳ । ಲಾನಿದಕೊದಗುವೆ ॥ 183 ॥

ತಕ್ಷಣ ತವಪಿತಗರುಹಿ । ನಿನ್ನ ।
ಪೇಕ್ಷೆಯ ಸಲಿಸುವೆ ಹರಹಿ ॥
ಈ ಕ್ಷಣವರುಹೆನ್ನೊ । ಳಾಕ್ಷೇಪವಿಡದೆ ಕಾ ।
ಮಾಕ್ಷಿ ಮೌನವ ತೋರ । ದೀಕ್ಷಿಸೆನ್ನನು ಮುದ್ದು ॥ 184 ॥

ಎಂದು ನಾನಾವಿಧದೊಳಗೆ । ಕೇಳ ।
ಲೆಂದಳು ತನಗಾದುದಿಳೆಗೆ ॥
ಕುಂದೆನುತಖಿಳವ । ನೊಂದುಳಿಯದೆ ಪೇಳ ।
ಲಂದಣುಗೆಯ ಸಾಮ । ದಿಂದೊಡಂಬಡಿಸಲು ॥ 185 ॥

॥ **ಭಾಮಿನಿ** ॥

ಮಗಳೆ ಮರುಗದಿರಿದಕೆ ಮನಸಿನ ।
ಬಗೆಯನರಿತೆನು ಪತಿಯೊಳೀವಿಷ ।
ಯಗಳರುಹಿ ನಿನ್ನಿಷ್ಟ ಸಲೆ ಕೈಗೂಡುವಂದದಲಿ ॥
ಮಿಗೆ ಪ್ರಯತ್ನವ ಗೈವೆನೆನುತೊಗು ।
ಮಿಗೆ ಕುಮಾರಿಯ ಸಂತವಿಸುತರ ।
ಸಗೆ ತಿಳುಹೆ ಪತಿ ಬರ ನಿರೀಕ್ಷಿಸುತಿರ್ದಳೀಚೆಯಲಿ ॥ 186 ॥

॥ **ಭಾಮಿನಿ** ॥

ಇತ್ತಲಾ ಜಗಸಿಂಹ ವೇಶ್ಯೆಯು ।
ಚಿತ್ತವನು ಮುದಗೊಳಿಸೆ ತನ್ನ ಸ ।
ಮಸ್ತ ದ್ರವ್ಯಾದಿಗಳನಾಕೆಗೆ ಕೊಟ್ಟು ಕಳೆಯಲ್ಕೆ ॥
ರಿಕ್ತಹಸ್ತನನುಪಚರಿಸುವುದು ।
ವ್ಯರ್ಥವೆಂದವಳಾದರಿಸದಿರೆ ।
ಮತ್ತವನು ಪದ್ಮಾವತಿಯ ಕರೆದೆಂದನೊಂದು ದಿನ ॥ 187 ॥

॥ **ಬೇಹಾಗ್ – ರೂಪಕ** ॥

ಜಲಜನೇತ್ರೆ ವಿಮಲಗಾತ್ರೆ । ಸುಲಲಿತಾಂಗಿ ಜಾಣೆ ॥
ಕೆಲವು ದಿನದಾರಭ್ಯವೆನ್ನ । ಬಳಿಗೆ ಬಾರೆಯೇನೇ ॥
ಘಳಿಗೆಯೆನ್ನ ಬಿಡೆನೆನುತ್ತ । ಲುಲಿದೆ ಮಾತಿನಲ್ಲೆ ॥
ಸೆಳೆದು ಸರ್ವಸ್ವವನು ಕುಲದ । ಬಲುಹ ತೋರ್ದೆಯಲ್ಲೆ ॥ 188 ॥

ಬಡವ ನೀನು ನಿನ್ನೊಳೇನ । ಪಡೆಯಲಾಪೆ ನಾನು ॥
ತಡೆಯದಿನ್ನು ತೆರಳು ದಾರಿ । ಪಿಡಿದು ಮಾತಿಂದೇನು ॥
ಪಿಡಿದು ಕರವ ಸತಿಯಭೀಷ್ಟ । ನಡೆಸೆ ಶಕ್ತನಾಗದ ॥
ಜಡನಿಗೇಕೆ ಬೇಕು ಬರಿದೆ । ಮಡದಿಯೆಂಬ ದುರ್ಮದ ॥ 189 ॥

ಎನ್ನ ಸಕಲ ಒಡವೆ ದ್ರವ್ಯ । ವನ್ನು ಪಡೆದ ಮೇಲೆ ॥
ಇನ್ನು ಬಡವನೆಂದು ತ್ಯಜಿಸು । ತಿರುವ ನೀನು ಸೂಳೆ ॥
ಎನ್ನುವದಿಂದರಿತೆ ಲೇಸಾ । ಯ್ತಿನ್ನು ನಿನ್ನ ಮೋರೆ ॥
ಯನ್ನು ನೋಡೆನೆನುತ ಶಪಥ । ವನ್ನು ಗೈದು ಬೇರೆ ॥ 190 ॥

॥ **ಕಂದಪದ್ಯ** ॥

ಮನನೋಯುತ ಬಿಟ್ಟವಳಂ ।
ಜನಪಾತ್ಮಜ ಪೊರಟತಿದಾರಿದ್ರ್ಯದ ದೆಸೆಯಿಂ ॥
ಧನಪಾಲನೆನಿಪ್ಪಾ ವೈ ।
ಶ್ಯನ ಗೃಹದೊಳ್ ಕೂಲಿಯೊಳಿರೆ ಕೆಲದಿನ ಬಳಿಕಂ ॥ 191 ॥

॥ **ವಾರ್ಧಕ** ॥

ಭೂಮೀಶನಾತ್ಮಜನ ನೋಡುವಾತುರದಿಂದ ।
ಲಾ ಮಹೇಂದ್ರಂ ಬಳಿಕ ಬರಲೊಂದು ದಿನಮಿವಂ ।
ಕಾಮುಕತ್ವದಿ ಸರ್ವಮಂ ಕಳೆದು ಪರಸೇವೆಯೊಳು ಜೀವಿಸುತ್ತಿರ್ಪುದ ॥
ಆ ಮಹಾಪಟ್ಟಣದೊಳರಿತು ಬಂದವನೆಡೆಗೆ ।
ತಾ ಮರುಗುತವನ ಸೆರೆಯನ್ನುಪಾಯದಿ ಬಿಡಿಸಿ ।
ಪ್ರೇಮದಿಂದಪ್ಪಿ ವ್ಯವಹಾರ ನೀತಿಯನರುಹಿ ಕರೆತಂದ ಜೊತೆಗೂಡುತ ॥ 192 ॥

॥ **ಸಾಂಗತ್ಯ – ರೂಪಕ** ॥

ಅರಸನಾತ್ಮಜಗೆಲ್ಲವರುಹಿ ಮುಂದಿರ್ವರು ।
ತೆರಳಿ ಬಂದಾ ನೀಲಾವತಿಯ ॥
ಪುರ ಸನಿಹದೊಳಿರುತಿರುವವಂತಿಯ ಪುರ ।
ವರಕೆ ಬಂದವನೀಶಸುತನ ॥ 193 ॥

ಬಿಟ್ಟಾತನನು ಬಹೆನಿಷ್ಟಾರ್ಥ ಪಡೆದೆನ್ನು ।
ತಿಟ್ಟೊಂದಾಲಯದಿ ಪಿಂತಿರುಗಿ ॥
ಸೃಷ್ಟಿಪಾತ್ಮಜೆಯಳ ಗುಟ್ಟರಿಯುವ ಕಾರ್ಯ ।
ದಿಷ್ಟದಿ ಬರೆ ನೀಲಾವತಿಗೆ ॥ 194 ॥

ಬಂದವನೀಪಾಲ ನಂದನೆಯೊಳು ಹಲ ।
ವಂದದೊಳವಳಿಗೆ ಸಿಗದೆ ॥
ನಿಂದದೃಶ್ಯದಿ ಪೀಡಿಪಂದವರಿಯದೆ ಪೂ ।
ರ್ಣೇಂದುವದನೆ ಭೀತಿಗೊಳುತ ॥ 195 ॥

ಮಾತೆಪಿತರೊಳಾದ ರೀತಿಯನರುಹೆ ಮ ।
ತ್ತಾತುರಗೊಂಡು ತತ್ಸುತೆಯ ॥
ಕಾತರಿಸದಿರೆಂದು ಕಾರಣವರಿಯದೆ ।
ಸೋತು ಯೋಚಿಸುತಿರಲ್ಕಿತ್ತ ॥ 196 ॥

॥ **ಭಾಮಿನಿ** ॥

ಪೊರಟು ಬಳಿಕ ಮಹೇಂದ್ರನಾ ಪುರ ।
ವರ ಸಮೀಪೋದ್ಯಾನದಲಿ ಶುಭ ।
ತರ ಜಲಾಶಯದೆಡೆಯ ಪರ್ಣಾಶ್ರಮವ ವಿರಚಿಸುತ ॥
ಪರಮಯೋಗಿಯ ತೆರದಿ ಕಪಟದಿ ।
ಧರಿಸಿ ತಾ ಸಂನ್ಯಾಸಿವೇಷದೊ ।
ಳಿರಲು ಚರರಿದ ಕಂಡು ಭೂಪನೊಳೊರೆದರತಿಶಯದಿ ॥ 197 ॥

॥ **ಮುಖಾರಿ – ಏಕ** ॥

ಭೂಮೀಶಾಗ್ರಣಿಯೆ ಲಾಲಿಸಯ್ಯಾ । ಪದಕೊಂದಿಪೆ ಜೀಯ ।
ಪ್ರೇಮದೊಳೆಮ್ಮ ಪಾಲಿಸಯ್ಯಾ ॥
ಈ ಮಹಪುರದುದ್ಯಾನದಿ ತಾ ಬಲು ।
ನೇಮದೊಳಿಹ ಸಂನ್ಯಾಸಿಯು ಬಂದಾ ।
ಕಾಮಹರನ ನೆನೆಯುತ ತಪಗೈಯ್ಯುವ ।
ನಾ ಮಹಪರ್ಣಾಲಯದೊಳು ನೆಲಸಿಹ ॥ 198 ॥

ಬೇಡಿರ್ದರಿಷ್ಟಾರ್ಥವನೀವ । ಮನದಿಂಗಿತವರಿವ ।
ನಾಡಾಡಿಯಲ್ಲವನ ಸೋವ ॥
ಪಾಡರಿಯೆವು ಮಿಗೆ ರೂಢಿಪ ಚಿತ್ತೈ ।
ಸಾಡಿಮುಗಿಯದಾತನ ಮಹಿಮೆಯ ಕೊಂ ।
ಡಾಡುವುದಲ್ಲವು ನೋಡಿದಡಿರಿವುದು ।
ಕೂಡೆ ಕರೆಸೆ ದಯಮಾಡುವುದೊಳ್ಳಿತು ॥ 199 ॥

॥ **ಭೈರವಿ – ಅಷ್ಟ** ॥

ಚಾರರೆಂದುದ ಕೇಳುತ । ಭೂಮೀಂದ್ರನು ।
ಭೂರಿತೋಷವ ತಾಳುತ ॥
ಶ್ರೀರಮಣನೆ ಮನದಿಚ್ಛೆ ಸಲಿಸೆ ಬಂದ ।
ನೀ ರೀತಿಯೆಂದೆನುತ ॥ 200 ॥

ತಡೆಯದಿರೆಲೆ ಸಚಿವ । ಮಹಾತ್ಮರ ।
ನೊಡನಿಲ್ಲಿ ಕರೆತರುವ ॥
ಒಡನೆ ದಂಡಿಗೆ ವಾದ್ಯ ಸಡಗರದಿಂದಲಿ ।
ನಡೆಯಲು ರಚಿಸನುವ ॥ 201 ॥

ಎಂದಾ ಭೂಮಿಪ ತೋಷದಿ । ಸರ್ವರ ಕೂಡು ।
ತಂದ್ಯೈದುತತಿ ವೇಗದಿ ॥
ಸಂದ ಯೋಗಿಯ ತೆರ । ದಿಂದ ಮೌನದಲಿ ಮ ।
ಹೇಂದ್ರ ಕುಳ್ಳಿರೆ ದೂರದಿ ॥ 202 ॥

॥ **ಭಾಮಿನಿ** ॥

ಪಾದದೆಡೆಯಲಿ ಮಣಿದು ಕರುಣಿಪು ।
ದೈ ದಯದೊಳೆಂದೆನುತ ನುತಿಸುವ ।
ಭೂಧವನ ವೀಕ್ಷಿಸುತ ಕಪಟಯತೀಶ ಕಂದೆರೆದು ॥
ಮೇದಿನೀಶನನೆತ್ತಿ ತವ ಪುರ ।
ವಾದುದಾವೆಡೆ ಬಂದ ಪರಿಯರು ।
ಹೈ ಧರಾಧಿಪನೆಂದು ಮನ್ನಿಸಲೆಂದ ಕೈಮುಗಿದು ॥ 203 ॥

॥ ಪಂತುವರಾಳಿ – ಮಟ್ಟೆ ॥

(ಎನುತ ವೃತ್ರಜ್ವಾಲೆ ...... ಎಂಬಂತೆ)

ಕರುಣವಿರಿಸು ಪರಮಪೂಜ್ಯ ಗುರುವರೇಣ್ಯನೆ ।
ಅರಸ ನೀಧರಿತ್ರಿಗೆನ್ನೊಳಿರಿಸು ದಯವನೆ ॥
ಚರಣವೆತ್ತಲಿಂದಲಿಲ್ಲಿ ಬರವು ಎನ್ನಯ ।
ಪುರಪವಿತ್ರವಾಯ್ತು ಬಂದ ಪರಿಗೆ ಚಿನ್ಮಯ ॥ 204 ॥

ಆದರೆನ್ನ ಮನದಭೀಷ್ಟ ಗೈದು ಕರುಣದಿ ।
ಸಾಧುವರ್ಯ ಪೊರೆಯೊ ಬೇಡಿಕೊಂಬೆ ಚರಣದಿ ॥
ಮೋದದಿಂದಲೆನ್ನ ಗೃಹಕೆ ಪಾದದರುಶನ ।
ವಾದರಾಂ ಕೃತಾರ್ಥ ಧನ್ಯನಾದೆ ಚಿದ್ಘನ ॥ 205 ॥

॥ ಕೇದಾರಗೌಳ – ಅಷ್ಟ ॥

ಜನಪಾಲ ಕೇಳೆಮಗನುದಿನ ಜಪತಪ ।
ವನು ಮಾಡಲನುಕೂಲವು ॥
ವನವಲ್ಲದರಮನೆಯಲ್ಲದರಿಂ ನಿನ್ನ ।
ಮನದಿಚ್ಛೆ ಕೈಗೂಡದು ॥ 206 ॥

ಪುರಕೆ ಬಂದರು ನಿನ್ನ ಅರಮನೆಯೊಳು ಸದಾ ।
ಇರಲಾರೆ ನಿಶ್ಚಯವು ॥
ತೆರಳಿ ಬಂದಾಗಾಗ ದರುಶನವೀಯುವೆ ।
ಸರಿ ಕಂಡರರುಹೆನಲು ॥ 207 ॥

ಎಂದಡದೇ ಭಾಗ್ಯವೆಂದವನಿಪನು ಹೊ ।
ನ್ನಂದಣವೇರಿಸುತ ॥
ಮಂದಿ ಘೋಷದಿ ಕರೆತಂದರಮನೆಗೆ ಸಾ ।
ನಂದದೊಳುಪಚರಿಸಿ ॥ 208 ॥

ಸತಿಸಹಿತಾ ನೃಪ ಯತಿಪದ ಪೂಜಿಸಿ ।
ಸತತ ದುಃಖಿಸುತಲಿಹ ॥
ಸುತೆಯ ಸಂತೈಸಬೇಕೆನೆ ಯೋಗಿ ಪೋದ ಸ ।
ಮ್ಮತಿಸುತಂತಃಪುರಕೆ ॥ 209 ॥

॥ **ಭಾಮಿನಿ** ॥

ಬಂದ ಯತಿವರ್ಯನನು ಕಾಣುತ ।
ಲಿಂದುವದನೆ ಹಿತೋಪಚಾರದಿ ।
ವಂದಿಸುತ ಸತ್ಕರಿಸಿ ಭಯಭಕ್ತಿಯೊಳು ಕೈಮುಗಿದು ॥
ನಿಂದಿರಲು ಮನದಿಂಗಿತವನರಿ ।
ವಂದದಲಿ ಜನಪಾತ್ಮಜೆಯ ಮೊಗ ।
ದಂದವಿಕ್ಷಿಸುತೆಂದ ಕಪಟಮುನೀಂದ್ರ ಮಂಜರಿಗೆ ॥ 210 ॥

॥ **ಬೇಗಡೆ – ಏಕ** ॥

ಬಾಲೆ ಮಿರುಪ ಕಪೋಲೆ ಗುಣಶೀಲೆ । ನಿನ್ನಂತರಂಗದ ।
ಮೂಲವರಿತೆನು ಪೇಳುವೆನು ಕೇಳೆ ॥
ಲೋಲಲೋಚನೆಯಖಿಳ ವಿದ್ಯದಿ ।
ಮೇಲೆನಿಸಿ ಕೊಂಡಿರ್ಪ ಪತಿಯನು ।
ಕೂಲವಾಗದ ಕೊರತೆಯೊಂದನು ।
ತಾಳಿರುವೆ ನೀ ಸತತ ಮನದೊಳು ॥ 211 ॥

ಆದಕೆ ನೀನಾ ಕಾಳಿಕಾಲಯದಿ । ಪ್ರತಿ ಶುಕ್ರವಾರವು ।
ಮದನಬಾಧೆಯ ತೀರಿಪಾತುರದಿ ॥
ಕದಲದ ಶಿಲಾವಿಗ್ರಹವ ತಡೆ ।
ಯದೆ ಬಿಗಿವುತಾಲಿಂಗಿಸಿದಡದು ।
ಚದರದುದರಿಂ ನಿನ್ನ ಮನವನು ।
ಮುದಗೊಳಿಸಲದರಿಂದಸಾಧ್ಯವು ॥ 212 ॥

ಇನಿತದಲ್ಲದೆ ಕಾಳಿಕಾಲಯದಿ । ನೀ ಗೈದ ಕಾರಿಯ ।
ವನಿತುವನು ನಾ ತಿಳಿದೆ ಯೋಗದಲಿ ॥
ಘನವಿರಕ್ತನು ಅನ್ಯರೊಡನಿದ ।
ರನುವನರುಹಲು ಸಲ್ಲ ನಿನ್ನಯ ।
ಮನದ ಚಿಂತೆಯ ಪರಿಹರಿಸಲೆಂ ।
ದನು ವೃಥಾ ನೀ ಭೀತಿಗೊಳದಿರು ॥ 213 ॥

ತರುಣಿ ಕೇಳ್ ನಿನಗೆನಿತು ಸಂಪದವು । ಬೇಕಾದ ವಿದ್ಯವು ।
ದೊರಕಿದರು ಗುಣರೂಪವೈಭವವು ॥
ಇರಲು ಫಲವೇನಡವಿಯೊಳು ಚಂ ।
ದಿರಕಿರಣ ಬರಿದಾದ ದೇಗುಲ ।
ದಿರವಹುದು ಪತಿಯಿಲ್ಲದಿರೆ ನೀ ।
ಪರಿಣಯವ ಗೈದಿರುವುದೊಳ್ಳಿತು ॥ 214 ॥

॥ **ಕಂದಪದ್ಯ** ॥

ಎನೆ ಕೇಳ್ದಚ್ಚರಿಗೊಳುತಾ ।
ವನಿತೆಯು ಯೋಗಿಯ ಮಹಿಮೆಗೆ ವಿಸ್ಮಯಪಡುತಂ ॥
ಮನದಿಚ್ಛೆಯದಿವನಿಂದಲೆ ।
ತನಗೊದಗುವುದೆಂದರಿತೊರೆದಳ್ ಭಕ್ತಿಯೊಳಂ ॥ 215 ॥

॥ **ಭಾಮಿನಿ** ॥

ಹೇ ಮಹಿಮ ಕೇಳೆನ್ನ ಕೈಪಿಡಿ ।
ವಾ ಮಹಾತ್ಮನದಾರದೆಂದಿಗೆ ।
ನಾ ಮನೋಭೀಷ್ಟವನು ಪಡೆಯುವೆನೆಂಬುದರುಹೆನುತ ॥
ಕಾಮಿನೀಮಣಿ ಚರಣಕೆರಗಲು ।
ಸೋಮವದನೆಯನೆತ್ತಿ ಕೃತ್ರಿಮ ।
ದಾ ಮುನೀಂದ್ರನು ನುಡಿದನರಿತವನಂತೆ ಮಾನಿನಿಗೆ ॥ 216 ॥

॥ **ಸುರುಟಿ – ಏಕ** ॥

ಕೇಳಬಲಾಮಣಿಯೆ । ನಿನ್ನೊಳು ।
ಪೇಳುವೆ ಸದ್ಗುಣಿಯೆ ॥
ತಾಳಿರು ಕೆಲದಿನ । ವಲ್ಪಸಮಯಕನು ।
ಕೂಲತೆಯಹುದು ಮ । ರಾಳಗಮನೆ ದಿಟ ॥ 217 ॥

ಜನಪತಿಯಾತ್ಮಜನು । ಜಗಸಿಂ ।
ಹನು ಸಚಿವಾತ್ಮಜನು ॥
ಎನಿಪ ಮಹೇಂದ್ರನು ಸಹಿತೀರ್ವರು ಬಹ ।
ರೆಣಿಸದಿರವರೊಳಗೊರ್ವನು ನಿನಗಹ ॥ 218 ॥

ಎಣಿಸದಿರೆನೆ ಕೇಳಿ । ಕಾಮಿನಿ ।
ಮಣಿ ಸಂತಸತಾಳಿ ॥
ಅನುದಿನ ತಾವಿಲ್ಲಿಗೆ ಬಂದುರೆ ದ ।
ರ್ಶನವೆನಗಿತ್ತಾಶೀರ್ವದಿಸುತ್ತಿರಿ ॥ 219 ।

॥ ಭಾಮಿನಿ ॥

ಎಂದುದನು ಕೇಳ್ದಾ ಮಹೇಂದ್ರನು ।
ಮಂದಗಾಮಿನಿ ಕೇಳು ತವ ಗೃಹ ।
ಕೆಂದು ನಾ ಬರೆ ರಾಜಭವನದಿ ತಡೆಯದಂತೆನಗೆ ॥
ಇಂದು ನೀನೇನಾದರೂ ಕುರು ।
ಹಂ ಧರಿಸಲೆನಗೀಯೆನಲು ಮುದ ।
ದಿಂದ ಮುದ್ರಿಕೆಗೊಡಲು ಪಡೆದೈತಂದ ನಿಜ ಗೃಹಕೆ ॥ 220 ॥

॥ ವಾರ್ಧಕ ॥

ಮತ್ತೆ ಪೊರಟಾ ಮಹೇಂದ್ರಂ ಪುರದಿ ಕೌತುಕದ ।
ಕೃತ್ಯಮನ್ನೆಸಗುತಿರೆ ಯತಿವರ್ಯನಂ ಕಾಣ ।
ದತ್ಯಧಿಕ ಚಿಂತೆಯಂ ತಳೆದು ಮಂಜರಿಯು ಬೇಸತ್ತಾ ಶಿರೋಭಾರದಿ ॥
ಎತ್ತಲಾರದೆ ತಲೆಯ ಮಲಗಿರಲು ತಿಳಿದಾ ನ ।
ರೋತ್ತಮನು ಅರಮನೆಯ ವೈದ್ಯರಿಂದುಪಚರಿಸೆ ।
ವ್ಯರ್ಥವಾಗುತ್ತಿರಲು ತಿಳಿದಾ ಮಹೇಂದ್ರ ಪಂಡಿತವೇಷಮಂ ತಾಳುತ ॥ 221 ॥

ಅರಮನೆಯ ಬಳಿ ಸುಳಿಯಲರಿತು ಭೂಮಿಪನವನ ।
ಕರೆಸುತಂತಃಪುರಕೆ ಸುತೆಯೆಡೆಗೆ ಕಳುಹಲವ ।
ಳಿರವರಿತು ದೇವಿಯಂ ಸ್ಮರಿಸುತಂಜನ ಪೂಸೆ ಕಾಳಿಕಾಂಬಿಕೆಯ ವರದಿ ॥
ತರಳೆ ತಕ್ಷಣದಿ ಗುಣಹೊಂದಲಿದನರಿತರಸ ।
ಪರಮಸಂತೋಷದಿಂದರಮನೆಯೊಳಿರಹೇಳಿ ।
ಬರುವೆನಿನ್ನೆರಡು ಮಾಸದೊಳೆಂದು ಬೀಳ್ಕೊಂಡು ಮರಳಿದಂ ತನ್ನಮನೆಗೆ ॥ 222 ॥

॥ ಸೌರಾಷ್ಟ್ರ – ತ್ರಿವುಡೆ ॥

ಆತ್ತಲೊಂದಿನ ಯಕ್ಷರರಸನ ।
ಪುತ್ರಿ ಕರ್ಣೋಜ್ವಲೆಯು ತನ್ನಯ ।
ಪತ್ತನದಿ ಸೊಗಗಾಣದಿರೆ ಬೇ ।
ಸತ್ತು ಮನದಿ ॥ 223 ॥

ಗೆಳತಿಯರ ಕೂಡುತ್ತ ಬೇಸರ ।
ಕಳೆವುಪಾಯವ ಯೋಚಿಸುತ ಭೂ ।
ತಳದ ಸಂಚರಣೆಯಲಿ ಸಂತಸ ।
ಗೊಳಲೆನುತ್ತ ॥ 224 ॥

ಭರದಲಿಳಿದಾಕಾಶಮಾರ್ಗದಿ ।
ಧರಣಿಯನು ಸೇರುತ್ತ ಜಲಫಲ ।
ಭರಿತವಹ ಸುಸ್ಥಳಗಳಲಿ ಸಂ ।
ಚರಿಸಿ ಮತ್ತೆ ॥ 225 ॥

ಹರುಷದಿಂ ಬರಬರುತವಂತೀ ।
ಪುರಸಮೀಪದ ವನದಿ ಸತಿಯರು ।
ಸರಸಿಯೊಂದರೊಳಿಳಿದು ಕ್ರೀಡಿಸು ।
ತಿರುತಿರಲ್ಕೆ ॥ 226 ॥

॥ ಭಾಮಿನಿ ॥

ಆ ಸಮಯ ಜಗಸಿಂಹ ಮನಸಿನ ।
ಬೇಸರನು ಕಳೆಯಲ್ಕೆ ಬಂದವ ।
ನೀ ಸುದತಿಯರ ನಡುವೆ ಕರ್ಣೋಜ್ವಲೆಯನೀಕ್ಷಿಸುತ ॥
ಈಸು ದಿನ ಕಂಡಿರದ ರೂಪಿನ ।
ರಾಶಿಯನು ನೋಡುವಡೆ ನಾನಿ ।
ನ್ನೇಸು ಧನ್ಯನೊ ತಿಳಿಯೆನೆಂದಚ್ಚರಿಗೊಳುತಲೆಂದ ॥ 227 ॥

॥ ಯಮುನಾಕಲ್ಯಾಣಿ – ಅಷ್ಟ ॥

(ಆಮಮಾ ಏನ್ ಬೆಡಗುಗಾತಿಯೊ ಕನ್ನೆ .... ಎಂಬಂತೆ)

ಕಾಂತಾಶಿರೋಮಣಿ ಯಾರಿವಳು । ನೋಡ ।
ಲೆಂಥ ಸೋಜಿಗ ರತಿಯಂತಿಹಳು ॥ ಪ ॥

ಸರಸಿಜಾಸನನೀ ಸುಂದರಿಯನ್ನು । ಮಾಡೆ ।
ವರುಷವೆಷ್ಟಾಂತನೊ ಶ್ರಮವನ್ನು ॥
ಅರಿಯೆನೀ ಸುಮಶರನರಗಿಣಿಯ । ಕಂಡು ।
ಚರಿಸದಕ್ಷಿಯು ಸೋತು ಮನದಣಿಯ ॥ 228 ॥

ಭೃಂಗಕುಂತಳೆ ಸರಸಿಜಗಂಧಿ । ಚಲ್ವ ।
ತುಂಗಪಯೋಧರೆಯನು ಪೊಂದಿ ॥
ಸಂಗಸುಖವ ಪಡೆಯದ ಮೇಲೆ । ಬಾಳು ।
ವಂಗವಿನ್ನುಂಟೆ ಸುಂದರ ಮಾರೆ ॥ 229 ॥

ಎನುತವನಿಪಸುತ ಮುಂಕೊಂಡು । ಬರ ।
ಲನಿತರೊಳವನ ಬರವ ಕಂಡು ॥
ವನಿತೆಯರೆಲ್ಲ ಜಲವ ಬಿಟ್ಟು । ನಾಚಿ ।
ತವತವಗೆಲ್ಲ ವಸ್ತ್ರವನುಟ್ಟು ॥ 230 ॥

॥ ಭಾಮಿನಿ ॥

ನಾರಿಯರು ಕಂಡಿವನ ಲಜ್ಜಾ ।
ಭಾರದಿಂದಲಿ ದೂರದೂರಕೆ ।
ಸೇರಲಾ ಕರ್ಣೋಜ್ವಲೆಯು ತಾನೊರ್ವಳಿದಿರಾಗಿ ॥
ವೀರನಂಗವ ನೋಡಿ ರೂಪಕೆ ।
ಸೂರೆಹೋದರು ತನ್ನ ಬಯಕೆಯ ।
ತೋರಿಸದೆ ನಿಜವರಿಯೆ ತವಕದಿ ಕೇಳ್ದಳಾ ತರುಣಿ ॥ 231 ॥

॥ ಸಾಂಗತ್ಯ – ರೂಪಕ ॥

ಯಾರಯ್ಯಾ ಬಂದು ನೀ । ನೀರೀತಿ ನಾವೆಲ್ಲ ।
ನಾರಿಯರೊಂದಾಗಿ ಜಲದಿ ॥

ಸೇರಿ ಕ್ರೀಡಿಸುತಿರೆ ನೀತಿದೊರೆದು ನಿಂದೆ ।
ಈ ರೀತಿ ಬರೆ ಕಾರ್ಯವೇನು ॥ 232 ॥

॥ **ಸುರುಟಿ – ಏಕ** ॥

ಚಂದಿರಮುಖಿ ಕೇಳೆ । ಪುಷ್ಪಸು ।
ಗಂಧಿ ಸುಗುಣಶೀಲೆ ॥
ಬಂದಿರೆ ವನಸಂಚರಣೆಗೆ ನಿನ್ನುವ ।
ನಿಂದೀಕ್ಷಿಸುತ್ತೈತಂದಿಹೆನಿಲ್ಲಿಗೆ ॥ 233 ॥

॥ **ಸಾಂಗತ್ಯ – ರೂಪಕ** ॥

ಯಾರೆಲ್ಲಿಗೈತಂದೆ ಪೋಕರಂದದಿ ಸದ್ವಿ ।
ವೇಕವ ತೊರೆದು ನಮ್ಮೆಡೆಗೆ ॥
ಸಾಕಿನ್ನು ನಡೆ ಮುಂದಕೆನಲು ನಿರ್ಭೀತಿಯೊ ।
ಳಾಕೆಗೆಂದನು ಮನದಿರವ ॥ 234 ॥

॥ **ಸುರುಟಿ – ಏಕ** ॥

ನಾರೀಕುಲರತ್ನ । ನಿನ್ನನು ।
ಸೇರಿ ಸುಖಿಸುವೆತ್ನ ॥
ತೋರದೆ ಮನದೊಳು ಸೂರೆಯಾಗಿ ನಾ ।
ಸೇರಿದೆ ನೀ ದಯ । ದೋರಾ ಸುಂದರಿ ॥ 235 ॥

॥ **ಸಾಂಗತ್ಯ – ರೂಪಕ** ॥

ತಿಳಿದುದಿಲ್ಲವೆ ಯಕ್ಷ । ನಿಳಯಕಧೀಶ ಪಿಂ ।
ಗಳನೆಂಬರವನಾತ್ಮಸುತೆಯು ॥
ತಳದೆ ಕರ್ಣೋಜ್ವಲೆಯೆಂಬಭಿಧಾನವ ।
ತಿಳುಹು ನೀನಾರೆಂಬ ನೆಲೆಯು ॥ 236 ॥

ಖ್ಯಾತ ಚಂಪಕಪುರ । ನಾಥನಾಗಿಹನೆನ್ನ ।
ತಾತನು ಜಗಸಿಂಹನೆಂದು ॥
ಖ್ಯಾತವಾಗಿಹುದಭಿಧಾನ ಕೇಳ್ ನಿನಗೀಗ ।
ಸೋತುಬಂದಿಹೆನೆನ್ನ ಸುಖಿಸು ॥ 237 ॥

ಎನಲೆಂದಳೆನ್ನಯ । ಮನೆಗೆ ಬಂದಿರೆ ನಿನ್ನ ।
ವನಿತೆಯಾಗುವೆನು ನಿಶ್ಚಯವು ॥
ಘನತೆಯ ತೊರೆದು ಮೇ । ದಿನಿಯೊಳಿರ್ಪುದಕೆನ್ನ ।
ಮನವೊಡಂಬಡದಿದು ದಿಟವು ॥ 238 ॥

॥ **ಭಾಮಿನಿ** ॥

ಕಾಂತೆ ಕೇಳಿಳೆಯೊಳಗೆ ಬೇಸರ ।
ವಾಂತು ಚರಿಪುದನುಳಿದು ಹರುಷವ ।
ನಾಂತು ನಿನ್ನಯ ಜೊತೆಯೊಳಗೆ ಬಹೆನೆನಲದನು ಕೇಳಿ ॥
ಸಂತಸದಿ ಕರ್ಣೋಜ್ವಲೆಯು ಭೂ ।
ಕಾಂತಸುತ ಜಗಸಿಂಹ ಸಹಿತಲೆ ।
ತಾಂ ತಳುವದೈತಂದು ಪಿತಗೊಂದಿಸುತಲರುಹಿದಳು ॥ 239 ॥

॥ **ಜಂಜೂಟಿ – ಅಷ್ಟ** ॥

(ಮಂತ್ರಿಗಳಿರ ಕೇಳಿರೀಗ ...... ಎಂಬಂತೆ)

ತಾತ ಲಾಲಿಸು ಬಿನ್ನಪವನು । ಪೊಸ ।
ರೀತಿಯಾದುದನುಸುರುವೆನು ॥
ಪ್ರೀತಿಯ ಸಖಿಯರ ಕೂಡುತ್ತಲೀ ದಿನ ।
ಭೂತಳದಿ ಚರಿಸುತ್ತಲಿರುತಿರ ।
ಲೀತನನು ಸಂಧಿಸಿದೆ ವನದಲಿ ॥ 240 ॥

ಇಳೆಯೊಳಾ ಚಂಪಕಾವತಿಯ । ದೊರೆ ।
ಬಲದೇವನರಸಿ ಮಂಗಳೆಯ ॥
ಚೆಲುವ ಪುತ್ರನು ವೀರ ಜಗಸಿಂಹನೆಂದೆನು ।
ತಲಿ ಮಹೋನ್ನತ ಕೀರ್ತಿ ಗಳಿಸಿದ ।
ಜಲಜನಾಭನ ಸುತನ ಪೋಲುವ ॥ 241 ॥

ಸುಂದರಾಂಗನನಲ್ಲಿ ನೋಡಿ । ಮೋಹ ।
ದಿಂದಾತನೊಳು ಮಾತನಾಡಿ ॥
ಕುಂದೇನ ಕಾಣದೆ ವರನೀತನೆನಗಾಗ ।

ಲೆಂದು ನಂಬುಗೆಯಿತ್ತು ನಾ ಕರೆ ।
ತಂದೆ ಸದ್ಭಾವನೆಯೊಳೀತನ ॥ 242 ॥

॥ **ವಾರ್ಧಕ** ॥

ಚಿತ್ತಶುದ್ಧಿಯೊಳು ಸತಿಪತಿಯರಾದೆವುಯೆಂದೆ ।
ನುತ್ತ ಭಾವಿಸಿ ಬಂದಿಹೆವು ಸಂತಸದಲಿ ನಮ ।
ಗುತ್ತರೋತ್ತರವಾಗಲೆನುತಲಾಶೀರ್ವಾದ ಗೈಯ್ಯಬೇಕೆನುತುಭಯರು ॥
ಮಸ್ತಕವನಾತನಡಿಯೊಳಗಿರಿಸೆ ಮೊಗದಿರುಹಿ ।
ಮತ್ತೆ ಪೂರ್ವಾಚಾರಮಂ ಮೀರೆ ಶಂಕಿಸುತ ।
ವೃತ್ರವೈರಿಯ ಕೇಳಿ ನಿರ್ಧರಿಪೆನೆನುತಿಂದ್ರನೆಡೆಗೈದಿ ಮಣಿದೆಂದನು ॥ 243 ॥

॥ **ಸುರುಟಿ – ಏಕ** ॥

ಲಾಲಿಪುದಮರೇಶ । ಮತ್ಕುಲ ।
ಬಾಳುವೆಯೊಳು ದೋಷ ॥
ತಾಳುವ ಕಾಲವು ಮೇಲೊದಗಿದೆ ಮಮ ।
ಬಾಲೆಯು ಗೈದುದ । ಪೇಳುವೊಡಂಜುವೆ ॥ 244 ॥

ಎನ್ನಣುಗೆಯು ಜೊತೆಗೆ । ಸಖಿಯರ ।
ಮುನ್ನೊದಗಿಸಿ ಧರೆಗೆ ॥
ನಿನ್ನೆಯ ದಿನ ಜಲಕೇಳಿಗೆ ಪೋಗಿರ ।
ಲನ್ನೆಗ ನರನೋರುವನಲ್ಲೈತರೆ ॥ 245 ॥

ಆತನ ರೂಪವನೆ । ನೋಡುತ ।
ಸೋತವಳಾತನನೆ ॥
ಪ್ರೀತನೆನುತ ಕರೆತರುತ ವಿವಾಹಕೆ ।
ಆತುರಗೊಳಿಪಳು । ನೀತಿಯನರಿಯದೆ ॥ 246 ॥

ಯಕ್ಷಕುಲದ ಸತಿಗೆ । ನರರಾ ।
ಪೇಕ್ಷೆಯಹುದೆ ಜೊತೆಗೆ ॥
ಈಕ್ಷಿಸೆ ನಿಂದಿತ ಪಿಂದಣ ನಡತೆಗಿ ।
ದಾಕ್ಷೇಪವು ನಿಟಿಲಾಕ್ಷನು ಮುನಿಯನೆ ॥ 247 ॥

ನಿನಗರುಹುವರೆನುತ । ಬಂದಿಹೆ ।
ಮನುಜನ ಜೊತೆ ಬಿಡುತ ॥
ತನುಜೆಯು ಕುಲಕಪಕೀರ್ತಿಯ ತರದೊಲು ।
ವನಿತೆಗೆ ನೀತಿಯನೊರೆಯೆಂದೆರಗಲು ॥ 248 ॥

॥ ಕೇದಾರಗೌಳ – ಝಂಪೆ ॥

ಕೇಳುತಮರಾಧೀಶನು । ಕೆಂಗಿಡಿಯ ।
ತಾಳಿ ಗರ್ಜಿಸುತೆಂದನು ॥
ಹಾಳಾದುದೆಮ್ಮ ಸ್ವರ್ಗ । ದುರ್ನಡತೆ ।
ಕೇಳಿದಡೆ ಮುನಿವ ಭರ್ಗ ॥ 249 ॥

ಸುರಕನ್ನಿಕೆಯರು ಧರೆಯ । ಮನುಜರಿಗೆ ।
ಮರುಳಾದರೆಂಬಪರಿಯ ॥
ಅರುಹೆ ನಾಚಿಕೆಯಪ್ಪುದು । ಇದರಿಂದ ।
ಸುರಕುಲಕೆ ಹಳು ಬಪ್ಪುದು ॥ 250 ॥

ಕರೆಸು ಪಿಂಗಳನುಭಯರ । ಎನಲು ಹಿಡಿ ।
ತರಿಸೆ ಸುರಪತಿಯನಿಬರ ॥
ಜರೆದು ಬಹುಪರಿ ಭಂಗಿಸಿ । ಯಕ್ಷಸುತೆ ।
ಗೊರೆದನೀ ಪರಿ ಗರ್ಜಿಸಿ ॥ 251 ॥

॥ ಮಾರವಿ – ಏಕ ॥

ಏನಿದು ಕರ್ಣೋರ್ಜ್ವಲೆ ನೀ ಯಕ್ಷರ ।
ಮಾನವ ಕಡೆಗಣಿಸಿ ॥
ಹೀನತ್ವವ ಹೊಂದದಿರಿನ್ನಾದರು ।
ಮಾನವನನು ತ್ಯಜಿಸಿ ॥ 252 ॥

ಯಕ್ಷರೊಳಗೆ ನಿನಗೊಪ್ಪುವ ಪುರುಷನ ।
ರಕ್ಷಣೆಯನು ಪಡೆದು ॥
ಸುಕ್ಷೇಮದೊಳಿಹುದೊಳಿತೆಂದನಲವ ।
ಳಾಕ್ಷಣ ಕೈಮುಗಿದು ॥ 253 ॥

ಅರುಹಿದಳೆಲೆ ಸುರವರ ಕೇಳ್ ತರುಣಿಗೆ ।
ಪರಿಣಯವಹುದೊಂದೆ ॥
ಭರವಸೆಯಿಂ ಕರೆತಂದಿಹೆನಾತನ ।
ಕರಪಿಡಿಯುವೆನೆಂದೆ ॥ 254 ॥

ನಂಬಿಸಿ ಮೋಹದಿ ಕರೆತಂದವನನು ।
ಬೆಂಬಿಡುವುದು ಸರಿಯೆ ॥
ಹಂಬಲಿಸೆನು ಪರರನ್ನೀತನ ಹೊರ ।
ತೆಂಬುದಕಿಂತೆಂದ ॥ 255 ॥

ನರರತಿ ಮೂರ್ಖರು ಅಲ್ಪಾಯುಷಿಗಳು ।
ತರವಲ್ಲವು ನಿನಗೆ ॥
ವರಿಸಲು ಬಿಡೆನೆನ್ನಲು ಜಗಸಿಂಹನು ।
ಅರುಹಿದ ಶಚಿವರಗೆ ॥ 256 ॥

॥ **ವಾರ್ಧಕ** ॥

ಸುರಪನೀನಡಗಿರಲ್ ಸ್ವರ್ಗಾಧಿಪತ್ಯಮಂ ।
ಮೆರೆಸಿರ್ದ ನಹುಷ ನರನೆಂಬುದಂ ಮರೆತೆಯೈ ।
ತರುಣಿಯೂರ್ವಶಿಗೆ ಪತಿಯಾದವಂ ಮಾನವನದಲ್ಲಿ ಮೇಣ್ ನೀನೆಸಗಿದ ॥
ಪರಿಯನರಿಯೆನೆ ಗೌತಮನ ಸತಿಯ ಮೋಸದಿಂ ।
ನೆರೆದು ಸಾವಿರಯೋನಿಯೆನಿಸಿರ್ಪೆ ಮಾನವರ ।
ಬರಿದೆ ನಿಂದಿಸದೆ ಸಮ್ಮತಿಯೆಮಗೆ ನೀಡೆನಲ್
ಮುಳಿದೆಂದನಮರೇಂದ್ರನು ॥ 257 ॥

॥ **ಭೈರವಿ – ಏಕ** ॥

ಫಡ ನರಕುರಿ ನೀನಿಂತು । ಸುರ ।
ರೊಡೆಯನ ನಿಂದಿಸೆ ಬಂತು ॥
ಕಡೆಗಾಲವು ನಿನಗೆಂದು । ತಿಳಿ ।
ಕೊಡುವೆನು ಶಾಪವನಿಂದು ॥ 258 ॥

ಶಿಲೆಯಾಗುತಲೀ ಸ್ಥಳದಿ । ನೀ ।
ನಿಲುವುದನಿಶ್ಚಿತದವಧಿ ॥
ಬಲುಮೆಯೊಳ್ ನಿನ್ನನು ತಂದ । ಪಿಂ ।
ಗಳನಾತ್ಮಜೆ ಮದದಿಂದ ॥ 259 ॥

ಸೊಕ್ಕಿನೊಳನುಚಿತ ಸುಖಕೆ । ಮನ ।
ವಿಕ್ಕುತ ಕರೆತಂದುದಕೆ ॥
ಕುಕ್ಕರನಾಗುತ ಜಗದಿ । ದಶ ।
ದಿಕ್ಕನು ಚರಿಸಲಿ ಭರದಿ ॥ 260 ॥

॥ **ಕಂದಪದ್ಯ** ॥

ಎನ್ನುತ ಶಾಪವನೀಯಲ್ ।
ಕನ್ನೆಗೆ ಶಿಲೆಯಾಗುತ ನಿಲಲಾ ಜಗಸಿಂಹಂ ॥
ಕರ್ಣೋರ್ಜ್ವಲೆ ತಾ ಕುಕ್ಕುರ ।
ವೆಣ್ಣಾಗುತ ಪೊರಟಶ್ರುವ ಸುರಿಸುತಲೈದಲ್ ॥ 261 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಇತ್ತ ಪೊರಟು ಮಹೇಂದ್ರ ತನ್ನಯ ।
ಮಿತ್ರನನು ನೋಡುವೆನು ತಾನೆಂ ।
ಬರ್ತಿಯಲಿ ಬರುತಿರಲು ಚೋರರ ।
ಮೊತ್ತಗೂಡಿ ॥ 262 ॥

ಅದರೊಡೆಯನೆನಿಪಾ ಮಹಾಬಲ ।
ಮುದದಿ ದಾರಿಗರನ್ನು ಪೀಡಿಸಿ ।
ಕದಿಯುವಾಪೇಕ್ಷೆಯೊಳು ನಿಂದಿರೆ ।
ಚದುರನಿವನು ॥ 263 ॥

ಬರಲು ಕಂಡಡಗಟ್ಟಿ ನಿಲ್ಲೆಲೊ ।
ದುರುಳನೆಲ್ಲಿಗೆ ಚರಿಪೆ ನಿಲ್ಲದೆ ।
ತೆರಳಿದರೆ ಶಿರವರಿವೆನೆನ್ನುತ ।
ಜರೆಯುತಿರಲು ॥ 264 ॥

ಚಂಡಭುಜಬಲನಾ ಮಹೇಂದ್ರನು ।
ಪುಂಡರನು ಕಂಡಾರು ನಿಮ್ಮಯ ।
ಭಂಡತನವನು ಬಿಟ್ಟು ತೆರಳಿರಿ ।
ಮಂಡೆಗೆಡದೆ ॥ 265 ॥

ಬಟ್ಟೆಯೊಳು ಬರುವವರ ಸುಲಿಯುವ ।
ದುಷ್ಟನಡತೆಯ ತ್ಯಜಿಸದಿದ್ದರೆ ।
ಅಟ್ಟುವೆನು ಕ್ಷಿಪ್ರದಲಿ ಕಾಲನ ।
ಪಟ್ಟಣಕ್ಕೆ ॥ 266 ॥

ಎನಲು ಚೋರಾಧಿಪನು ಮುಂದಕೆ ।
ಕನಲುತಾಯುಧ ಪಿಡಿದು ಬಂದಾ ।
ತನ ತಡೆವುತಿಂತೆಂದ ತಾನತಿ ।
ಕಿನಿಸಿನಿಂದ ॥ 267 ॥

॥ **ಭೈರವಿ – ಏಕ** ॥

ಫಡ ನಿಲ್ಲೆಲೊ ದಾರಿಗನೆ । ಮುಂ ।
ದಡಿಯಿಡೆ ಕಡಿವೆ ಶಿರವನೆ ॥
ಹುಡುಗಾಟವ ನಿಲಿಸುವೆನು । ಎಂ ।
ದಡಗಟ್ಟುತ ಬರಲಿವನು ॥ 268 ॥

ಎಲೆ ತಸ್ಕರ ಪರಧನದ । ಹಂ ।
ಬಲದೊಳು ಪಥಿಕರನಿರಿವ ॥
ಬಲುಹಿನ ಮದವೆನ್ನೊಡನೆ । ನಡೆ ।
ಸಲು ಬಿಡೆ ನಡೆ ಪಡೆಯೊಡನೆ ॥ 269 ॥

ಎನಲಾ ಖಳ ಮುಂಬರಿದು । ಧುರ ।
ಕನುವಾಗುತ ಮೇಲ್ವರಿದು ॥
ರಣದೊಳು ಮಂತ್ರಿಜನವನ । ಕೆಡೆ ।
ದಣಕಿಸುತಿರೆ ಕಂಡಿವನ ॥ 270 ॥

॥ **ಭಾಮಿನಿ** ॥

ಅರಿಯದೆಸಗಿದ ತಪ್ಪ ಮನ್ನಿಸು ।
ಕರುಣಿಯೆನುತಡಿಗೆರಗಲೆತ್ತುತ ।
ದುರುಳತನವನು ಬಿಟ್ಟು ಸುಖದೊಳಗಿಹುದು ನಾ ಬಯಸಿ ॥
ಕರೆದ ವೇಳೆಗೆ ಬಂದು ನೀ ಸಹ ।
ಕರಿಪುದೆಂದವನತ್ತ ಕಳುಹುತ ।
ದೊರೆಕುಮಾರನ ನೋಡುವಾತುರದಿಂದ ಬರುತಿರಲು ॥ 271 ॥

॥ **ಕಂದಪದ್ಯ** ॥

ಬಂದಾ ವಸತಿಯೊಳ್ ರಾಜನ ।
ಕಂದನನುಂ ಕಾಣದೆ ನೆರೆಯವರಂ ಬೆಸಗೊಳ ।
ಲೊಂದಿನ ವನದೊಳು ಕ್ರೀಡಿಪ ।
ಸುಂದರಿಯರ ಜೊತೆಗೈದಿದನೆನೆ ಕೇಳುತ್ತಂ ॥ 272 ॥

॥ **ನೀಲಾಂಬರಿ – ರೂಪಕ** ॥

ಹರಹರ ಹಾ ಸಖಿಗೀ ಪರಿ । ದುರುಳಮತಿಯು ಸಂಜನಿಸಿತೆ ।
ಒರೆದಿಹ ನೀತಿಯು ಶಿಲೆಯೊಳು । ಸುರಿದಿಹ ನೀರಾಯ್ತೇ ॥
ಪರಮಾಪ್ತಗೆ ಪಿತನಿಂದಲಿ । ಮರಣವ ತಪ್ಪಿಸಿ ಕಾಲದಿ ।
ಪೊರೆದಿವನಸುವನು ಜೊತೆಯೊಳು । ಕರೆತಂದೆನು ಬಿಡದೆ ॥ 273 ॥

ಅಲ್ಲಿಯು ಮಲಗಿರೆ ಚಿತ್ರವ । ನಲ್ಲೀಕ್ಷಿಸಿ ಭ್ರಮೆಗೊಂಡಿರ ।
ಲೆಲ್ಲವ ನಾಮಾಳ್ವೆನು ಬರಿ । ತಲ್ಲಣಿಸದಿರೆನುತ ॥
ಮೆಲ್ಲನೆ ಬಿಟ್ಟವಗೋಸುಗ । ವಿಲ್ಲಿಯ ಪರಿಮಿತ ಸಾಧಿಸು ।
ತಲ್ಲಿರೆ ಮೊದಲೊಮ್ಮೆಗೆ ಮುದ । ದಲ್ಲಿಯೆ ಮೈಮರೆತು ॥ 274 ॥

ತನುವಿಕ್ರಯಿಸುವ ಸುದತಿಗೆ । ಮನಸೋಲುತ ಸಕಲವನವ ।
ಳನುಕೂಲಕೆ ತೆರುತಂತ್ಯದಿ । ಕೊನೆಗಾಣದೆ ಬಳಲಿ ॥
ಘನತೆಯ ಬಿಟ್ಟನ್ಯರೊಳೀ । ತನುವೊಪ್ಪಿಸಿ ಕೂಲಿಯೊಳಿರ ।
ಲೆನಿತು ಚಮತ್ಕಾರದೊಳೀ । ತನ ಬಿಡಿಸುತ ತಂದೆ ॥ 275 ॥

ಇನ್ನಾದರು ಕಾಮುಕತನ । ವನ್ನೆಸಗದೆ ಸುಖದಲ್ಲಿರು ।
ಕನ್ನೆಯ ತಂದೊಪ್ಪಿಪೆನೆನು । ತನ್ನೀತಿಯನೊರೆದು ॥
ಚೆನ್ನಿಗನನು ಬಿಟ್ಟೈದಲು । ಇನ್ನೀತನು ಕಲಿತುದ ಬಿಡ ।
ನೆನ್ನಲು ಪೇಳುವುದಾರಿಗೆ । ಇನ್ನೆಲ್ಲಿಹನರಿಯೆ ॥ 276 ॥

ಎತ್ತಲು ಪೋದನೊ ಬಂದಿಹ । ಚಿತ್ತಜನರಗಿಣಿ ಯಾರೊ ನಿ ।
ಮಿತ್ತವನರಿಯೆನು ಪುಡುಕುವ । ದೆತ್ತಲು ತಾನೆನುತ ॥
ಚಿತ್ತದಿ ಮರುಗುತ ತನ್ನಯ । ಮಿತ್ರನ ಸುಳಿವರಿಯದೆ ಪೊರ ।
ಡುತ್ತಲಿ ಘೋರಾರಣ್ಯದಿ । ಸುತ್ತುತಲೈದಿದನು ॥ 277 ।

॥ **ಭಾಮಿನಿ** ॥

ಇನಿತು ಮಿತ್ರನ ಸುಳಿವರಿವ ಯೋ ।
ಚನೆಯೊಳಾ ಸಚಿವಾತ್ಮಜನು ಕಾ ।
ನನವ ಚರಿಸುತ ಬರುತಿರಲ್ಕಾ ವಿಪಿನಮಧ್ಯದಲಿ ॥
ಮನುಜವಾಸನೆಯರಿತು ಕಂಡಾ ।
ತನ ಮಹಾಜ್ವಾಲೆಯುಯೆನಿಪ್ಪಾ ।
ದನುಜೆ ಪಿಡಿವಾತುರದಿ ರೂಪವ ಮರೆಸಿ ಮಾಯಕದಿ ॥ 278 ॥

॥ **ಕಂದಪದ್ಯ** ॥

ತಳೆಯುತೆ ವೃದ್ಧಾಕಾರವ ।
ಖಳೆಯಳಲುತಲೊಂದೆಸೆ ಕುಳಿತಿರಲದ ಕಂಡಾ ॥
ಗಳೆ ವೀರಮಹೇಂದ್ರನು ಪರಿ ।
ಗಳನರಿಯದೆ ಬೆಸಗೊಳೆ ಕಪಟದಿ ತಾನೆಂದಳ್ ॥ 279 ॥

॥ **ಸಾಂಗತ್ಯ – ರೂಪಕ** ॥

ಯಾರಯ್ಯ ವೀರನೀ । ನೀ ರೀತಿಯೆನ್ನ ವಿ ।
ಚಾರಿಪೆ ನಾ ಭಾಗ್ಯಹೀನೆ ॥
ದೂರಲಾರಿಗೆ ಫಲ । ದೋರದಾದರು ಕೇಳ್ದ ।
ಕಾರಣ ಪೇಳ್ವೆ ನಿನ್ನೊಡನೆ ॥ 280 ॥

ಸುತನೋರ್ವನನು ಚಾರು । ದಿತಿಯೆಂಬ ಸೊಸೆಯನು ।
ಜೊತೆಗೂಡಿ ನಾನಾ ಗುಹೆಯೊಳು ॥
ಸತತದಿ ತಪವಿರ । ಲತಿಪಾಪಿ ದುರುಳ ದು ।
ರ್ಮತಿಯೊರ್ವ ರಕ್ಕಸ ಬಂದು ॥ 281 ॥

ಅವರಿರ್ವರನು ಕೊಂದು । ಜವನೆಡೆಗಟ್ಟುತೆ ।
ನ್ನುವನುಳುಹುತಲಿ ಸಾರಿದನು ॥
ಶವವಿದೆ ಗುಹೆಯೊಳ್ ಸಂಸ್ಕರಿಪರಿಲ್ಲದೆ ಸಾವು ।
ಸವನಿಸದೆನಗೇಕೆ ಶಿವನೆ ॥ 282 ॥

॥ **ವಾರ್ಧಕ** ॥

ದುರುಳೆಯೀ ತೆರದಿ ಕಪಟದಿ ಶೋಕಗೈಯ್ಯುತ್ತ ।
ಹೊರಹೊರಳಿ ಧರೆಯೊಳುರುಳುತ್ತಿಹುದ ಕಾಣುತಲೆ ।
ಮರುಗಿ ನಿಜವೆಂದೆಣಿಸಿ ಪೇಳ್ದನವಳೊಳ್ ಧೈರ್ಯವಿರು ತೋರಿಸಾ ಶವಗಳ ॥
ಪರಿಕಿಸುವೆ ತಾನೆನಲು ದುರುಳೆ ಕರೆತಂದು ತಾ ।
ನಿರುವ ಗುಹೆಯಂ ಪೊಗಿಸಿ ಕೆಲದೂರ ಜೊತೆಗೆ ಬರು ।
ಬರುತ ಬಳಿಕಡಗೆ [ಕಂಡಾ] ಮಹೇಂದ್ರಂ ಮೋಸವರಿತಚ್ಚರಿಯಗೊಳ್ಳುತ ॥283॥

॥ **ಕೇದಾರಗೌಳ – ಅಷ್ಟ** ॥

ಹರಹರಾ ತಾ ಮೋಸವರಿಯದಾದೆನು ದುಷ್ಟ ।
ತರುಣಿಯ ಬಲೆಗೆ ಬಿದ್ದು ॥
ಮರುಕಗೊಳ್ಳುವ ಪರಿ ದೊರಕಿಯಾದರು ಧೈರ್ಯ ।
ದೊರೆಯದೀಕ್ಷಿಪೆ ಮುಂದಕೆ ॥ 284 ॥

ಎನುತ ಯೋಚಿಸಿ ಮುಂದಾತನು ಗಮಿಸುತ ಕಂಡ ।
ಘನತರಾಶ್ಚರ್ಯಗಳ ॥
ಕಣುಮನ ಕೋರೈಸುವಂತಿಹ ಸೌಧಗ ।
ಳನು ಗುಹೆಯೊಳು ಕಾಣುತ್ತ ॥ 285 ॥

ತೆರಳುತಿರಲು ಮುಂದೆ ತರುಣಿ ರೋದಿಪ ಸ್ವರ ।
ವರಿತು ನಿರೀಕ್ಷೆಯೊಳು ॥

ಹರಿಣಾಕ್ಷಿಯೆಡೆಗೈದಿ ಪರಿಪರಿಯೊಳು ಧೈರ್ಯ ।
ವೊರೆದು ಮಾತಾಡಿಸಿದ ॥ 286 ॥

॥ **ಮಧುಮಾಧವಿ – ತ್ರಿವುಡೆ** ॥

ಯಾರು ನೀನೆಲೆ ತರುಣಿ ಮಂದಿರ ।
ವಾರದಿದು ಕುಳಿತೋರ್ವಳೇ ಕ ।
ಣ್ಣೀರಗರೆವೆಯಿದೇಕೆ ವಿಷಯದ ।
ಸಾರವೆನ್ನೊಡನರುಹಿಸು ॥ 287 ॥

ಎನಲು ಮೊಗವೆತ್ತುತಲಿ ಕಂಡಾ ।
ತನನು ಕೇಳ್ದಳದೇಕೆ ಬಂದಿಹೆ ।
ದನುಜೆ ಮಾಯಕವರಿಯದ್ಯೆದೆಯ ।
ತನು ಮರೆಸಿ ನಡೆ ಬೇಗನೆ ॥ 288 ॥

ದುರುಳೆ ದಾನವಿ ಮೋಸದಿಂದೀ ।
ತೆರದಿ ನಿನ್ನಂದದಲನೇಕರ ।
ಕರೆತರುತಲೀ ಗುಹೆಗೆ ವಂಚಿಸಿ ।
ತೆರಳಿ ಕರೆತಹಳೋರ್ವನ ॥ 289 ॥

ಘೋರರಕ್ಕಸನವನು ನಿತ್ಯಾ ।
ಹಾರಕೋಸುಗ ತಂದ ಮನುಜರ ।
ಹೀರಿ ರಕುತವ ಹಸಿವ ಹಿಂಗಿಸಿ ।
ಸಾರುವನು ಪ್ರತಿನಿತ್ಯದಿ ॥ 290 ॥

ಸಾಲುಸಾಲಿನೊಳಿಲ್ಲಿ ಬಿದ್ದಿಹ ।
ಮೂಳೆಗಳನೀ ನೀಕ್ಷಿಸೆನುತ ಮ ।
ರಾಳಗಮನೆಯು ತೋರಲಂಜದೆ ।
ಪೇಳು ನೀನಾರೆಂದನು ॥ 291 ॥

॥ **ಭಾಮಿನಿ** ॥

ವೀರ ಕೇಳ್ ನಿನ್ನಂತೆಯೆನ್ನನು ।
ಘೋರ ದನುಜೆಯು ತಂದು ಗುಹೆಯೊಳು ।

ಸೇರಿಸಿಹಳಾ ದುರುಳ ನಿತ್ಯದಿ ಬಂದು ಪೀಡಿಪನು ॥
ಸೇರದಿರೆ ನಾನವಗೆ ದುರ್ಮತಿ ।
ಭಾರಿ ಹೊಡೆಯುತ ಗೋಳುಗುಡಿಸುತ ।
ಸಾರುವನು ದಿನಕೊಮ್ಮೆ ಬಹನೀನ್ನೈದು ಬೇಗದಲಿ ॥ 292 ॥

॥ **ಕಂದಪದ್ಯ** ॥

ಎಂದೆನೆ ಕೇಳ್ದು ಮಹೇಂದ್ರನು
ಚಂದಿರಮುಖಿ ಭಯಗೊಳದಿರು ಬಿಡಿಸುವೆ ಸೆರೆಯ ॥
ನ್ನೆಂದಾಕೆಯೊಳರುಹುತಲಿರೆ ।
ಬಂದಾ ದುರುಳನ ಸುಳಿವರಿತಡಗೆ ಮಹೇಂದ್ರಂ ॥ 293 ॥

॥ **ಮಾರವಿ – ಏಕ** ॥

ಘುಡುಘುಡಿಸುತಲಾ । ಧಡಿಗ ಖಳಾಧಮ ।
ನಡೆದೈತಹ ಭರಕೆ ॥
ಪೊಡವಿ ನಡುಗೆ ಕಂ । ಗೆಡುತಿರೆ ತರುಣಿಯು ।
ಪುಡುಕಿದ ಗುಹೆಯೊಳಗೆ ॥ 294 ॥

ಏನಿದು ಮಾತೆಯು ತಾನೀಗರುಹಿದ ।
ಮಾನವನಿರವೆಲ್ಲಿ ॥
ತಾಣದಿ ಬಿಟ್ಟಿಹೆ ಪಾರಣೆಗೆಂದಳು ।
ತಾನಡಗಿಹನೆಲ್ಲಿ ॥ 295 ॥

ಎನುತ ಪ್ರಲಂಬಾಸುರ ಹುಡುಕುತಲಾ ।
ತನ ಕಾಣದೆ ಕನಲಿ ॥
ವನಿತೆಯ ಸನಿಹಕ್ಕೈದುತ ಪೇಳಿದ ।
ಮನುಮಥಬಾಧೆಯಲಿ ॥ 296 ॥

॥ **ಸುರುಟಿ – ಏಕ** ॥

ಭೃಂಗಾಳಕಿ ಕೇಳೆ । ತವ ಮನ ।
ದಿಂಗಿತವೇನ್ ಪೇಳೆ ॥
ಅಂಗಜನುರಿಯೊಳು । ಭಂಗಿಪೆನನುದಿನ ।
ತುಂಗಪಯೋಧರೆ । ಹಿಂಗಿಸು ಬಾಧೆಯ ॥ 297 ॥

ಅನುದಿನದೊಳು ನಿನ್ನ । ಬಯಸುತ ।
ಮನಬಳಲಿದೆ ಚಿನ್ನಾ ॥
ದಣಿಸದೆ ನೀ ದಯ । ವನು ಗೈಯ್ಯುತ ಪೂ ।
ಗಣೆಯನ ಬಾಧೆಗ । ಳನು ಕಡೆಗಾಣಿಸು ॥ 298 ॥

ಬಳಲಿಸದಿರು ಬರಿದೆ । ಮೋಹದ ।
ಬಲೆಯಿಕ್ಕುತಲಿಂದೆ ॥
ಕೊಲದಿರು ಬಲು ದಿನ । ಬಳಲಿದೆ ಬಾರೆನು
ತೆಳೆಯೆ ತಿರಸ್ಕರಿ । ಸಲು ಕಿಡಿಗಾರುತ ॥ 299 ॥

॥ ವಾರ್ಧಕ ॥

ಥೀ ಮೂರ್ಖೆ ನಿನ್ನೊಳಾನಿನಿತು ದಿನ ಪರ್ಯಂತ ।
ಸಾಮದಿಂ ಬೇಡಿಕೊಳೆ ಮನವಾಗದಾಯ್ತೆ ಬಿಡೆ ।
ನೀ ಮಹಾಛಲವ ನಿಲ್ಲಿಪೆನೆನುತಲಾ ಸತಿಯ ಮುಂದಲೆಯ ಪಿಡಿದೆಳೆಯುತ ॥
ಭೂಮಿಯೊಳು ಕೆಡಹಿ ಪಿಡಿದೊತ್ತುತಿರೆ ಕಂಗೆಟ್ಟು ।
ಕಾಮಿನೀಮಣಿ ಗೋಳಿಡುತ್ತಿರಲ್ಕದನು ಕಂ ।
ಡಾ ಮಹೇಂದ್ರಂ ಬಂದು ಖಳನ ತಾನಡಗಟ್ಟುತೆಂದ ಸೈರಿಸದಾತಗೆ ॥ 300 ॥

॥ ಶಂಕರಾಭರಣ – ಮಟ್ಟೆ ॥

ಖೂಳ ದನುಜ ಕೇಳು ಬರಿದೆ । ಮೂಳತನದಲಿ ॥
ಗೋಳುಗುಡಿಪುದೇಕೆ ಸತಿಯ । ಕೀಳು ಮದದಲಿ ॥
ಮೇಲುವರಿದು ಬರಲು ನಿನ್ನ । ಕಾಲನೂರಿಗೆ ॥
ಬೀಳುಗೊಡುವೆ ತಿರುಗಿ ಬಾರದೊಂದು ಬಾರಿಗೆ ॥ 301 ॥

ಎನಲು ದನುಜ ತಿರುಗುತಿವನೊ । ಳಣಕವಾಡುತ ॥
ಕನಲುತೆಂದನಾರೊ ಧುರದೊಳೆನ್ನ ಕೆಣಕುತ ॥
ಸೆಣಸಿ ಜೀವವಿರಿಸಿಕೊಂಡ । ಜನರ ಕಾಣೆನು ॥
ಬಣಗು ನಿನ್ನ ಗಣಿಸೆನೆನುತ । ರಣಕೆ ನಿಂದನು ॥ 302 ॥

ಧುರದಿ ಹಳುಚುತಿರಲು ದುರುಳ । ಮೂರ್ಛೆಗೊಳ್ಳಲು ॥
ತಿರುಗುತೇಳುತಿವನ ಹೊಡೆಯ । ಲೀತನುರುಳಲು ॥

ಭರದಿ ಕಾಳಿಕಾಂಬೆ ಬಂದು । ಖೂಳಗಿರಿಯುತ ॥
ಧರೆಯೊಳೊರಗಿಸಲ್ ಮಹೇಂದ್ರ । ತೋಷ ತಾಳುತ ॥ 303 ॥

॥ **ಭಾಮಿನಿ** ॥

ದೇವಿಯನು ಕಂಡಾ ಮಹೇಂದ್ರನು ।
ಭಾವಭಕ್ತಿಯೊಳೆರಗೆ ಮನ್ನಿಸಿ ।
ಭಾವಕಿಯ ನೀ ವರಿಸು ಗಂಧರ್ವಾತ್ಮಭವೆಯಿವಳು ॥
ಸಾವಧಾನದಿ ಮುಂದೆ ಕಾರ್ಯಗ ।
ಳಾವದಿರೆ ನೆನೆದಾಕ್ಷಣವೆ ಬಹೆ ।
ನೀ ವಿಧದೊಳೆನುತಡಗಲಾ ಕಾಮಿನಿಯ ಮನ್ನಿಸುತ ॥ 304 ॥

॥ **ಕಂದಪದ್ಯ** ॥

ಸರ್ವೇಶ್ವರಿ ಪೇಳ್ದಂದದಿ ।
ಗೀರ್ವಾಣಾಂಗನೆಯಂ ತಾನೊಲಿಸುತ ಬಳಿಕಂ ॥
ಪೂರ್ವಾಪರವರುಹೆನೆ ಕೇ ।
ಳ್ದೂರ್ವೀಶನ ಸಚಿವಾತ್ಮಜಗೆಂದಳ್ ನಯದಿಂ ॥ 305 ॥

॥ **ಜಂಜೂಟಿ – ಅಷ್ಟ** ॥

ವರಮನೋಹರ ಲಾಲಿಸಿಂದು । ಕುಂಭೋ ।
ದರಿಯೆಂಬ ಪೆಸರೆನಗಿಂದು ॥
ಸುರಪನಾಸ್ಥಾನದೊ । ಳಿರುವ ಸಚಿವ ಭೃಂಗಾ ।
ಧರನು ಪಿತನೊಂದಿವಸ ವನ ಸಂ ।
ಚರಣೆಗಾ ಸಖಿಜನವ ಕೂಡುತ ॥ 306 ॥

ಬರುತಿರೆ ಧರೆಯ ಸಂಚರಿಸಿ । ಕಂಡಾ ।
ದುರುಳೆ ತನ್ನಯ ರೂಪ ಮರೆಸಿ ॥
ಸುರುಚಿರ ಹರಿಣವಾಗುತ ಮುಂದೆ ಸುಳಿಯೆ ನಾ ।
ನಿರದೆ ಬೆನ್ನಟ್ಟಿದೆನು ಭ್ರಮಿಸುತ ।
ಪರಿಯನರಿಯದೆ ಗವಿಗೆ ಸೇರಿದೆ ॥ 307 ॥

ಬಳಿಕಾಕೆ ಎನ್ನನೀ ದಾನವನ । ವಶ ।
ಗೊಳಿಸಲೆನ್ನಯ ರೂಪಕವನ ॥
ಹೊಲಬುದಪ್ಪುತಲೆನ್ನನನುದಿನ ಪೀಡಿಸಿ ।
ನೆಲೆಗೊಳದೆ ಬಳಿಕಿಂದು ಕಾಲನ ।
ನಿಳಯಕ್ಕೈದಿದ ಘೋರಪಾತಕಿ ॥ 308 ॥

॥ **ವಾರ್ಧಕ** ॥

ದುರುಳೆಯನುದಿನ ನಿನ್ನ ತೆರದಿ ಮೋಸವಗೊಳಿಸಿ ।
ನರರ ಪಿಡಿಪಿಡಿದು ತಂದೀ ಖಳನಿಗೊಪ್ಪಿಸುವ ।
ಳರಸ ನೋಡೀ ಕಡೆಯ ಶಿರಮುಂಡಗಳ್ ತೂಗುತಿಹುದನೀಕ್ಷಿಪುದೆನ್ನಲು ॥
ವರ ಮಹೇಂದ್ರಂ ಕಂಡು ಮಂತ್ರಜಲಮಂ ತಳಿಯೆ ।
ಮರಳಿ ಜೀವಿಸುತೀತಗೆರಗಿ ಬೀಳ್ಕೊಂಡವರು
ತೆರಳೆ ಮಾಯಕ ಹರಿಯಲಿವರು ಗಾಂಧರ್ವವಿಧಿಯಿಂ ಕೂಡಿಕೊಂಡಿರಲ್ಕೆ ॥309॥

॥ **ನಾದನಾಮಕ್ರಿಯೆ – ಅಷ್ಟ** ॥

ಇನಿತೆಲ್ಲ ಕಥನವನರಿಯುತ್ತ । ಘೋರ ।
ದನುಜೆ ಮಹಾಜ್ವಾಲೆ ಕನಲುತ್ತ ॥
ವನಿತೆ ಗುಹೆಯ ವೃತ್ತಾಂತವನೆಲ್ಲ । ಪೇಳ್ದು ।
ಮನುಜನ ಸೇರ್ದಳಾನಿದಕೆಲ್ಲ ॥ 310 ॥

ಮಾಡದುಳಿಯೆ ಮದ್ದನೆನ್ನುತ । ಖತಿ ।
ಗೂಡಿ ತಾನಲ್ಲಿಂದ ತೆರಳುತ ॥
ಖೋಡಿ ಹಿಡಂಬನೆಂಬಸುರನು । ಸಭೆ ।
ಗೂಡಿ ಕುಳ್ಳಿರೆ ಪಾತಾಳದಿ ತಾನು ॥ 311 ॥

ಬಂದಡಿಗೆರಗಿ ಗೋಳಿಡುತಲಿ । ಕಂಗ ।
ಳಿಂದಶ್ರುಧಾರೆ ಸುರಿಸುತಲಿ ॥
ವಂದಿಸೆ ದನುಜೆಯ ಕಾಣುತ್ತ । ಖಳ ।
ನೆಂದ ಗರ್ಜಿಸಿ ರೋಷವೇರುತ್ತ ॥ 312 ॥

ಏನಾದುದೆಲೆ ತಂಗಿ ಸುಮ್ಮನೆ । ಕಣ್ಣೊ ।
ಳೇನು ನೀರುಸುರೀಗ ಘಮ್ಮನೆ ॥
ಹೀನರಾರಿಂದ ಕೇಡದು ಬಂತು । ಪೇಳು ।
ನೀನೆಂದೆನಲು ಪೇಳ್ದಳೊಡನಿಂತು ॥ 313 ॥

॥ **ಕಾಂಭೋದಿ – ಝಂಪೆ** ॥

ಲಾಲಿಸಗ್ರಜಬಂದ । ಗೋಳನೆಂತೊರೆವೆ ಗುಣ ।
ಶೀಲೆ ಸುಂದರಿಯೊರ್ವ ಸತಿಯ ॥
ಕೋಳುವಿಡಿದಣುಗಗನು । ಕೂಲೆಯಹಳೆಂದು ಗವಿ ।
ಮೂಲದೊಳಗಿಡಲು ದುಸ್ಥಿತಿಯ ॥ 314 ॥

ಏನೆಂದರುಹಲೋರ್ವ । ಮಾನವನು ಬಂದವಳ ।
ದೀನಸ್ಥಿತಿಯ ಕಂಡು ದಯದಿ ॥
ತಾನು ಬಿಡಿಸುವೆನೆನಲು ಗುಹೆಯಂತರವನೆಲ್ಲ ।
ವಾ ನಿತಂಬಿನಿಯವನೊಳರುಹೆ ॥ 315 ॥

ಅಷ್ಟರೊಳಗವನ ಬಡಿ । ದಟ್ಟಲೆನ್ನಣುಗನಿಗೆ ।
ಗುಟ್ಟರುಹಿ ತರಲು ಭಯಗೊಳದೆ ॥
ಕುಟ್ಟಿಕೆಡಹುತ ಗುಹೆಯ । ಹುಟ್ಟಡಗಿಸುತ ಸತಿಯ ।
ನೊಟ್ಟುಗೂಡಿಹನು ನಿರ್ಭಯದಿ ॥ 316 ॥

ಅದಕಾಗಿ ಪೋಗಿ ಯಮ । ಸದನಕಟ್ಟುತ ನರನ ।
ಸುದತಿಯನು ತಂದು ಸಂಭ್ರಮದಿ ॥
ಮದುವೆಯಾಗಿರು ಸುಖದಿ । ಮದನನರಗಿಣಿಯವಳ ।
ವಿಧವ ಬಣ್ಣಿಸಲರಿಯೆ ನಿಜದಿ ॥ 317 ॥

॥ **ಭಾಮಿನಿ** ॥

ತಂಗಿಗಾದಪಮಾನಕಾ ಖಳ ।
ಕಂಗಳೊಳು ಕಿಡಿಯುಗುಳುತಲಿ ಮೇ ।
ಣಂಗನೆಯ ವರ್ಣನೆಯ ಕೇಳುತನಂಗಶರಕಳುಕಿ ॥
ತುಂಗಕುಚೆಯಳ ತಹೆನೆನುತ ಶಪ ।

ಥಂಗಳನು ಗೈಯುತ್ತ ತಾನರ ।
ಪುಂಗವನ ಧುರಕಳುಕಿ ಸಮಯನಿರೀಕ್ಷೆಯೊಳಗಿರಲು ॥ 318 ॥

॥ ಕಂದಪದ್ಯ ॥

ಪೊರಟು ಮಹೇಂದ್ರನು ವಿಪಿನವ ।
ಚರಿಪಾತುರದಿಂ ಸತಿಯಂ ಬಿಟ್ಟೈದಿರಲಾ ।
ಪರಿಯಂ ಮರೆಯಿಂದರಿತಾ ।
ದುರುಳಂ ಪಿಡಿದೊಯ್ಯಲ್ಕಾ ಸತಿ ಗೋಳಿಡುತಂ ॥ 319 ॥

॥ ನೀಲಾಂಬರಿ – ರೂಪಕ ॥

ಅಕಟಕಟೆನ್ನಯ ದುರ್ವಿಧಿ । ಸುಖವಿರಲಡ್ಡೈಸಿತೆ ಪ್ರಿಯ ।
ಸಖನೆತ್ತೈದಿದ ಖಳಗೆ ಸಿ । ಲುಕಿದೆನೊ ಹಾ ವಿಧಿಯೆ ॥
ಸುಖದಿಂದರಮನೆಯೊಳಗಿರ । ಲಿಕೆ ಮನವಿಲ್ಲದೆ ಪೊರಟೇ
ತಕೆ ಧರೆಗೈತಂದೆನೊ ದು । ರ್ಮುಖಿಯೊಶದೊಳು ಸಿಲುಕಿ ॥ 320 ॥

ಬಳಲುತಲಿರೆ ಬಂದೆನ್ನನು । ಸಲಹುತ ಖಳನನು ಕೊಲ್ಲುತ ।
ಒಲಿಸಿದನೆನ್ನನು ದೇವಿಯ । ಸಲಹೆಯ ತೆರ ದಯದಿ ॥
ಬಲುತೋಷದೊಳಿರಲಾತನು । ನಿಳಯದೊಳಿಲ್ಲದ ಸಮಯದಿ ।
ಖಳನೆನ್ನನು ಪಿಡಿದೊಯ್ಯುವ । ಸಲಹುವರಾರಿನ್ನು ॥ 321 ॥

ಎನುತಾ ಸತಿ ಹಲವಂಗದಿ । ಘನತರ ರೋದಿಸುತಿರೆ ಖಳ ।
ಕನಿಕರದೋರದೆ ತನ್ನರ । ಮನೆಗೊಯ್ಯುತ ಭರದಿ ॥
ವನಜಾಕ್ಷಿಯನಾಗಲೆ ಬಂ । ಧನದೊಳಗಿಡಲಿತ್ತ ಮಹೇಂ ।
ದ್ರನು ಗುಹೆಗೈತರುತಲಿ ತ । ನ್ನನಿಯಳು ಕಾಣದಿರೆ ॥ 322 ॥

॥ ವಾರ್ಧಕ ॥

ತರುಣಿಯೆತ್ತೈದಿದಳೊ ಯಾರೊಯ್ದರೋ ಖೂಳ ।
ದುರುಳರೆನುತಡವಿಯೊಳಗರಸುತ್ತ ಮರುಗುತ್ತ ।
ತೆರಳುತಿರಲೊಂದು ವೃಕ್ಷದ ಬೇರು ಪದಸೋಂಕೆ ಭರಿತ ಗರ್ಜನೆಯಾಗಲು ॥
ಹರಹರೇನೆನುತ ವಿಸ್ಮಯದೊಳೀಕ್ಷಿಸುತಿರಲು ।
ಧರೆ ಬಿರಿದು ಘೋರರೂಪದೊಳೊಂದು ಭೂತ ಬಂ ।
ದಿರದಿವನನಡಗಟ್ಟಿ ಹಲುಮೊರೆದು ಝೇಂಕಿಸುತಲೊರೆದೀ ತೆರದಿ ಗರ್ಜಿಸಿ ॥ 323 ॥

॥ ಮಾರವಿ – ಏಕತಾಳ ॥

ಯಾರೆಲೊ ತನ್ನಯ । ಗಾರದ ಕೀಲನು ।
ಜಾರಿಸುವಧಮ ಖಳ ॥
ತೋರುವೆ ನಿನಗೆಮ । ನೂರನೆನಲು ಕಿಡಿ ।
ಗಾರುತ ಭಯಗೊಳದೆ ॥ 324 ॥

ಪೇಳ್ದ ಮಹೇಂದ್ರನು । ಬಾಳ್ದಪೆನೆಂಬುವ ।
ತೋಳ್ದರ್ಪವ ನಿಲಿಸಿ ॥
ಕಾಲ್ಧೂಳಿಗೆ ಸಮ । ಹೂಳ್ದಪೆನೆಂದೆನೆ ।
ಕೇಳ್ದೆಂದನು ಸಹಸಿ ॥ 325 ॥

ಬರಿ ಮಾತಾಡುವು । ದಿರಿತಕೆ ಸಲ್ಲದು ।
ಕೊರಳರಿಯುವೆನೆನುತ ॥
ಕರದ ಕಠಾರಿಯ । ತಿರುಹುತ ಮುಂಬರೆ ।
ಪರಿಕಿಸಿ ಗರ್ಜಿಸುತ ॥ 326 ॥

ಪಿಡಿದಾ ಭೂತವ । ಕೆಡುಹುತ ದೇವಿಯ ।
ನೊಡನಭಿಮಂತ್ರಿಸುತ ॥
ತಡೆಗಟ್ಟುತ ಸೆರೆ । ವಿಡಿಯಲು ಭೂತವು ।
ಗಡಗಡ ನಡುಗತಲಿ ॥ 327 ॥

ಕಾಲಡಿಯೊಳು ಬಿದ್ದೆನ್ನನು ಬಿಡಿಸು ಕೃ ।
ಪಾಳುವೆನುತ ಮರುಗಿ ॥
ಗೋಳಿಡುತಿರೆ ಪಿಡಿ । ದಾಲೋಚಿಸಿ ಮಿಗೆ ।
ಪೇಳಿದ ಮನಕರಗಿ ॥ 328 ॥

॥ ವಾರ್ಧಕ ॥

ಪೇಳು ನೀನಾರೆನಲ್ ನಿನ್ನೊಡತಿಯಹ ಮಹಂ ।
ಕಾಳಿಯೇಯೆನ್ನ ಪರಿಪಾಲಿಸುವಳಾ ಮಂತ್ರ ।
ಮೂಲದಿಂದೆನ್ನ ಬಂಧನವ ಬಿಡಿಸೆನೆ ಕರುಣದಾಳಿ ಸೆರೆಯಂ ಬಿಡಿಸಲು ॥

ಪಾಲಿಸೆಂದೆರಗಿ ನಿನ್ನಿಚ್ಛೆಯಹುದರುಹಲನು ।
ಕೂಲನಹೆ ತಾನೆನಲ್ ಸತಿಯ ಪಿಡಿದೊಯ್ದಧಮ ।
ಖೂಳನಿರವರಿತರರುಹೆನಲು ಕೈಮುಗಿದೆಂದುದಾ ಭೂತ ಖಳನಿರವನು ॥ 329 ॥

॥ **ಕೇದಾರಗೌಳ – ಝಂಪೆ** ॥

ಕೇಳು ಸುಗುಣಾಗ್ರೇಸರ । ನಿನ್ನೊಲುಮೆ ।
ಯಾ ಲತಾಂಗಿಗೆ ಬೇಸರ ॥
ತಾಳದಿರು ಖಳನೊರ್ವನು । ಪಾತಾಳ ।
ದಾಲಯದಿ ನೆಲಸಿರ್ಪನು ॥ 330 ॥

ದುರುಳನು ಹಿಡಿಂಬನೆಂದು । ಪೆಸರವನು ।
ತರುಣಿಯಳ ಕದ್ದು ತಂದು ॥
ಸೆರೆಯೊಳಿಟ್ಟಿಹನಾಕೆಯ । ದೇವಿಯೊಲ ।
ವಿರೆ ತರುವೆ ನೀ ನಿಶ್ಚಯ ॥ 331 ॥

ನಿನ್ನನನುದಿನ ಕಾವಳು । ಮಹಕಾಳಿ ।
ಎನ್ನೊಡತಿಯೊಲಿದಿರ್ಪಳು ॥
ಇನ್ನೆಣಿಸದಿರು ದೇವಿಯ । ನೆನೆವಿಷ್ಟ ।
ವನ್ನು ಪಡೆ ಬರುವೆನೊಡೆಯ ॥ 332 ॥

॥ **ಭಾಮಿನಿ** ॥

ಇನಿತು ನುಡಿದಾ ಭೂತವಡಗಲು ।
ಮನದಿ ಯೋಚಿಸುತಾ ಮಹೇಂದ್ರನು ।
ಚಿನುಮಯಾತ್ಮಕಿ ದೇವಿ ಕಾಪಾಡೆಂದು ಪ್ರಾರ್ಥಿಸಲು ॥
ದನುಜಮರ್ದಿನಿಯಾಕೆ ಭಕ್ತನ ।
ನೆನೆವರಿಕೆಯರಿತಾಗ ದರ್ಶನ ।
ವನು ಕೊಡಲು ಸಾಷ್ಟಾಂಗವೆರಗುತ ನುತಿಸಿ ಪೇಳಿದನು ॥ 333 ॥

॥ **ಸಾವೇರಿ – ಅಷ್ಟ** ॥

ಪಾಲಿಸೆನ್ನನು ಮಹಮ್ಮಾಯೆ । ದುಷ್ಟ ।
ಜಾಲಮರ್ದಿನಿ ಶುಭಕಾಯೆ ॥

ನೀಲಕುಂತಳೆ ಕರುಣಾಲಯೆ ನೀನೊಲಿ ।
ದಾ ಲತಾಂಗಿಯನಿತ್ತೆ ಖೂಳನೊಯ್ದಿಹನೀಗ ॥ 334 ॥

ತಾಯೆ ನೀನವನ ಮರ್ದಿಸಲು । ತಕ್ಕು ।
ಪಾಯವನರುಹಿ ಸಾಧಿಸಲು ॥
ಕಾಯಬೇಕೆಂದಡಿಗೆರಗಲ್ಕೆ ಪಿಡಿದೆತ್ತು ।
ತಾ ಯಶೋನಿಧಿಯ ಕೈಗಾಯುವೆನೆಂದಳು ॥ 335 ॥

ಕೊಡುವೆ ಮಂತ್ರಿಸಿ ಕಲ್ಗಳಿದಕೆ । ಕೊಂಡು ।
ನಡೆ ನೀನಿಲ್ಲಿಂದ ಪಶ್ಚಿಮಕೆ ॥
ಒಡನೊಂದು ಹುತ್ತ ತೋರುವುದದರೆಡೆಯೊಳು ।
ಬಿಡದೆ ಕಾದಿಹನೊರ್ವ ಸರ್ಪದಾಕೃತಿಯೊಳು ॥ 336 ॥

॥ ವಾರ್ಧಕ ॥

ಕಂಡು ನೀನಿದರೊಳಿಹ ಕಲ್ಲನೊಂದಂ ತೆಗೆದು ।
ಕೊಂಡವನಿಗಿಡೆ ಮನುಜನಾಗಿ ನಿನ್ನಂ ಪೊತ್ತು ।
ಕೊಂಡು ಖಳನಾಲಯದಿ ಬಿಡುವ ಮತ್ತೊಂದು ಕಲ್ಲಂ ಪಿಡಿದು ಖಳನಂಗಕೆ ॥
ಚಂಡವಿಕ್ರಮಿ ಪೊಡೆಯೆ ನಿದ್ದೆಗೊಳಗಹನಾತ ।
ನಂಡಲೆಯುತರಮನೆಯ ಪುಡುಕಿ ಸತಿಯಂ ಪಿಡಿದು ।
ಕೊಂಡು ಬಾ ಖಳನಳಿವ ನಿನ್ನಿಂದ ಮುನ್ನಕೊಂಡೊಯ್ದವನೆ ತರುವನಿಳೆಗೆ ॥337॥

॥ ಭಾಮಿನಿ ॥

ದುರಿತನಾಶಿನಿಯೆಂದ ತೆರ ನಡೆ ।
ತರುತ ಹುತ್ತವ ಸಾರಿ ಕಲ್ಲನು ।
ಧರೆಗೆಸೆಯೆ ಸರ್ಪಾಕೃತಿಯನುಳಿದಾತನೀತನನು ॥
ಶಿರದಿ ಪೊತ್ತಾ ದುರುಳವಾಲಯ ।
ಕಿರದೆ ತಂದಿಳುಹಲ್ಕೆ ದನುಜನ ।
ಶಿರಕಿಡಲು ಮೈಮರೆದೊರಗೆ ಸತಿಯರಸಿ ಬಳಿಗೈದಿ ॥ 338 ॥

॥ ಕಂದಪದ್ಯ ॥

ಕಡು ವ್ಯಥೆಯೊಳು ಶಿರವೆತ್ತದ ।
ಜಡಜಾಕ್ಷಿಯನೀಕ್ಷಿಸಿ ದ್ವಾರವ ತೆರೆಯುತ ತಾಂ ॥
ಮಡದೀಮಣಿ ಭಯಗೊಳದಿರು ।
ಬಿಡು ದುಗುಡವನೆನುತ ನುಡಿದನವಳೊಳ್ ನಯದಿಂ ॥ 339 ॥

॥ ಸಾವೇರಿ – ರೂಪಕ ॥

(ಆ । ನಂದಮುಖೀ ಸುಂದರಾಂಗಿ ...... ಎಂಬಂತೆ)

ಬಾ । ಬಾರೆ ಸುಗುಣ । ಪಾರೆ ಮೊಗವ । ದೋರೆ ಭಾಮಿನಿ ॥
ದೂರವಿರಿಸು ಭಯವನಿತ್ತ । ಸೇರೆಕಾಮಿನಿ ॥ 340 ॥

ನಿ । ನ್ನಂಗವರಸಿ । ಭಂಗಬಡುತ । ನಂಗಬಾಣದಿ ॥
ತುಂಗಕುಚೆ ಕು । ರಂಗನಯನೆ । ಯಂಗಗಾಣದಿ ॥ 341 ॥

ದೈ । ತ್ಯಾಧಮನು ನಿ । ನ್ನೊಯ್ದು ಪರಿಯ । ನೈದೆ ತಿಳಿವುತ ॥
ಬಾಧೆಗೊಳದೆ ಬಂದೆ ದೇವಿ । ಯಾ ದಯೆದೊಳು ತಾ ॥ 342 ॥

ಸಾ । ಕಿನ್ನು ದುಗುಡ । ವೆಣ್ಣದಿರು ಖ । ಳನ್ನ ಕೊಲ್ಲುತ ॥
ನಿನ್ನನೊಯ್ವೆನೆನಲು ಹರುಷ । ವನ್ನು ತಾಳುತ ॥ 343 ॥

॥ ಭಾಮಿನಿ ॥

ಪ್ರೀತನಪ್ಪುತಲಂಗನೆಯು ಹರು ।
ಷಾತಿಶಯದೊಳಗೆರಗೆ ಮುದ್ದಿಸು ।
ತಾತನುಚಿತೋಕ್ತಿಯಲಿ ಮನ್ನಿಸಲಿತ್ತ ಖಳಪತಿಯು ॥
ಸಾತಿಶಯದಿಂದೆಚ್ಚರಿತು ಬಳಿ ।
ಕಾ ತಳೋದರಿಯೆಡೆಗೆ ಬರೆ ಕಂ ।
ಡೀತನನು ಭೋರ್ಗುಡಿಸುತಡ್ಡವಿಸುತ್ತಲಿಂತೆಂದ ॥ 344 ॥

॥ ಭೈರವಿ – ಏಕ ॥

ಆರೆಲೊ ಎನ್ನರಮನೆಯ । ಒಳ ।
ಸಾರುತ ಸಮ್ಮೋಹನೆಯ ॥
ಸೇರಿ ಸುಖದೊಳಿಹ ಪೋರ । ನಾ ।
ಸೇರಿಪೆ ನಿನಗೆಮನೂರ ॥ 345 ॥

ಘಡ ದನುಜಾಧಮ ಕೇಳು । ಕಂ ।
ಗೆಡೆ ದೌರ್ಜನ್ಯಕೆ ತಾಳು ॥
ಹುಡುಗಿಯ ಕಳವಿಲಿ ತಂದೆ । ನೀ ।
ನೊಡನರಿಯುತ ನಾ ಬಂದೆ ॥ 346 ॥

ಎನ್ನನುಜೆಯು ತಂದಿಟ್ಟಾ । ಸತಿ ।
ಯನ್ನನ್ಯರು ಕೈಗೊಟ್ಟಾ ॥
ಇನ್ನರಿದೆಳೆತಂದಿಹೆನು । ನಿನ ।
ಗಿನ್ನೀಕೆಯ ಹಂಗೇನು ॥ 347 ॥

ಮೋಸದಿ ದುರುಳೆಯ ತಂದು । ಗವಿ ।
ವಾಸದೊಳಿಡೆ ನಾ ಬಂದು ॥
ಈ ಸುದತಿಯನೊಲಿಸಿರುವೆ । ಇವ ।
ಳಾ ಸೆರೆಯನು ಬಿಡಿಸಿರುವೆ ॥ 348 ॥

ಬಿಡು ಬಯಲಾಸೆಯನಿನ್ನು । ಮುಂ ।
ದಡಿಯಿಡೆ ಬಿಡೆ ಶಿರವನ್ನು ॥
ಕಡಿದಿಕ್ಕುವೆನೆಂದೆನುತ । ಅಸಿ ।
ವಿಡಿದೈತರೆ ಗರ್ಜಿಸುತ ॥ 349 ॥

ಘೋರ ಕದನವೆಸಗುತಲಿ । ಕಿಡಿ ।
ಗಾರಿ ಮಹೇಂದ್ರನು ಕನಲಿ ॥
ತೂರಿ ಶಿವೆಯ ಕಲ್ಲೊಂದ । ಖಳ ।
ಗೇರಿಸಲೆಮನೆಡೆ ಸಂದ ॥ 350 ॥

॥ **ವಾರ್ಧಕ** ॥

ದುರುಳನಂ ಮಡುಹೆ ಮುನ್ನಿನ ತೆರದೊಳಾ ನರಂ ।
ಶಿರದಿ ಪೊತ್ತುಭಯರಂ ಧರೆಗೆ ತಂದಿಳುಹಲ್ಕೆ ।
ವರ ಮಹೇಂದ್ರಂ ಸತಿಯವೆರಸಿ ಸುಖದಿಂದಲೊಂದರಮನೆಯನಲ್ಲಿ ರಚಿಸಿ ॥
ತರುಣಿಯೊಡನಾನಂದದಿಂದಿರಲ್ಕೊಂದು ದಿನ ।
ಪರಮಮಿತ್ರನ ಗತಿಯನರಿಯದಾಲೋಚಿಸುತ ।
ಹರಿಣಾಕ್ಷಿಯೊಡನುಸುರೆ ಜಗಸಿಂಹಗಾದ ದುರ್ಧರ ಕಥನವನ್ನೊರೆದಳು॥ 351 ॥

॥ ಭಾಮಿನಿ ॥

ಲಾಲಿಸಂಗಜರೂಪ ನಿನ್ನಯ ।
ಬಾಲಸಖನೊಂದಿನ ವನದಿ ಜಲ ।
ಕೇಳಿಗೈದಾ ಯಕ್ಷಸುತೆ ಕರ್ಣೋರ್ಜ್ವಲೆಯು ಕಂಡು ॥
ಲೀಲೆಯೊಳು ಕೊಂಡೊಯ್ದು ಮನ್ಮಥ ।
ಕೇಳಿಯೊಳಗಿರಲವಳ ಪಿತನರಿ ।
ತಾ ಲತಾಂಗಿಗೆ ನೀತಿಯೊರೆಯಲು ಕೇಳದಿರೆ ತೆರಳಿ ॥ 352 ॥

ಸುರಪನೊಡನಿದನರುಹಲೀರ್ವರ ।
ಕರೆಸಿ ಪೇಳಲ್ಕೊಪ್ಪದಿರೆ ಕು ।
ಕ್ಕುರನ ಜನ್ಮವ ತಾಳೆನುತಲಂಗನೆಗೆ ಶಾಪಿಸುತ ॥
ಧರಣಿಪಾತ್ಮಜನಿಂಗೆ ಶಿಲೆಯಾ ।
ಗಿರು ಸಭಾಲಯ ಬಾಗಿಲೊಳಗೆನು ।
ತೊರೆದು ಶಪಿಸಲ್ಕೀರ್ವರೀಗತಿಯಾದರೆನೆ ಕೇಳಿ ॥ 353 ॥

॥ ನಾದನಾಮಕ್ರಿಯೆ– ಅಷ್ಟ ॥

ಹರಹರಾ ಹಾ ಮಿತ್ರಗಿಂತಾಯ್ತೆ । ಇಷ್ಟು ।
ಬರಿದೆ ನಾ ಬಳಲಿ ನಿಷ್ಫಲವಾಯ್ತೆ ॥
ತರುವೆನೆಂತವನ ಜೀವಿಸಿ ತಾನು । ಎಂದು ।
ಮರುಗುತಿರಲು ಪೇಳ್ದಳಿರವನು ॥ 354 ॥

ಎರೆಯ ನೀನಿದಕೆ ದುಃಖಿಸದಿರು । ಶಾಪ ।
ಹರಿವು ನಿನ್ನಿಂದಲ್ಲದುಭಯರು ॥
ಸರಿಯಾಗರೆಂದಿಂದ್ರನರುಹಿರ್ಪ । ನಿಜ ।
ಪರಿಯ ಮತ್ಪಿತನೆನ್ನೊಳೊರೆದಿರ್ಪ ॥ 355 ॥

ಇನಿತೆಣಿಸದಿರಿದಕರುಹುವೆ । ಇಂದ್ರ ।
ನಣುಗೆ ದುಂದುಭಿಯೆನ್ನುವ ಭಾವೆ ॥
ವನಕೇಳಿಗೈತಹಳವಳನು । ಪಿಡಿ ।
ದನವರತದೊಳಿಡು ಸೆರೆಯನು ॥ 356 ॥

ಮುಂದಣ ಪರಿಯೆನ್ನ ಪಿತನೊಳು । ಪೇಳಿ ।
ಸಂಧಿಸುತಿಂದ್ರನ ಜೊತೆಯೊಳು ॥
ಬಂದು ನಿನ್ನಯ ಸಖನಿರವನು । ಬಿಡಿ ।
ಸಂದವಾಗುವುದರುಹುವೆನಿನ್ನು ॥ 357 ॥

ಎನುತ ಮಾತಾಡುವ ಸಮಯದಿ । ಬಂದು ।
ಶುನಕರೂಪದೊಳೀಕೆ ಸನಿಹದಿ ॥
ಗೋಣಗುಟ್ಟಿ ಬಾಲವಾಡಿಸುತಿರೆ । ಯಕ್ಷ ।
ನಣುಗೆಯೆಂದರಿತೆಂದಳಾ ನೀರೆ ॥ 358 ॥

॥ **ಕಂದಪದ್ಯ** ॥

ಎರೆಯನೆ ಕೇಳಾನೀಗೊರೆ ।
ದಿರುವಂಗನೆ ಶುನಕದ ರೂಪದಿ ಬಂದಿಹಳಂ ॥
ಪೊರೆ ಶಾಪವ ಹರಿಸೆನೆ ಜಲ ।
ವೆರೆಯಲ್ ಮಂತ್ರಿಸಿ ಮುನ್ನಿನ ರೂಪದೊಳೆಂದಳ್ ॥ 359 ॥

॥ **ಸಾಂಗತ್ಯ – ರೂಪಕ** ॥

ಕರುಣಾಸಾಗರ ನಿನ್ನ ದರುಶನದಿಂ ಶಾಪ ।
ಹರಿವುದೆನ್ನುತಲಿಂದ್ರ ಮೊದಲೆ ॥
ಹುರಿಶಾಪವಿತ್ತಿಹನರಸುತಿರ್ದೆನು ಕುಂಭೋ ।
ದರಿಮಿತ್ರೆಯೆನಗವಳಿಂದ ॥ 360 ॥

ತಿಳಿವೆನೆನ್ನುತ ಬರಲೊಲವರಿದರುಹೆ ನಿ ।
ನ್ನೊಳು ಜನ್ಮಸಫಲವಾಯ್ತಿನ್ನು ॥
ಸುಲಭದಿ ತವ ಮಿತ್ರನೊಲವಹುದೆಂದು ಕೈ ।
ಗಳ ಮುಗಿದಾ ಕರ್ಣೋಜ್ವಲೆಯು ॥ 361 ॥

ತೆರಳಲಿತ್ತಲು ಕುಂಭೋದರಿಯಿಂದಲಿಂದ್ರನ ।
ತರಳೆ ಬಂದಿರವರಿತವಳ ॥
ಸೆರೆಯೊಳಿಟ್ಟರಲಿಂದ್ರನರಿಯದಂತಡಗಿಸೆ ।
ಪುರುಹೂತನಿತ್ತಲೊಂದಿನದಿ ॥ 362 ॥

॥ **ಭಾಮಿನಿ** ॥

ಓಲಗದಿ ಕುಳಿತಣುಗೆಯಿಲ್ಲದ ।
ಮೂಲಕಾರಣವರಿತು ಸುರರೊಡ ।
ನಾ ಲತಾಂಗಿಯ ನಿಜವರಿತು ಬಂದರುಹಲೆಂದೆನುತ ॥
ಪೇಳಿ ಚರರಟ್ಟಿರಲು ಚರಿಸುತ ।
ಭೂಲಲನೆಯೊಳು ಸುಳಿವನರಿಯದೆ ।
ಕಾಲಿಗೆರಗುತಲಿಂದ್ರನೆಡೆಗೈತಂದು ಪೇಳಿದರು ॥ 363 ॥

॥ **ಸಾರಂಗ – ಅಷ್ಟ** ॥

ಶಕ್ರ ಪರಾಕು ಶೃಂಗಾರ । ಮೂರ್ತಿ ।
ವಿಕ್ರಮಾಂಕಿತ ಗುಣಶರಧಿಗಂಭೀರ ॥ ಪ ॥

ನಿನ್ನಪ್ಪಣೆಯನಾಂತು ಶಿರದಿ । ಪೊರ ।
ಟಿನ್ನೆಲ್ಲ ಭೂಮಿಸಂಚರಿಸಿ ಸಾದರದಿ ॥
ಕನ್ನೆಯರಸಲೆಲ್ಲೂ ಕಾಣೆ । ಇನ್ನು ।
ಸನ್ನುತಾಂಗನೆ ಪುಸಿಯಲ್ಲ ನಿನ್ನಾಣೆ ॥ 364 ॥

ಧರಣಿಪಾಲಕರರಮನೆಯ । ಮತ್ತಾ ।
ದುರುಳ ರಾತ್ರಿಂಚರರಿಹ ವಿವರಣೆಯ ॥
ಅರಿತೆಲ್ಲ ವನಗಿರಿ ಗುಹೆಯ । ಕಂಡು ।
ಚರಿಸಿದೆವ್ ಹಳ್ಳಕೊಳ್ಳಗಳುಳ್ಳ ನದಿಯ ॥ 365 ॥

ಕೋಪಗೊಳ್ಳದಿರಿನ್ನು ಬರಿದೆ । ನಾವ್ ಕೈ ।
ಲಾಪಪ್ಷರಸಿ ಕಾಣದೊರೆದೆ ॥
ಆಪಜಾಂಬಕಿಯುಳ್ಳ ತಾವ । ಶ್ರೀ ರ ।
ಮಾಪತಿಯೊಬ್ಬನೆ ಬಲ್ಲನೈ ದೇವಾ ॥ 366 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಸುರಪನಿಂತರುಹಲ್ಕೆ ಕೇಳುತ ।
ಮರುಗುತೆಲ್ಲಿಹಳೆಂಬುದರಿಯುವ ।
ಪರಿಯ ಯೋಚಿಸುತಿರಲು ಭೃಂಗಾ ।
ಧರನು ಬಂದು ॥ 367 ॥

ಪಾದಕೆರಗುತಲೆನ್ನ ತನುಜೆಯು ।
ಪೋದಳೆಲ್ಲೆಂದರಿಯೆನೆನೆ ಶಚಿ ।
ಯಾ ಧವನು ಮಿಗೆ ಬೆರಗುವಟ್ಟು ವಿ ।
ನೋದದಿಂದ ॥ 368 ॥

ಏನಿದಚ್ಚರಿ ಸುರಪುರದೊಳಿಹ ।
ಮಾನಿನಿಯರೆತ್ತಡಗುವರೊ ಭೂ ।
ಮಾನವರ ಸೇರಿದರೊ ದನುಜರ ।
ತಾಣವಾಯ್ತೊ ॥ 369 ॥

ಸರಿ ವಿಚಾರಿಸುತೆಲ್ಲ ತನ್ನೊಡ ।
ನರುಹು ಮುಂದಣ ಕಾರ್ಯಕಾನೆನೆ ।
ಮರಳಿ ಭೃಂಗಾಧರನು ಯೋಚಿಸು ।
ತಿರಲಿಕಿತ್ತ ॥ 370 ॥

॥ **ವಾರ್ಧಕ** ॥

ತರುಣಿ ಕುಂಭೋದರಿಯು ಕೈಮುಗಿಯುತೆಂದಳಾ ।
ವರ ಮಹೇಂದ್ರನೊಳೆನ್ನ ಜನಕನಂ ಬಿಟ್ಟು ಬೇ ।
ಸರವಾಯ್ತು ಬಹಳದಿನವೆಂತೆಣಿಸುತಿಹನೊ ಕಂಡರಿತು ಬಹೆನಾ ಗುರುತಿಗೆ ॥
ಬೆರಳಿನುಂಗುರವೀವೆನೆನುತಪ್ಪಣೆಯಗೊಂಡು ।
ತೆರಳಿ ಬರಲಾ ತಂದೆಯೆಡೆಗೆ ಸುತೆಯಂ ಕಂಡು ।
ಹರುಷಾಬ್ಧಿಯೊಳ್ ಮುಳುಗಿ ಕಾರಣವ ಕೇಳಲಿಂತರುಹಿದಳ್ ಸಾಂಗವಾಗಿ ॥371॥

॥ **ಸೌರಾಷ್ಟ್ರ – ಅಷ್ಟ** ॥

ಕರುಣವಿಟ್ಟೆನ್ನೊಳ್ ಬೇ । ಸರಿಸದಾನೆನುವುದ । ತಾತ ಕೇಳು ॥ ಭೂ ಸಂ ।
ಚರಣೆಗೊಂದಿನ ಸಖಿ । ಯರಕೂಡಿಕೊಂಡೈದೆ । ತಾತ ಕೇಳು ॥ 372 ॥

ಚರಿಸುತಿರಲು ಮಾಯಾ । ಹರಿಣವೊಂದಿದಿರೊಳು । ತಾತ ಕೇಳು । ಬರ ।
ಲರಿತು ನಾನದರ ಬೆಂಬತ್ತಲೆನ್ನೊಯ್ದಿತು । ತಾತ ಕೇಳು ॥ 373 ॥

ಗವಿಯೊಂದ ಸೇರಲಾ । ವವಚಿದಾಪತ್ತನು । ತಾತ ಕೇಳು ॥ ಮಿಗ ।
ಎವೆಯಿಕ್ಕು ವನಕಡಗಲು ಘೋರದನುಜೆಯು । ತಾತ ಕೇಳು ॥ 374 ॥

ಬಂದಡಗಟ್ಟಿ ನಿಲ್ಲಲು । ಮೃಗವಲ್ಲಿದು । ತಾತ ಕೇಳು । ಮಾಯ ।
ವೆಂದರಿತೆನು ದಾರಿಗಾಣದಾ ಗುಹೆಯೊಳು । ತಾತ ಕೇಳು ॥ 375 ॥

ಘೋರದನುಜನೊಬ್ಬನೈತಂದು ಪೀಡಿಸೆ । ತಾತ ಕೇಳು ॥ ನಾ ಕೈ ।
ಸೇರದಿರಲು ಹೊಡೆದೈದುವನನುದಿನ । ತಾತ ಕೇಳು ॥ 376 ॥

ಈ ರೀತಿಯೊಳು ಕಷ್ಟಬಡುತಿರಲೊಂದಿನ । ತಾತ ಕೇಳು । ಸುಕು ।
ಮಾರ ಸುಂದರನೊರ್ವನದರಂತೆ ಬರಲಲ್ಲಿ । ತಾತ ಕೇಳು ॥ 377 ॥

॥ **ವಾರ್ಧಕ** ॥

ದುರುಳೆಯವನಂ ಮೋಸದಿಂದ ಗುಹೆಯೊಳಪೊಗಿಸಿ ।
ತೆರಳಲೆನ್ನಂ ಕಂಡು ಸಂಗತಿಯನರಿತೆನಗೆ ।
ಒರೆದು ಧೈರ್ಯವ ದೈತ್ಯ ಬರಲವನ ಸಂಹರಿಸಿ ಕಾಳಿಕಾಂಬೆಯ ನೇಮದಿ ॥
ವರಿಸಲೆನ್ನಂ ಕೂಡಿ ಸುಖದಲಿರಲಿನ್ನೋರ್ವ ।
ದುರುಳನೆನ್ನಂ ಕಾಂತನರಿಯದೊಲು ಕದ್ದೊಯ್ಯೆ ।
ಲರಿತವನ ವಧಿಸಿ ಕರೆತಂದು ಕರ್ಣೋಜ್ವಲೆಯ ಶಾಪಮಂ ಹರಿಸಿರ್ಪನು ॥ 378 ॥

॥ **ಭಾಮಿನಿ** ॥

ವರಮಹೇಂದ್ರನೆನಿಪ್ಪ ಪೆಸರವ ।
ಗಿರುವುದಂಬಿಕೆಯೊಲಿಸಿ ಪಡೆದಿಹ ।
ವರವನವಗೆಣೆಯಿಲ್ಲ ತ್ರೈಭುವನದಲವನ ಸಖನ ॥
ಸುರಪನಾಸ್ಥಾನದಲಿ ಶಿಲೆಯಾ ।
ಗಿರುವುದರಿತಾ ದುಂದುಭಿಯ ಪಿಡಿ ।
ದಿರಿಸಿಹನು ಸೆರೆಯೊಳಗೆ ಸಖನನು ಬಿಡುವ ಪರಿಯೆಂತೋ ॥ 379 ॥

॥ **ಸುರುಟಿ – ಏಕ** ॥

ಮಗಳೆಂದುದ ಕೇಳಿ । ಖಚರನು ।
ಮಿಗಿಲುತ್ಸಹ ತಾಳಿ ॥
ಜಗದೊಳಗಂಥಾ । ಸುಗುಣಪರಾಕ್ರಮಿ ।
ಮಿಗೆ ನಿನ್ನೊಲಿಸಿದ । ಬಗೆಯೊಳಿತಾಯಿತು ॥ 380 ॥

ಶ್ರೀದೇವಿಯೆ ನಿನ್ನ । ಕಷ್ಟದ ।
ಬಾಧೆಯರಿತು ಮುನ್ನ ॥
ಆ ಧರ್ಮಾತ್ಮನ । ನೇ ದಯಗೈದಿಹ ।
ಳಾದುದು ತವ ಭಾ । ಗ್ಯೋದಯವದರಲಿ ॥ 381 ॥

ಸುರಪನವನಸುತೆಯ । ನಿಜಗತಿ ।
ಯರಿಯದತುಳ ವ್ಯಥೆಯ ॥
ಧರಿಸಿಹನವಗಿದ । ನರುಹುತ ಸಖ್ಯಕೆ ।
ವೆರಸಲೆನುತ ಶಚಿ । ಯರಸನೊಳರುಹಿದ ॥ 382 ॥

॥ ಕೇದಾರಗೌಳ – ಝಂಪೆ ॥

ಸುರರೊಡೆಯ ಲಾಲಿಸಿಂದು । ಪೇಳ್ವೆ ಮಮ ।
ತರಳೆ ತಾನೀಗ ಬಂದು ॥
ಒರೆದ ವಿಷಯವನವಳನು । ದುರುಳೆ ವಶ ।
ವಿರಿಸಿಕೊಂಡಿರಲಿವಳನು ॥ 383 ॥

ನರನೋರ್ವ ಬಂದವಳನು । ಸೆರೆಬಿಡಿಸಿ ।
ದುರುಳರನು ತರಿದಳಲನು ॥
ಪರಿಹರಿಸಿ ಒಲಿಸಿ ಸುತೆಯ । ಕೂಡಿ ಸುಖ ।
ವೆರಸಿಹನು ಕೇಳು ಪರಿಯ ॥ 384 ॥

ನಿನ್ನ ಸುತೆ ದುಂದುಭಿಯನು । ಸೆರೆವಿಡಿದು ।
ತನ್ನ ವಶವಿರಿಸಿರ್ಪನು ॥
ಎನ್ನುವ ಸುವಾರ್ತೆ ಕೇಳಿ । ಬಂದು ನಿನ ।
ಗಿನ್ನೊರೆದೆ ಹರುಷ ತಾಳಿ ॥ 385 ॥

॥ ಕಾಂಭೋದಿ – ಝಂಪೆ ॥

ಕೇಳಿ ಸುರಪಾಲ ಕಿಡಿ । ಯೊಳುತೆಂದನು ಸುತೆಯ ।
ಖೂಳ ಮಾನವನು ಸೆರೆವಿಡಿದು ॥
ಗೋಳುಗುಟಿಸುವನೆ ಯಮ । ನಾಲಯವ ಬಯಸಿ ಪುರ ।
ಬಾಲೆಯರ ತೊಡಕವನಿಗಾಯ್ತೆ ॥ 386 ॥

ನಾಚಿಕಿಲ್ಲದೆ ಬಂದು । ನೀಚನನು ಪೊಗಳುತಿಹೆ ।
ಯಾಚೆ ನಡೆ ಮೊಗದೋರಲಿನ್ನು ॥
ಪೇಚಹುದು ನಿನ್ನಣುಗೆ । ಯಾ ಚೆಲುವನನು ಕೂಡಿ ।
ದಾ ಚಮತ್ಕೃತಿಯ ಪೇಳದಿರು ॥ 387 ॥

ಖೂಳನವನನು ಪಿಡಿದು । ಕಾಲನಾಲಯಕಟ್ಟಿ ।
ಬಾಲೆಯನು ಬಿಡಿಸಿ ತಾರದಿರೆ ॥
ಮೂಲೋಕದೊಡೆಯ ಸುರ । ಪಾಲನೇ ತಾನೆನುತ ।
ಲೇಳೆ ಖಚರನು ನಮಿಸುತೆಂದ ॥ 388 ॥

॥ **ನವರೋಜು – ಏಕ** ॥

ಸ್ಯೆರಿಸು ಸ್ಯೆರಿಸು ದೊರೆಯೆ । ಸುಕು ।
ಮಾರನಾರೆಂದರಿಯೆ ॥
ವೀರ ಸುಗುಣ ಗಂ । ಭೀರ ಪರಾಕ್ರಮಿ ।
ತ್ರೈರೂಪಿಣಿ ಮೈ । ದೋರಿಹಳವನಿಗೆ ॥ 389 ॥

ಕಾಳಿಯ ಭಕ್ತಿಯೊಳೊಲಿಸಿ । ದನು ।
ಜಾಳಿಯ ಮರ್ದಿಸಿ ಸಹಸಿ ॥
ಭೂಲೋಕದಿ ಗುಣ । ಶೀಲನೆನಿಸಿ ನಿ ।
ರ್ಮೂಲಗೊಳಿಪ ಖಳ । ಜಾಲವ ಸಚಿವಜ ॥ 390 ॥

ಆತನ ಮಿತ್ರನು ನಿನ್ನ । ಖತಿ ।
ಗಾತು ಶಿಲಾರೂಪವನಾ ॥
ಭೂತಳಪತಿ ಸುತ । ತಾ ತಳೆಯಲು ಬಿಡಿ ।
ಪಾತುರದೊಳು ತವ । ಜಾತೆಯನಿಟ್ಟಿಹ ॥ 391 ॥

॥ **ಭಾಮಿನಿ** ॥

ಸುರಪ ಕೇಳ್ ನಿನ್ನಿಂದ ಶಾಪದೊ ।
ಳಿರುವ ಕರ್ಣೋಜ್ಜ್ವಲೆಯ ಶಾಪವ ।
ಹರಿಸುತಲಿ ನೀನವನ ಸಖ್ಯವವೆರಸಿ ಕರೆತಂದು ॥

ಪರಮಮಿತ್ರನ ಬಿಡಿಸಿ ಕಳುಹಲು ।
ತರಳೆಯನು ಸೆರೆಬಿಡುವ ವೈರವ ।
ಬರಿದೆ ಸಾಧಿಸದೆತ್ನಗೊಳೆ ಸುಖವೆನಲು ನುಡಿಗೊಪ್ಪಿ ॥ 392 ॥

॥ **ವಾರ್ಧಕ** ॥

ಪುರುಹೂತನಾಕ್ಷಣದಿ ಜೊತೆಗೂಡುತಾ ಮಂತ್ರಿ ।
ವರನ ಕುಂಭೋದರಿಯು ಸಹಿತಾ ಮಹೇಂದ್ರನಿರು ।
ತಿರುವಲ್ಲಿ ಬಂದು ಪರಿಚರ್ಯವೆಸಗುತ ದೇವಲೋಕದೆಡೆಗಾ ತರಳನ ॥
ಕರೆತಂದು ಜನಪಜನ ತೋರಲು ಮಹೇಂದ್ರ ಜಲ ।
ವೆರಚೆ ಮಂತ್ರಿಸಿ ಶಿಲಾರೂಪವಡಗಲ್ ತೋಷ ।
ವೆರೆದುಭಯ ಮಿತ್ರರೊಂದಾಗಿ ಬಿಗಿಯಪ್ಪಿ
ಸುಖಶರಧಿಯೊಳಗೋಲಾಡಲು ॥ 393 ॥

॥ **ಸಾಂಗತ್ಯ – ರೂಪಕ** ॥

ಇನಿತುಭಯರು ತೋಷ । ವನಧಿಯೊಳಾಳಿ ತ ।
ಮ್ಮನುಗೊಳಿಸಿರ್ಪ ಕಷ್ಟಗಳ ॥
ನೆನೆಯುತೊಬ್ಬರಿಗೊಬ್ಬರೆನೆ ಕೇಳ್ದು ನರಪಾತ್ಮ ।
ಜನು ಪೇಳ್ದನಾ ಮಂತ್ರಿಸುತಗೆ ॥ 394 ॥

ಪರಮಾಪ್ತ ನೀನೆನಗೋಸ್ಕರ ವಿದ್ಯಾಮಂ ।
ಜರಿಯೊಲಿಸಲ್ಕಿಷ್ಟು ತರದಿ ॥
ಪರಿಪರಿ ಕಷ್ಟಗೊಂಡರು ಎನ್ನ ಮರೆಯದೀ ।
ತೆರ ಸೆರೆಬಿಡಿಸಿ ಜೀವಿಸಿದೆ ॥ 395 ॥

ನಿನ್ನಂಥ ಮಿತ್ರರನಿನ್ನು ಪೊಂದಿಹ ನಾನೇ ।
ಧನ್ಯನಾ ಕಾರಣ ನಿನಗೆ ॥
ಎನ್ನದೇನೀಯಲಿ ವಿದ್ಯಾಮಂಜರಿ ಲಗ್ನ ।
ವನ್ನೀನೆ ಗೈದಿರು ಸುಖದಿ ॥ 396 ॥

ಎನಲದ ಕೇಳಿ ಭೃಂಗಾಧರನೆನ್ನಯ ।
ತನುಜೆಯು ನಿನಗೆಂದು ನುಡಿಯೆ ॥

ಸನುಮತವೆಂದಿಂದ್ರನಣುಗೆಯು ಸಹಿತಯೀ ।
ಜನಪಾತ್ಮಭವಗಾಗಿ ಬೇರೆ ॥ 397 ॥

ಗಂಧರ್ವಕುವರಿಯಳಂ ಧರಣಿಪಸುತ ।
ಗೆಂದು ಮೂವರನೀಯೆ ಕೊಂಡು ॥
ಇಂದ್ರನಾಶೀರ್ವಾದಗೊಂಡಿಳೆಗೈತಂದು ।
ನಿಂದು ನೀಲಾವತಿಪುರದಿ ॥ 398 ॥

॥ **ಭಾಮಿನಿ** ॥

ಧರಣಿಪಾಲಕ ಶೂರಸೇನನ ।
ಪೊರೆಗೆ ಬರೆ ಕಂಡಾರು ನಿನ್ನಯ ।
ಪುರವದೆಲ್ಲಿಯದೇನು ಕಾರಿಯವೆಮ್ಮೊಳೆನೆ ಕೇಳಿ ॥
ಅರುಹಿದನು ನಿನ್ನಾತ್ಮಜೆಯ ಮನ ।
ದಿರವರಿತು ವರಿಸುವಡೆ ಬಂದಿಹೆ ।
ಗುರುತವರುಹುವೆ ಕೊನೆಗೆ ಮನಕೊಡಬಟ್ಟರೆಂದೆನಲು ॥ 399 ॥

॥ **ಕಂದಪದ್ಯ** ॥

ಕೇಳುತಲವನಿಪ ತನ್ನಯ ।
ಬಾಲೆಯ ಕರೆಸುತಲಿವನಿರವರುಹಲ್ಕೊಡನದ ॥
ನಾಲಿಸುತಬಲೆಯು ಪರಿಕಿಸು ।
ತಾಲೋಚಿಸುತೊರೆದಳ್ ಪಿತನೊಳ್ ಮನದಿರಮಂ ॥ 400 ॥

॥ **ಕೇದಾರಗೌಳ – ಅಷ್ಟ** ॥

ತಾತನೆ ಕೇಳಾವನೀತನೀಗೆನ್ನೊಳೆ ।
ಸೋತರೆ ವಿದ್ಯೆಯಲಿ ॥
ನೀತಿದೊರೆದು ವರಿಸುವುದೆಂತೆನಲು ಮಂತ್ರಿ ।
ಜಾತನೆಂದನು ತೋಷದಿ ॥ 401 ॥

ಚಂದನಗಂಧಿ ಕೇಳ್ ಪಿಂದೆ ಹಲವು ವಿಧ ।
ದಿಂದೆನ್ನ ವಿದ್ಯೆಯನು ॥
ಕಂದೆರೆದೀಕ್ಷಿಸಿ ಭ್ರಮಿಸಿಹೆಯದ ಮರೆ ।
ತಿಂದೇನು ಪೊಸದೆಂದನು ॥ 402 ॥

ಯಾಕಿಂಥ ನುಡಿಯೆನ್ನೊಳ್ ಸಾಕುಸುರದಿರು ವಿ ।
ವೇಕವಿಲ್ಲವೆ ನಿನ್ನನು ॥
ನಾ ಕಂಡುದಿದೆ ಪೊಸತೈ ಕುಟಿಲವನಾಡ ।
ದೇ ಕೆಲಸಾರೆಂದಳು ॥ 403 ॥

॥ ವಾರ್ಧಕ ॥

ಬರಿದೆ ದೂರದಿರು ಪಿಂದಕೆ ಕಾಳಿಕಾಲಯದಿ ।
ನಿರುತ ನೀನಡೆಸುತಿಹುದರಿತಾ ಶಿಲಾಪ್ರತಿಮೆ ।
ಯೊರೆದ ಪರಿ ನರಬಲಿಯ ನೀನಿತ್ತಡವನ ಜೀವಿಸಿ ಕಳುಹಿಸಿದನಾವನು ॥
ಪರಮಯತಿಯಾಗಿ ಪೂರ್ವಾಪರವ ನಿನ್ನೊಳರು ।
ಹಿರೆ ಮರೆತೆಯಾ ವೈದ್ಯನಾಗಿ ಶಿರಭಾರಮಂ ।
ಪರಿಹರಿಸಿದವನಾರು ಕಾಮಾಕ್ಷಿಯೆಂಬ ಪೆಸರೊಳು ನಿನ್ನ ಜೊತೆಯೊಳಿರ್ದು ॥404॥

॥ ಭಾಮಿನಿ ॥

ಕುರುಳಬಾಚುತ ತೈಲವೆರಚುತ ।
ಪರಿಪರಿಯ ಜೂಜಾಟದಲಿ ಮನ ।
ಹರುಷಗೊಳಿಸುತಲಿರ್ದುದಕೆ ನೀನಿತ್ತ ಹಾರವನು ॥
ಬೆರಳಮುದ್ರಿಕೆ ಸಹಿತ ನೋಡಿದು ।
ಹೊರತು ಯತಿವರನಾಗಿ ಪಡೆದಿಹ ।
ಗುರುತದುಂಗುರವೆನುತ ತೋರಲು ನಾಚಿ ಭಯದೊಳಗೆ ॥ 405 ॥

॥ ಕೇದಾರಗೌಳ – ಝಂಪೆ ॥

ಮದನಾಂಗ ಲಾಲಿಸಿಂದು । ತವ ಗುರುತ ।
ವಿದನರಿಯದಾದೆ ಹಿಂದು ॥
ಒದಗಿದೆನ್ನಯ ಪುಣ್ಯದಿ । ನೀನೆ ಲಭಿ ।
ಸಿದೆ ದೇವಿಕಾರುಣ್ಯದಿ ॥ 406 ॥

ಸರ್ವಾಪರಾಧ ಮರೆತು । ಕೈವಿಡಿಯ ।
ಲೋರ್ವನಿನ್ನಿಹನೆ ಹೊರತು ॥
ಶರ್ವಾಣಿಸೇವೆಗೈದು । ದಕೆ ನಿನ್ನ ।
ಸೇರ್ವ ಪರಿಯಾಯಿತೊಲಿದು ॥ 407 ॥

ಎಂದಬಲೆಯಾನಂದದಿ । ಪಿತಗೆರಗು ।
ತೆಂದಳಿವ ಪಿಂತೆಸಗಿದೀ ॥
ಸಂದರ್ಭಗಳ ನೋಡಲು । ಮನಸಿವಗೆ ।
ಹೊಂದಿಹುದು ಮೈಗೂಡಲು ॥ 408 ॥

ಸಕಲವಿದ್ಯದೊಳು ಪಿಂತೆ । ಸೋಲಿಸಿಹ ।
ಯುಕುತಿಯಿಂದರಿಯದಂತೆ ॥
ಸುಖದಿ ಕೈಗೊಳಿಪುದಿವಗೆ । ವೈವಾಹ ।
ಮುಖದೊಳೆಂದೆನುತಲೆರಗೆ ॥ 409 ॥

॥ **ಭಾಮಿನಿ** ॥

ತರಳೆಯಾಡಿದ ನುಡಿಗೆ ಭೂಮಿಪ ।
ಹರುಷಗೊಂಡವನರಿತು ಪೂರ್ವಾ ।
ಪರವ ಚಂಪಕಪುರಿಗೆ ಚಾರರ ಕಳುಹಿ ಸಚಿವವನು ॥
ಕರೆಸುತಾ ಬಲದೇವನನು ಸಹಿ ।
ತಿರಲು ಜನಪಾತ್ಮಜಗೆ ಗಂಧ ।
ರ್ವರ ಕುಮಾರಿಕೆಯರು ಸಹಿತ ಬರಲಿತ್ತ ಸುರಪತಿಯ ॥ 410 ॥

ತರಳೆ ದುಂದುಭಿ ಸಹ ಬರಲು ವರ ।
ತರುಣಿ ಕುಂಭೋದರಿಯನೊಡಗೊಂ ।
ಡಿರದೆ ಭೃಂಗಾಧರ ಬರಲು ಸಹಿತೆಲ್ಲರೊಂದಾಗಿ ॥
ತರಳರುಭಯರಿಗುತ್ಸಹದಿ ನಿಜ ।
ಪರಿಣಯವ ಗೈದತುಳ ಹರುಷದಿ ।
ತೆರಳಲಿತ್ತಲು ಸತಿಯರೊಡಗೂಡುತ್ತಲುಭಯತರು ॥ 411 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಅತುಳವಿಭವದಿ ತಮ್ಮ ಸತಿಯರ ।
ಜೊತೆಗೊಳುತ ನಿಜಪುರಕೆ ಬಂದಾ ।
ಪಿತ ಜನನಿಯರು ಸಹಿತ ಸುಖವಿಹ ।
ಕಥೆಯ ಮುದದಿ ॥ 412 ॥

ಯಕ್ಷಗಾನದಿ ಗೈದೆನಿದರನು ।
ಪೇಕ್ಷೆಗೈಯದೆ ಮೆರೆಸುವವರ ಕ ।
ಟಾಕ್ಷದೊಳು ಪೊರೆಯುವಳು ನಿಜದಿ ತ್ರಿ ।
ಯಕ್ಷನರಸಿ ॥ 413 ॥

ತಾಳ ಲಯ ಛಂದಸ್ಸು ಕವಿತೆಯ ।
ಮೂಲವರಿತವನಲ್ಲವಂಬಿಕೆ ।
ಪೇಳಿಸಿದ ತೆರ ಗೈದೆ ತಪ್ಪಿರೆ ।
ಶೀಲರಿದನು ॥ 414 ॥

ಸರಿಪಡಿಸೆಲೆಂದೆರಗುವೆನು ಶಿರಿ ।
ಪುರದ ದೇವಪ್ಪಯ್ಯಶರ್ಮನ ।
ತರಳ ಫಣಿಯಪ್ಪಯ್ಯ ಗೈದಿಹ ।
ಚರಿತೆಯಿದನು ॥ 415 ॥

ಸಾಂಬ ಶಿವ ಸರ್ವೇಶ ದುರಿತಕ ।
ದಂಬಹರ ಸಿರಿಪುರದಿ ನೆಲಸಿಹ ।
ಶಂಭು ಶಿವ ಯಲಗೇಶ ಪೊರೆಯೆನ ।
ಗಿಂಬುಗೊಟ್ಟು ॥ 416 ॥

॥ **ಮಂಗಲಪದ** ॥

ಮಂಗಲಂ ಮಾರಗರ್ವಾಪಹಾರಗೆ ಶಿವಗೆ ।
ಮಂಗಲಂ ಭಸಿತಲೇಪಗೆ ಭೂಪಗೆ ॥
ಮಂಗಲಂ ಭಜಕರಿಷ್ಟಾರ್ಥವೀವಗೆ ಭವಗೆ ।
ಮಂಗಲಂ ಕುಜನವೃಕ್ಷಕುಠಾರಗೆ ॥
ಜಯಮಂಗಲಂ ನಿತ್ಯ ಶುಭಮಂಗಲಂ ॥ 417 ॥

ದುರಿತನಾಶಿನಿಗೆ ಚಂಡಿಗೆ ಕಾಳಿಕಾಂಬಿಕೆಗೆ ।
ವರಮಹೇಂದ್ರನ ಪೊರೆದ ಸರ್ವೇಶೆಗೆ ॥
ದುರುಳಖಳಮರ್ದಿನಿಗೆ ಭಜಕಸುಖವರ್ಧಿನಿಗೆ ।
ಪರತತ್ವರೂಪೆ ನಿಖಿಳಾಧೀಶೆಗೆ ॥
ಜಯಮಂಗಲಂ ನಿತ್ಯ ಶುಭಮಂಗಲಂ ॥ 418 ॥

ದೋಷನಾಶನಿಗೆ ಸರ್ವೇಶ ಜಗದೀಶ ಭವ ।
ನಾಶ ಗೌರೀಶ ನಭಕೇಶ ಶಿವಗೆ ॥
ಈ ಶಿರಿಪುರದೊಳು ನೆಲೆವಾಸವಾಗಿಹ ವೆಂಕ ।
ಟೇಶಸಖನಾದ ಯಲಗೇಶ ದೊರೆಗೆ ॥
ಜಯಮಂಗಲಂ ನಿತ್ಯ ಶುಭಮಂಗಲಂ ॥ 419 ॥

* * * * *

ಶಬ್ದಾರ್ಥಸೂಚಿ

[ಆವರಣದಲ್ಲಿ ಪ್ರಸಂಗಸಂಖ್ಯೆ ಮತ್ತು ಪದ್ಯಸಂಖ್ಯೆಯನ್ನು ಕೊಟ್ಟಿದೆ]

ಅಂಗರೇಕ (3–243) – ನಿಲುವಂಗಿ
ಅಜಸ್ರ (4–78) – ಸತತ
ಅರ್ಭಕ (1–152) – ಮಗು
ಅಶನಿ (4–159) – ಗುಡುಗು
ಅಹಿತಲ್ಪ (1–11) – ಶೇಷಶಾಯಿ
ಆಣ್ಮ (2–19) – ಒಡೆಯ
ಆಮ್ನಾಯ (4–66) – ವೇದ
ಆರಾಮ (4–128) – ಉಪವನ
ಇನಜನೂರು (3–285) – ಯಮನ ಪಟ್ಟಣ
ಇಭವಾಹ (1–134) – ದೇವೇಂದ್ರ
ಉಡೆ (3–156) – ಬಟ್ಟೆ
ಎರೆಯ (1–55) – ಕಾಂತ
ಎಲರಶನ (1–105) – ಶೇಷ, ಬಲರಾಮ
ಕಂಧರ (3–338) – ಕೊರಳು
ಕಪರ್ದಿನಿ (4–108) – ಪಾರ್ವತಿ
ಕಪ್ಪಡ (3–235) – ಬಟ್ಟೆ
ಕಬಳ (3–222) – ತುತ್ತು
ಕರುವಳ (3–52) – ಕರುಗಳನ್ನು ಕಾಯುವವನು
ಕ್ಷಮೆ (1–191) – ಭೂಮಿ
ಕಾಕ (3–381) – ವಕ್ರ
ಕಿರುಕೂಳ (3–233) – ನೀಚ
ಕಿಸಲಯ (4–129) – ತಳಿರು
ಕುಂಭಿ (3–317) – ಆನೆ
ಕುಡ್ಯ (4–126) – ಗೋಡೆ
ಕುರಂಗಾಕ್ಷಿ (1–136) – ಹರಿಣಾಕ್ಷಿ

ಕುಸ್ತರಿಸು (3–171)	–	ಸಂತೈಸು
ಕೈವಾಡ (3–433)	–	ಕುಶಲಕೆತ್ತನೆ
ಗಾಳಿಗೂಳ (3–203)	–	ಸರ್ಪ
ಗೋಕರ್ಣರಾಜ (3–211)	–	ಆದಿಶೇಷ
ಘಸಣಿ (3–376)	–	ಘಾಸಿ
ಚಲನಾತ್ಮಭವ (1–89)	–	ವಾಯುಸಂಭವ, ಭೀಮ
ಜೋದ (3–325)	–	ಮಾವುತ
ಜೊನ್ನ (3–265)	–	ಬೆಳದಿಂಗಳು
ದಂದುಗ (1–83)	–	ತೊಂದರೆ
ದಶನ (4–160)	–	ದಂತ
ದಶಲಪನ (4–165)	–	ದಶಕಂಠ, ರಾವಣ
ದ್ರವಗಲ್ಲು (3–214)	–	ಚಂದ್ರಕಾಂತಶಿಲೆ
ಧ್ವಾಂತಾರಿ (4–55)	–	ಸೂರ್ಯ
ನಯಸರ (3–310)	–	ಇಂಪಾದ ಸ್ವರ
ನಿಟ್ಟೆಲುವು (3–262)	–	ಬೆನ್ನುಮೂಳೆ
ನಿಪ್ಪಸರ (3–372)	–	ರಭಸ
ನಿಶೀಥಿನಿ (4–4)	–	ರಾತ್ರಿ
ನೀರ್ನೇಜಕ (3–231)	–	ಅಗಸ
ಪಕ್ಕೆ (3–203)	–	ಹಾಸುಗೆ
ಪಡಿಗ (3–436)	–	ಸ್ಫಟಿಕ
ಪನ್ನತಿಕೆ (3–386)	–	ಪರಾಕ್ರಮ
ಪಾಕ (3–204)	–	ಮಗು
ಪುಟಭೇದನ (4–28)	–	ವಾದ್ಯವಿಶೇಷ
ಬಾಲಾರ್ಯಮ (3–445)	–	ಬಾಲಸೂರ್ಯ
ಬಿಡೆಯ (4–413)	–	ನಾಚಿಕೆ
ಬೀಡಿಕೆ (3–212)	–	ಬಿಡಾರ
ಬೀಯ (4–268)	–	ನಾಶ
ಬೋಡು (4–137)	–	ತಲೆ

ಮಾವಂತಿಗ (3–320)	–	ಮಾವುತ
ಮಿಸುನಿ (2–31)	–	ಬಂಗಾರ
ಮುಂಜಾಡಿಕೆ (3–386)	–	ಮುಂಭಾಗದ ವಸ್ತ್ರ
ಯಂತೃ (3–326)	–	ನಿಯಂತ್ರಕ
ಯಾತುಧಾನ (4–118)	–	ರಾಕ್ಷಸ
ರವಿಜೆ (3–172)	–	ಯಮುನಾನದಿ
ಲಳಿಗೆ (3–65)	–	ನಳಿಗೆ
ಲುಳಿತ (3–428)	–	ಹನಿಸಿದ
ವಂದಾರು (3–3–29)	–	ವಂದಿಸುವವನು
ವಿಭಾವರಿ (3–103)	–	ರಾತ್ರಿ
ವಿಯದ್ವಾಣಿ (4–269)	–	ಆಕಾಶವಾಣಿ
ಸೊಲ್ಮಡದಿಯಾಣ್ಮ (3–385)	–	ವಾಗ್ದೇವಿಯ ಗಂಡ, ಬ್ರಹ್ಮ
ವಿನತಜ (1–181)	–	ಗರುಡ
ವೇಷ್ಟಿಸು (3–301)	–	ಸುತ್ತುವರಿಯು
ಶಾಲೂರ (4–100)	–	ಕಪ್ಪೆ
ಸಸಿಮುಖಿ (3–254)	–	ಚಂದ್ರಮುಖಿ
ಹಸುಗೆ (1–8)	–	ಪಾಲು
ಹಿಮಾಂಶು (3–264)	–	ಚಂದ್ರ

* * * * *

ರಾಜ್ಯಪ್ರಶಸ್ತಿ ಪುರಸ್ಕೃತ
ಶಿರೂರು ಫಣಿಯಪ್ಪಯ್ಯ
(ಕಿರುಪರಿಚಯ)

ಜನನ : 06 ಜುಲೈ 1918

ನಿಧನ : 12 ಮಾರ್ಚ್ 2004

ತಂದೆ–ತಾಯಿ : ದೇವಪ್ಪಯ್ಯ ಮತ್ತು ಗೌರಮ್ಮ

ಹೆಂಡತಿ : ಗಿರಿಜಾ

ಮಕ್ಕಳು : ದೇವಪ್ಪಯ್ಯ, ಪರಮೇಶ್ವರಯ್ಯ, ಪ್ರಭಾಕರಯ್ಯ, ಉಮೇಶ, ರಮೇಶ (ಪುತ್ರರು) ಶಕುಂತಳಾ (ಪುತ್ರಿ)

ರಚಿಸಿದ ಯಕ್ಷಗಾನ ಪ್ರಸಂಗಗಳು: ಶ್ರೀಕೃಷ್ಣಗಾರುಡಿ, ಮಹೇಂದ್ರವಿಜಯ, ನಹುಷೋದ್ಭವ, ಮದಾಲಸಾ ಪರಿಣಯ, ವಾಜಿಗ್ರಹಣ, ಸಗರಾಶ್ವಮೇಧ, ಅಮೃತಾಪಹರಣ, ಶ್ವೇತಚಂದ್ರಿಕಾ, ವೀರವರ್ಮಕಾಳಗ, ನೀಲಧ್ವಜಕಾಳಗ, ಭೂಮಿಕಾಪರಿಣಯ, ಭ್ರಮರವೇಣಿಕಲ್ಯಾಣ, ಪೌಲೋಮಚರಿತ್ರೆ, ಸರ್ಪಾಧ್ವರ, ಅಬ್ಯಾಡಿ ಕ್ಷೇತ್ರಮಹಾತ್ಮೆ. (ಒಟ್ಟು 15 ಪ್ರಸಂಗಗಳು)

ಪ್ರಶಸ್ತಿ–ಪುರಸ್ಕಾರಗಳು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯಪ್ರಶಸ್ತಿ (2001),
ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ಹಟ್ಟಿಯಂಗಡಿ.(1997)
ದಕ್ಷಿಣಕನ್ನಡ ಜಿಲ್ಲಾ ಕರಾವಳಿ ಉತ್ಸವ ಸನ್ಮಾನ, (2000).

ಹವ್ಯಾಸ : ಯಕ್ಷಗಾನ ಭಾಗವತಿಕೆ, ಮೃದಂಗ ಕಟ್ಟುವುದು, ಮೃದಂಗ ನುಡಿಸುವಿಕೆ, ನೃತ್ಯಶಿಕ್ಷಣ ನೀಡುವಿಕೆ, ಮಣ್ಣಿನ ಗಣಪತಿ ರಚನೆ, ಮದುವೆ ಮಂಟಪರಚನೆ ಇತ್ಯಾದಿ ಕೌಶಲ, ಗಿಡಮೂಲಿಕೆ ಔಷಧಿ ನೀಡಿಕೆ, ಜ್ಯೋತಿಷ್ಯ, ತಾಳೆಗರಿ ಓದುವುದು ಮತ್ತು ಯಕ್ಷಗಾನ ಪ್ರಸಂಗ ಸಂಗ್ರಹ.

* * * * *



ಶಿರೂರು ಫಣಿಯಪ್ಪಯ್ಯನವರ ಶ್ರೀ ಕೃಷ್ಣಗಾರುಡಿ ಒಟ್ಟು 203 ಪದ್ಯಗಳಿರುವ ಪ್ರತಿಭಾಪೂರ್ಣ ಪ್ರಸಂಗ. ವಿನೂತನ ಕಥಾಹಂದರ, ಸನ್ನಿವೇಶ ರಮ್ಯತೆ , ರಸವೈವಿಧ್ಯ, ಸಾಹಿತ್ಯ ಸೌಂದರ್ಯ, ಸುಲಲಿತವಾದ ಪದ್ಯಬಂಧಗಳು ಈ ಪ್ರಸಂಗದ ಮಹಿಮೆ. ಕವಿಯು ಸ್ವಯಂ ಭಾಗವತರಾದುದರಿಂದ ಪದ್ಯಗಳ ರಚನೆಯಲ್ಲಿ ಸಂಗೀತ ಸಾಹಿತ್ಯಗಳ ಸಮಾಮೇಲನ ಸಮುಚಿತವಾಗಿ ಮೂಡಿ ಬಂದಿದೆ.

ಜಾನಪದ ಲೋಕದ ಸಂಕೀರ್ಣಕಥಾ ವರ್ಗಕ್ಕೆ ಸೇರುವ ಮಹೇಂದ್ರವಿಜಯ ಹೊಸಮಾದರಿಯ ಪ್ರಸಂಗಗಳ ಕಕ್ಷೆಯಲ್ಲಿ ಕಾಣಿಸಿಕೊಳ್ಳುವ ಮುಖ್ಯಕೃತಿ. ಪೂರ್ವಕವಿಗಳ ಪದ್ಯ ಬಂಧಗಳನ್ನೇ ಹೋಲುವ ಸುಂದರರಚನೆಗಳನ್ನು ಹೆಣೆಯುವಲ್ಲಿ ವಿಶೇಷ ಒಲವನ್ನು ತೋರುವ ಕವಿ ಹಟ್ಟಿಯಂಗಡಿ ರಾಮ ಭಟ್ಟ, ಮುದ್ದಣ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮುಲ್ಕಿ ರಾಮಕೃಷ್ಣಯ್ಯ ಮುಂತಾದವರ ಪ್ರಭಾವ, ಪ್ರೇರಣೆಗೆ ಒಳಗಾಗಿರುವುದು ಅಲ್ಲಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ಹಟ್ಟಿಯಂಗಡಿ ರಾಮಭಟ್ಟರ ಬಿಲ್ಲಹಬ್ಬ ಕಂಸವಧೆ ಭಾಗವತ ಪುರಾಣವನ್ನು ಆಧರಿಸಿದ ಅತ್ಯುತ್ತಮ ಪ್ರಸಂಗ ಕೃತಿ.ಭಾಷಾ ಶೈಲಿ, ಛಂದೋಬಂಧ,ಕಾವ್ಯಮೌಲ್ಯಗಳ ದೃಷ್ಟಿಯಿಂದ ಇದನ್ನು ಕವಿಯ ಉತ್ಕೃಷ್ಟ ರಚನೆ ಎನ್ನಬೇಕು. ಅಪೂರ್ವವಾಗಿ ತಾರಾವಳಿ ವೃತ್ತ ದಂಡಕ ಎಂಬ 29 ಸಾಲುಗಳ ಛಂದೋಬಂಧವನ್ನು ಈ ಪ್ರಸಂಗದಲ್ಲಿ ಕಾಣಬಹುದು.

ರತ್ನಾಪುರ ರಾಮ ಬರೆದ ಮೂಲಕಾಸುರ ಕಾಳಗ ಪ್ರಸಂಗದಲ್ಲಿ ಕಾವ್ಯದ ಮನೋಹರತೆ ಗಮನಾರ್ಹ ವಾಗಿದೆ.ಹಲವಾರು ವಾರ್ಧಿಕ ಷಟ್ಪದಿಗಳು ಅನುಪ್ರಾಸ ವೈಭವದಿಂದ ಮನಸೆಳೆಯುತ್ತವೆ. ಈ ಕವಿಯು ಬಳಸಿದ ವೈವಿಧ್ಯಪೂರ್ಣವಾದ ಯಕ್ಷಗಾನ ಛಂದೋಬಂಧಗಳು ಪ್ರಸಂಗದ ರಸಾಭಿವ್ಯಂಜನೆಗೆ ಪೂರಕವಾಗಿವೆ. ಕೆಲವು ಸೃಜನಶೀಲವಾದ ವಿನ್ಯಾಸಗಳು ರಂಗದಲ್ಲಿ ಚೇತೋಹಾರಿಯಾದ ಅನುಭವಕ್ಕೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ಈ ನಾಲ್ಕು ಪ್ರಸಂಗಗಳ ಸಂಪುಟವು ಯಕ್ಷಗಾನ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ ತುಂಬಾ ಸಹಕಾರಿಯಾಗಿದೆ.

–ಡಾ ಕಬ್ಬಿನಾಲೆ ವಸಂತ ಭಾರದ್ವಾಜ್ (ಮುನ್ನುಡಿಯಿಂದ)

ಫಣಿಗಿರಿ ಪ್ರತಿಷ್ಠಾನ
ಶಿರೂರು